ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಸೆಪ್ಟೆಂಬರ್ 10 ಶನಿವಾರ 2022

₹4

ಸಂಪುಟ: 43 | ಸಂಚಿಕೆ: 145 | ಪುಟಗಳು: 12

ದೂರವಾಣಿ: 2496520, 2496521, 2496526, 2496527, 2496528. ಜಾಹೀರಾತು: 2496522, 2496523

ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com ಜಾಹೀರಾತು: ad@mysurumithra.com



PARISHRAMA NEET ACADEMY

NEET 1 Year Long Term Program

The Parishrama Long Term NEET Course is designed and devised to provide the student with a complete learning experience. During the course, our students are not only trained in the subject but also develop self-confidence and self-belief, which goes a long way in helping them clear the biggest exams of their life.

Our integrated classroom program helps the aspirants to develop advanced problem-solving skills. With comprehensive lectures and sessions from our elite faculty, every aspirant certainly receives a learning experience that is both exciting and loaded with information. This comprehensive course includes classroom interaction led by teachers and professors with thorough expertise in their respective fields of study. These lectures are followed by closely monitered study hours and insighful doubt clarification sessions during which the students are encouraged to clear even the smallest doubts which they may have.


Join Parishrama & help us get you closer to your dream!


Separate Hostel for Boys & Girls


Focus on Basics, Emphasis on Results


Regular Doubt Clearing Sessions


Spacious & Well Equipped Clasrooms



Well Researched Study Material


Determined & Dedicated Team


Hygienic & Healthy Food


Daily & Weekly Cumulative Tests

SAMASTH N – NEET SCORE-654
SANJANA T R – NEET SCORE-650
RAMESH B PUJERI – NEET SCORE-645
ABHISHEK REDDY – NEET SCORE-635
DIVAKAR K – NEET SCORE-631
KAVANAS KUMAR – NEET SCORE-621
RANGANATH G – NEET SCORE-620
NIHARIKA M – NEET SCORE-620
PRAGATHI A – NEET SCORE-616
KEERTHI KUMAR – NEET SCORE-615
HITHESH GOWDA P – NEET SCORE-615
ABHISHEK S – NEET SCORE-614
RACHANA D – NEET SCORE-613
AKSHAY KUMAR N – NEET SCORE-612
MANOJ H – NEET SCORE-612
MOHAMMED UZAIR – NEET SCORE-609
MANJARI – NEET SCORE-607
HITAISHINI H N – NEET SCORE-605
NANDISH KUMAR – NEET SCORE-605
CHINMAYA REDDY – NEET SCORE-604
PUNYA B C – NEET SCORE-601
CHANDRE GOWDA – NEET SCORE-600
GIRISH M – NEET SCORE-600
PAVAN D R – NEET SCORE-600
PRUTHVI RAJ – NEET SCORE-600
VARUN REDDY – NEET SCORE-600

TOPPERS OF MYSURU

PRAJWAL K.R – NEET SCORE-565
CHANDANA SURESH – NEET SCORE-554
ANVITHA B – NEET SCORE-545
DIGVIJAY – NEET SCORE-526
SATVIKA K SHIKAR – NEET SCORE-510
HARSHITHA M – NEET SCORE-509

TOPPERS OF MANDYA

VANDANA PRIYA H N – NEET SCORE-548
JAGADISH G – NEET SCORE-547
REETHUSHREE N S – NEET SCORE-518
SUCHITRA S D – NEET SCORE-510

TOPPERS OF HASSAN

NISARGA GD – NEET SCORE-585
SRINIDHI V – NEET SCORE-546
PRAJWAL D . M – NEET SCORE-542
STEVEN SOLOMAN – NEET SCORE-540
ABHISHEK KS – NEET SCORE-528
AMULYA JAGADESH – NEET SCORE-527

TOPPERS OF RAMANAGARA

SUHAS B M – NEET SCORE-564
ROHAN Y – NEET SCORE-534
THULASIRAM – NEET SCORE-527
SANGEETHA R – NEET SCORE-506

TOPPERS OF CHIKKAMAGALURU

Spoorthi M Y – NEET SCORE-615
Dileep J R – NEET SCORE-580
Mithun Garge – NEET SCORE-563
Siddanth MP – NEET SCORE-551
Rakshitha H V – NEET SCORE-533
Madhu TR – NEET SCORE-529
Pavithra K – NEET SCORE-507
Rajesh H H – NEET SCORE-506
Shresta R – NEET SCORE-501

www.parishramaneetacademy.com | Parishrama NEET Academy | parishramaneet | 080-45912222

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಸೆಪ್ಟೆಂಬರ್ 10 ಶನಿವಾರ 2022

ಸಂಪುಟ: 43 | ಸಂಚಿಕೆ: 145 | ಪುಟಗಳು: 12

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಸೆ.19ಕ್ಕೆ ಬ್ರಿಟನ್ ರಾಣಿ 2ನೇ ಎಲಿಜಬೆತ್ ಅಂತ್ಯಕ್ರಿಯೆ



ಲಂಡನ್, ಸೆ.9– ನಿನ್ನೆ ವಯೋಸಹಜ ಕಾಯಿಲೆಯಿಂದ ಮೃತಪಟ್ಟ ಬ್ರಿಟನ್ ರಾಣಿ ಎರಡನೇ ಎಲಿಜಬೆತ್ ಅವರ ಅಂತ್ಯಕ್ರಿಯೆ ಸೆ.19 ರಂದು ಸೆಂಟ್ರಲ್ ಲಂಡನ್‌ನ ವೆಸ್ಟ್ ಮಿನಿಸ್ಟರ್ ಅಬ್ಬೆಯಲ್ಲಿ ಭಾರೀ ಜನಸ್ತೋಮದ ನಡುವೆ ನಡೆಯುವ ಸಾಧ್ಯತೆಯಿದೆ.

ಎರಡು ನಿಮಿಷ ಮೌನಾಚರಣೆಯ ಮೂಲಕ ರಾಣಿಯ ಪಾರ್ಥಿವ ಶರೀರ ಇರಿಸಿದ ಶವಪೆಟ್ಟಿಗೆಯನ್ನು ಫಿರಂಗಿಯಲ್ಲಿ ಅಬ್ಬೆಗೆ ಕೊಂಡೊಯ್ಯುವುದರಿಂದ ರಾಜಮನೆತನದ ಹಿರಿಯ ಸದಸ್ಯರು, ಅದರ ಹಿಂದೆ ನಡೆಯುವ ಸಾಧ್ಯತೆಯಿದೆ. ನಂತರ ರಾಣಿಯ ಶವಪೆಟ್ಟಿಗೆಯನ್ನು ವಿಂಡ್ಸರ್ ಕ್ಯಾಸಲ್‌ಗೆ ಕೊಂಡೊಯ್ದು, 6ನೇ ಕಿಂಗ್ ಜಾರ್ಜ್ ಸ್ಮಾರಕ ಪ್ರಾರ್ಥನಾ ▶ 5ನೇ ಪುಟಕ್ಕೆ

ಸಿಎಂ ಬೊಮ್ಮಾಯಿಗೆ 8 ಖಾತೆ ಕಾರ್ಯಭಾರ



ಬೆಂಗಳೂರು, ಸೆ.9– ಸಿಎಂ ಬಸವರಾಜ ಬೊಮ್ಮಾಯಿ ಸಂಪುಟ ಸಂಕಟಕ್ಕೆ ಮುಕ್ತಿ ಯಾವಾಗ ಎಂಬ ಪ್ರಶ್ನೆ ಮೂಡಿದೆ. ಬಸವರಾಜ ಬೊಮ್ಮಾಯಿ ಹೆಗಲ ಮೇಲೆ ಮತ್ತಷ್ಟು ಹೊರೆ ಹೆಚ್ಚಾಗುತ್ತಿದೆ. ಸಚಿವ ಕೆಎಸ್ ಈಶ್ವರಪ್ಪ ರಾಜೀನಾಮೆಯಿಂದ ಪಂಚಾಯತ್ ರಾಜ್ ಮತ್ತು ಗ್ರಾಮೀಣಾಭಿವೃದ್ಧಿ ಖಾತೆ ಸೇರಿದಂತೆ ಉಮೇಶ್ ಕತ್ತಿ ನಿಧನದಿಂದ ಅರಣ್ಯ ಖಾತೆಯ ಜವಾಬ್ದಾರಿಯು ಸಿಎಂಗೆ ಲಭಿಸಿದೆ.

ಬಸವರಾಜ ಬೊಮ್ಮಾಯಿ ಪ್ರಸ್ತುತ 8 ಪ್ರಮುಖ ಖಾತೆಗಳನ್ನು ನಿರ್ವಹಿಸುತ್ತಿದ್ದಾರೆ. ಹಣಕಾಸು, ಬೆಂಗಳೂರು ನಗರಾಭಿವೃದ್ಧಿ, ಗುಪ್ತಚರ, ಸಂಪುಟ ವ್ಯವಹಾರ, ಡಿಪಿಎಆರ್ ಖಾತೆಗಳು ಮೊದಲಿನಿಂದಲೂ ಸಿಎಂ ಬಳಿಯಲ್ಲೇ ಉಳಿದುಕೊಂಡಿದೆ.

ಕನಕಪುರ–ಸೇಲಂ
ಕರ್ನಾಟಕದ ಅತೀ ಉದ್ದದ
ಸುರಂಗ ಮಾರ್ಗ

● ಒಂಭತ್ತು ಕಿಲೋಮೀಟರ್ ಸುರಂಗ ಮಾರ್ಗವಿದು ● ಯೋಜನೆಯ ಸರ್ವೇ ಕಾರ್ಯ ಆರಂಭ ● ಬಂಡೀಪುರ, ನಾಗರಹೊಳೆ ಅಭಯಾರಣ್ಯದಲ್ಲಿ 22 ಕಿ.ಮೀ. ಸುರಂಗ ಮಾರ್ಗರಕ್ಕೆ ಕೇರಳ ಸಮ್ಮತಿ

ಬೆಂಗಳೂರು, ಸೆ. 9(ಕೆಎಂಶಿ)–ಕರ್ನಾಟಕದ ಅತೀ ಉದ್ದದ ರೈಲ್ವೇ ಸುರಂಗ ಮಾರ್ಗ ನಿರ್ಮಾಣಕ್ಕೆ ರಾಜ್ಯ ಸರ್ಕಾರ ಸಮ್ಮತಿಸಿದೆ.



ಇಂದಿಲ್ಲಿ ಸುದ್ದಿಗಾರರಿಗೆ ಈ ವಿಷಯ ತಿಳಿಸಿದ ಮೂಲ ಸೌಕರ್ಯ ಸಚಿವ ವಿ.ಸೋಮಣ್ಣ ಕನಕಪುರದಿಂದ ತಮಿಳುನಾಡಿನ ಸೇಲಂಗೆ ಹೊಸ ರೈಲು ಸಂಪರ್ಕ ಕಲ್ಪಿಸುವ ಯೋಜನೆಯಡಿ ಈ ಸುರಂಗ ಮಾರ್ಗ ಬರಲಿದೆ ಎಂದರು. ಯೋಜನೆಗೆ ಸರ್ವೇಕಾರ್ಯ ಆರಂಭಗೊಂಡಿದ್ದು, ಕನಕಪುರ–ಮಳವಳ್ಳಿ–ಕೊಳ್ಳೇಗಾಲ–ಯಳಂದೂರು–ಈರೋಡ್ ಮೂಲಕ ಸೇಲಂಗೆ ಸಂಪರ್ಕ ಕಲ್ಪಿಸುವ ಯೋಜನೆ ಇದಾಗಿದೆ.

ಚಾಮರಾಜನಗರ ಜಿಲ್ಲೆಯ ಯಳಂದೂರಿನಿಂದ ತಮಿಳುನಾಡಿನ ಈರೋಡ್ ನಡುವೆ ಅರಣ್ಯ ಪ್ರದೇಶ ಇರುವುದರಿಂದ ಪರಿಸರಕ್ಕೆ ಹಾನಿಯಾಗದಂತೆ ನೋಡಿಕೊಳ್ಳಲು ನೆಲದಡಿ ಸುರಂಗ ಮಾರ್ಗದ ಮೂಲಕ ಒಂಭತ್ತು ಕಿಲೋಮೀಟರ್‌ಗಳಷ್ಟು ದೂರ ರೈಲು ಸಂಚರಿಸಲಿದೆ. ರಾಜ್ಯದ ಮೊಟ್ಟಮೊದಲ ▶ 5ನೇ ಪುಟಕ್ಕೆ



ಇಂದು ದೊಡ್ಡಬಳ್ಳಾಪುರದಲ್ಲಿ ಬಿಜೆಪಿ ಜನಸ್ಪಂದನಾ ಸಮಾವೇಶ



● ಮೂರು ಬಾರಿ ಮುಂದೂಡಲ್ಪಟ್ಟಿದ್ದ ಕಾರ್ಯಕ್ರಮ; ವಿಘ್ನ ನಿವಾರಣೆಗೆ ಹೋಮ ಹವನ ● 'ಜನೋತ್ಸವ' ಬದಲು 'ಜನಸ್ಪಂದನಾ' ಎಂದು ಬದಲಾವಣೆ ● ಬಿಜೆಪಿ ಅಧ್ಯಕ್ಷ ನಡ್ಡಾ ಬದಲು ಕೇಂದ್ರ ಸಚಿವೆ ಸ್ಮೃತಿ ಇರಾನಿ ಭಾಗಿ ● ಶಕ್ತಿ ಪ್ರದರ್ಶನಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸಿದ್ಧತೆ

ಬೆಂಗಳೂರು, ಸೆ.9(ಕೆಎಂಶಿ)–ಬಿಜೆಪಿ ನೇತೃತ್ವದ ಸರ್ಕಾರಕ್ಕೆ ಮೂರು ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ಶನಿವಾರ (ಸೆ.10) ದೊಡ್ಡ ಬಳ್ಳಾಪುರದಲ್ಲಿ ಹಮ್ಮಿಕೊಂಡಿರುವ ಜನಸ್ಪಂದನಾ ಕಾರ್ಯಕ್ರಮದಿಂದ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ದೂರ ಉಳಿದಿದ್ದಾರೆ. ರಾಷ್ಟ್ರೀಯ ಅಧ್ಯಕ್ಷರನ್ನು ಕರೆತರಲು ಸಿಎಂ ಬಸವರಾಜ ಬೊಮ್ಮಾಯಿ ಸೇರಿದಂತೆ ರಾಜ್ಯದ ನಾಯಕರು ಕಡೆಗಳಿಗೆಯವರೆಗೂ ನಡೆಸಿದ ಯತ್ನ ಫಲಪ್ರದವಾಗಲಿಲ್ಲ. ನಡ್ಡಾ ಬದಲು ಕೇಂದ್ರ ಸಚಿವೆ ಸ್ಮೃತಿ ಇರಾನಿ ಭಾಗವಹಿಸಲಿದ್ದಾರೆ.

ಮುಂಬರುವ ವಿಧಾನಸಭಾ ಚುನಾವಣೆ ಪೂರ್ವ ತಯಾರಿ ಸಮಾವೇಶವೆಂದೇ ಇದನ್ನು ಬಿಂಬಿಸಲಾಗಿದೆ. ಸಮಾವೇಶ ಯಶಸ್ಸಿಗಾಗಿ ಮುಖ್ಯಮಂತ್ರಿಯವರು ತಮ್ಮ ಸಂಪುಟದ ಸಹೋದ್ಯೋಗಿಗಳ ದಂಡನ್ನೇ ನಿಯೋಜಿಸಿದ್ದಾರೆ. ಸತತ ಮೂರು ಬಾರಿ ಜನೋತ್ಸವ ಮುಂದೂಡಿಕೆಯಾದ ಹಿನ್ನೆಲೆಯಲ್ಲಿ ಇದಕ್ಕೆ ಅಂಟಿದ್ದ ಕಳಂಕಗಳನ್ನು ಹೋಗಲಾಡಿಸಲು ಸಚಿವ ಡಾ. ಕೆ. ಸುಧಾಕರ್ ಸಮಾವೇಶ ನಡೆಯುವ ವೇದಿಕೆಯಲ್ಲಿ ಹೋಮ ಹವನ ನಡೆಸಿದ್ದರು. ಈ ಹಿಂದೆ ಕಾರಣಾಂತರಗಳಿಂದ ಸಮಾವೇಶ ಮುಂದೂಡಲ್ಪಟ್ಟಿತ್ತು ಜನೋತ್ಸವ ಎಂಬ ಹೆಸರನ್ನು ಬದಲಿಸಿ, ಜನಸ್ಪಂದನಾ ಎಂಬ ಹೊಸ ಹೆಸರು ಇಟ್ಟು, ಪೂಜೆ ಪುನಸ್ಕಾರ ಮಾಡಿ, ಸಮಾವೇಶದ ಯಶಸ್ಸಿಗೆ ತಯಾರಿ ನಡೆದಿದೆ. ಸಮಾವೇಶಕ್ಕೆ ರಾಷ್ಟ್ರೀಯ ನಾಯಕರನ್ನು ಕರೆತರುವ ಪ್ರಯತ್ನ ಫಲಪ್ರದವಾಗಲಿಲ್ಲ. ಈ ಸಮಾವೇಶ ಮುಂದಿನ ವಿಧಾನಸಭಾ ಚುನಾವಣೆಗೆ ಕಹಳೆ ಊದುವ ವೇದಿಕೆಯಾಗಲಿದೆ. ಸಮಾವೇಶಕ್ಕೆ ಎರಡರಿಂದ ಐದು ಲಕ್ಷ ಕಾರ್ಯಕರ್ತರನ್ನು ಕರೆತರುವ ಯತ್ನ ನಡೆದಿದೆ.

ಕನಿಷ್ಠ ವೇತನ ನೀಡಿ, ಇಲ್ಲವೇ ಶಿಸ್ತುಕ್ರಮ ಎದುರಿಸಿ: ವಿವಿಧ ಇಲಾಖೆಗಳಿಗೆ ಆದೇಶ

ಬೆಂಗಳೂರು, ಸೆ.9– ಸರ್ಕಾರ ನಿಗದಿಪಡಿಸಿರುವ ಇತ್ತೀಚಿನ ಕನಿಷ್ಠ ವೇತನ ಪ್ರಕಾರ ಹೌಸ್ ಕೀಪಿಂಗ್, ಸೆಕ್ಯುರಿಟಿ ಗಾರ್ಡ್, ಮಲಗುಂಡಿ ಸ್ವಚ್ಛಗೊಳಿಸುವ ಸಫಾಯಿ ಕರ್ಮಚಾರಿಗಳು ಮತ್ತು ಇತರ ಗುತ್ತಿಗೆ ನೌಕರರಿಗೆ ವೇತನ ನೀಡಬೇಕೆಂದು ರಾಜ್ಯ ಕಾರ್ಮಿಕ ಇಲಾಖೆ ಎಲ್ಲಾ ಇಲಾಖೆಗಳು, ಸಾರ್ವಜನಿಕ ವಲಯಗಳು, ವಿಶ್ವ ವಿದ್ಯಾಲಯಗಳು, ನಿಗಮ ಮತ್ತು ಮಂಡಳಿಗಳಿಗೆ ಸುತ್ತೋಲೆ ಹೊರಡಿಸಿದೆ. ಒಂದು ವೇಳೆ ಸರ್ಕಾರದ ನಿಯಮ ಪ್ರಕಾರ ವೇತನ ನೀಡುವಲ್ಲಿ ವಿಫಲವಾದರೆ ಸಂಬಂಧಪಟ್ಟವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಲಾಗಿದೆ.

ಸರ್ಕಾರದ ವಿವಿಧ ಇಲಾಖೆಗಳು ಮತ್ತು ಸರ್ಕಾರದ ಅಡಿಯಲ್ಲಿ ಕೆಲಸ ಮಾಡುವ ವಿವಿಧ ಸಂಸ್ಥೆಗಳು ಗುತ್ತಿಗೆ ನೌಕರರಿಗೆ ನೀಡಬೇಕಾಗಿರುವ ಕನಿಷ್ಠ ವೇತನವನ್ನು ನೀಡುವ ಬಗ್ಗೆ, ವೇತನ ಸಮಯ, ರಜೆ, ಇಎಸ್ಐ ಮತ್ತು ಪಿ ಎಫ್ ಪಾವತಿ ಬಗ್ಗೆ ಸುತ್ತೋಲೆಯಲ್ಲಿ ಒತ್ತಿ ಹೇಳಲಾಗಿದೆ. ಇಲಾಖೆಗಳಿಗೆ ಮಾನವ ಸಂಪನ್ಮೂಲವನ್ನು ಒದಗಿಸುವ ಏಜೆನ್ಸಿಗಳು ಕೂಡ ಸರ್ಕಾರದ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕಾಗುತ್ತದೆ. ಭದ್ರತಾ ಏಜೆನ್ಸಿಗಳ ಮೂಲಕ ನೇಮಕಗೊಂಡ ಭದ್ರತಾ ಸಿಬ್ಬಂದಿ ಮತ್ತು ನಗರ ಸ್ಥಳೀಯ ಸಂಸ್ಥೆಗಳು ಮತ್ತು ಪಂಚಾಯತ್ ರಾಜ್ ಇಲಾಖೆಯೊಂದಿಗೆ ▶ 5ನೇ ಪುಟಕ್ಕೆ

ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರದ ಐದು ಕೋಟಿ ರೂ. ದುರ್ಬಳಕೆ ಪ್ರಕರಣ

ಕಾಂಗ್ರೆಸ್ ಮುಖಂಡ ಸೇರಿ ಐವರಿಗೆ ಜೈಲು ಶಿಕ್ಷೆ

ಬೆಂಗಳೂರು ಸಿಬಿಐ ವಿಶೇಷ ನ್ಯಾಯಾಲಯ ತೀರ್ಪು



ಆನಂದ್

ಮಂಡ್ಯ, ಸೆ.9– ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ಐದು ಕೋಟಿ ರೂ.ಗಳನ್ನು ದುರುಪಯೋಗಪಡಿಸಿಕೊಂಡ ಪ್ರಕರಣದಲ್ಲಿ ಕಾಂಗ್ರೆಸ್ ಮುಖಂಡ ಕೆಬ್ಬಳ್ಳಿ ಆನಂದ್ ಸೇರಿದಂತೆ ಐವರಿಗೆ 7 ವರ್ಷ ಜೈಲು ಹಾಗೂ ಒಟ್ಟು 5,02,75000 ರೂ. ದಂಡ ವಿಧಿಸಿ ಬೆಂಗಳೂರಿನ ಸಿಬಿಐ ವಿಶೇಷ ನ್ಯಾಯಾಲಯ ತೀರ್ಪು ನೀಡಿದೆ. ಈ ಹಿಂದೆ ಮಂಡ್ಯ ಜಿಲ್ಲಾ ಕಾಂಗ್ರೆಸ್‌ನ ಕಿಸಾನ್ ವಿಭಾಗದ ಅಧ್ಯಕ್ಷನಾಗಿದ್ದ ಕೆ.ಆನಂದ್ ಅಲಿಯಾಸ್ ಕೆಬ್ಬಳ್ಳಿ ಆನಂದ್, ಮೂಲತಃ ಮಳವಳ್ಳಿ ತಾಲೂಕು ಡಿ.ಹಲಸಹಳ್ಳಿ ಗ್ರಾಮದವನಾಗಿದ್ದು, ಬೆಂಗಳೂರಿನ ಫ್ಯೂಚರ್ ವೇಲ್ ಫಾರ್ಮಾ ಅಂಡ್ ಎಸ್ಟೇಟ್ ಪ್ರೈವೇಟ್ ಲಿಮಿಟೆಡ್‌ನ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಯಾಗಿದ್ದ ಹೆಚ್.ಎಸ್. ನಾಗಲಿಂಗಸ್ವಾಮಿ, ಮದ್ದೂರು ತಾಲೂಕು ಹೆಮ್ಮನಹಳ್ಳಿ ಗ್ರಾಮದ ರಿಯಲ್ ಎಸ್ಟೇಟ್ ಉದ್ಯಮಿ ಹಾಗೂ ಆಕಾಶ್ ಎಂಟರ್‌ಪ್ರೈಸಸ್ ಮಾಲೀಕ ಚಂದ್ರಶೇಖರ್ ಅಲಿಯಾಸ್ ಪೂಜಾರಿ, ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರದ ಪ್ರಥಮ ದರ್ಜೆ ಸಹಾಯಕನಾಗಿದ್ದ ಹೆಚ್.ಕೆ.ನಾಗರಾಜು ಮತ್ತು ಕೆ.ಬಿ.ಹರ್ಷನ್ ಶಿಕ್ಷೆಗೆ ಗುರಿಯಾದವರು.

ವಿವರ: ಮಂಡ್ಯ ವಿವೇಕಾನಂದ ನಗರದ ಒಳಚರಂಡಿ ಕಾಮಗಾರಿಗಾಗಿ ಸರ್ಕಾರದಿಂದ ಮುಡಾಗೆ ಬಿಡುಗಡೆಯಾಗಿದ್ದ ▶ 5ನೇ ಪುಟಕ್ಕೆ

ನಿಯಮ ಪಾಲಿಸದ ಶಾಲೆಗೆ ಬೀಗ

ಬೆಂಗಳೂರು, ಸೆ.9– ರಾಜ್ಯದಲ್ಲಿ ಇನ್ನು ಮುಂದೆ ಅನಧಿಕೃತ ಖಾಸಗಿ ಶಾಲೆಗಳಿಗೆ ಬ್ರೇಕ್ ಬೀಳುವುದು ಖಚಿತವಾಗಿದೆ. ಶಿಕ್ಷಣ ಇಲಾಖೆಯಲ್ಲೂ 40 ಪರ್ಸೆಂಟ್ ಕಮಿಷನ್ ಆರೋಪ ಕೇಳಿ ಬಂದ ಬೆನ್ನಲ್ಲೇ ಎಚ್ಚೆತ್ತ ರಾಜ್ಯ ಸರ್ಕಾರ ಅನಧಿಕೃತ ಶಾಲೆಗಳ ಮೇಲೆ ಪ್ರಹಾರ ನಡೆಸಿದೆ. ಅನಧಿಕೃತ ಖಾಸಗಿ ಶಾಲೆಗಳ ತೆರವಿಗಾಗಿ 'ಆಪರೇಷನ್ ಕ್ಲೀನ್' ಅಭಿಯಾನ ಪಾರ್ಟ್–2 ಶುರು ಮಾಡಿದೆ. ಇತ್ತೀಚೆಗಷ್ಟೇ ಅನಧಿಕೃತ ಖಾಸಗಿ ಶಾಲೆಗಳನ್ನು ಪಟ್ಟಿ ಮಾಡಲು ಅಭಿಯಾನ ಶುರು ಮಾಡಿತ್ತು ಇದೀಗ ಶಿಕ್ಷಣ ಇಲಾಖೆ ಬಿಡುಗಡೆ ಮಾಡಿರುವ ಮಾನದಂಡಗಳು ಇದ್ದರೆ ಮಾತ್ರ ಆ ಶಾಲೆಗಳು ಅಧಿಕೃತ ಎಂದು ಪರಿಗಣಿಸಲಾಗುತ್ತದೆ. ಸರ್ಕಾರದ ನಿಯಮ ಪಾಲನೆ ಮಾಡದೇ ಇರುವ ಶಾಲೆಗಳಿಗೆ ಬೀಗ ಬೀಳುವುದು ಖಚಿತವಾಗಿದೆ. ಹೀಗಾಗಿ ಪ್ರತಿ ಜಿಲ್ಲೆಗಳಲ್ಲಿ ಶಾಲೆಗಳ ಮಾಹಿತಿ ಸಂಗ್ರಹಕ್ಕೆ ಬಿಇಓ, ಡಿಡಿಪಿಐಗಳಿಗೆ ಟಾಸ್ಕ್ ನೀಡಲಾಗಿದ್ದು, ಅನಧಿಕೃತ ಶಾಲೆಗಳನ್ನು ಪಟ್ಟಿ ಮಾಡಿ ಕೊಡುವಂತೆ ಮಾನದಂಡ ಬಿಡುಗಡೆ ಮಾಡಿದೆ.

ಯಾವ ಶಾಲೆಗಳು ಅನಧಿಕೃತ

● ಕರ್ನಾಟಕ ಶಿಕ್ಷಣ ಕಾಯ್ದೆ 1983ರ ಕಲಂ 30, 31 ಅಡಿ ನೋಂದಣಿ ಪಡೆಯದ ಶಾಲೆಗಳು ● ಶಾಲಾ ಮಾನ್ಯತೆಯನ್ನು 1 ವರ್ಷಕ್ಕಿಂತ ಹೆಚ್ಚು ಕಾಲ ನವೀಕರಣ ಮಾಡದಿರುವುದು ● ಕರ್ನಾಟಕ ಶಿಕ್ಷಣ ಕಾಯ್ದೆ 1983ರ ಕಲಂ 36, ಆರ್‌ಟಿಇ ಕಾಯ್ದೆ 2009 ಅಡಿಯ ಮಾನ್ಯತೆ ಪಡೆಯದ ಶಾಲೆಗಳು ● ಪೂರ್ವಾನುಮತಿ ಇಲ್ಲದೆ ಸ್ಥಳಾಂತರ ಮಾಡಿದ ಶಾಲೆಗಳು ● ಅನಧಿಕೃತವಾಗಿ ಬೇರೆಯವರಿಗೆ ಹಸ್ತಾಂತರ ಮಾಡಿದ ಶಾಲೆಗಳು ▶ 5ನೇ ಪುಟಕ್ಕೆ

ತತ್ ಕ್ಷಣದಿಂದಲೇ ಜಾರಿಗೆ ಬರುವಂತೆ ನುಚ್ಚಕ್ಕಿ ರಫ್ತು ನಿಷೇಧಿಸಿದ ಕೇಂದ್ರ ಸರ್ಕಾರ



ನವದೆಹಲಿ, ಸೆ.9– ಮಹತ್ವದ ಬೆಳಣಿಗೆಯಲ್ಲಿ ಕೇಂದ್ರ ಸರ್ಕಾರ ತತ್ ಕ್ಷಣದಿಂದಲೇ ಜಾರಿಗೆ ಬರುವಂತೆ ನುಚ್ಚಕ್ಕಿ ರಫ್ತನ್ನು ನಿಷೇಧಿಸಿ ಆದೇಶ ಹೊರಡಿಸಿದೆ. ಈ ಹಿಂದೆ ನುಚ್ಚಕ್ಕಿ ರಫ್ತು ದೇಶದಲ್ಲಿ ಮುಕ್ತವಾಗಿತ್ತು. ಆದರೆ ಇದೀಗ ರಫ್ತು ನೀತಿಯನ್ನು ಕೇಂದ್ರ ಸರ್ಕಾರ ಪರಿಷ್ಕರಿಸಿದ್ದು, ನುಚ್ಚಕ್ಕಿಯನ್ನು 'ಮುಕ್ತ' ಪಟ್ಟಿಯಿಂದ ತೆಗೆದು "ನಿಷೇಧಿತ" ವಸ್ತುಗಳ ಪಟ್ಟಿಗೆ ಸೇರಿಸಿದೆ. ಆದಾಗ್ಯೂ, ಕೆಲವು ರಫ್ತುಗಳಿಗೆ ಸೆಪ್ಟೆಂಬರ್ 15ರವರೆಗೆ ಅವಕಾಶವಿರುತ್ತದೆ, ಈ ನಿಷೇಧದ ಆದೇಶದ ಮೊದಲು ಹಡಗಿನಲ್ಲಿ ನುಚ್ಚಕ್ಕಿಯನ್ನು ಲೋಡ್ ಮಾಡುವ ಸ್ಥಳ, ಶಿಪ್ಪಿಂಗ್ ಬಿಲ್ ಸಲ್ಲಿಸಿದ ಸ್ಥಳ ಮತ್ತು ಹಡಗುಗಳು ಈಗಾಗಲೇ ಭಾರತೀಯ ಬಂದರುಗಳಲ್ಲಿ ಆಗಮಿಸಿ ಲಂಗರು ಹಾಕಿದೆ. ಅವುಗಳ ಓಡಾಟದ ಸಂಖ್ಯೆಯನ್ನು ನಿಗದಿಪಡಿಸಿ ನುಚ್ಚಕ್ಕಿ ರವಾನೆಯನ್ನು ಸುಂಕದವರಿಗೆ ಹಸ್ತಾಂತರಿಸಲಾಗಿದೆ ಮತ್ತು ಅವರ ವ್ಯವಸ್ಥೆಯಲ್ಲಿ ನೋಂದಾಯಿಸಲಾಗಿದೆ ಎಂದು ಹೇಳಲಾಗಿದೆ.

ಈ ಖಾರಿಫ್ ಋತುವಿನಲ್ಲಿ ಒಟ್ಟಾರೆ ಭತ್ತದ ಬಿತ್ತನೆ ಪ್ರದೇಶವು ಕಳೆದ ವರ್ಷಕ್ಕಿಂತ ಕಡಿಮೆಯಿರಬಹುದು ಎಂದು ತೋರುತ್ತಿರುವುದರಿಂದ ರಫ್ತು ನಿಷೇಧವು ಮಹತ್ವವನ್ನು ಪಡೆದುಕೊಳ್ಳುತ್ತಿದೆ.

ಸ್ಕೂಟರ್‌ನಲ್ಲಿ ಮೈಸೂರು ಮೇಯರ್ ನಗರ ಪರ್ಯಟನೆ

ಗುಂಡಿ ಬಿದ್ದ ರಸ್ತೆ, ಚರಂಡಿ, ಸ್ವಚ್ಛತೆ ಪರಿಶೀಲನೆ; ದಸರೆಯೊಳಗೆ ಎಲ್ಲವನ್ನೂ ಸುಧಾರಿಸುವ ಭರವಸೆ



ಮೇಯರ್ ಶಿವಕುಮಾರ್ ಶುಕ್ರವಾರ ಮೈಸೂರಲ್ಲಿ ಸ್ಕೂಟರ್‌ನಲ್ಲಿ ಸಂಚರಿಸಿ ಗುಂಡಿ ಬಿದ್ದಿರುವ ರಸ್ತೆಗಳನ್ನು ವೀಕ್ಷಿಸಿದರು.

ಮೈಸೂರು, ಸೆ. 9(ಆರ್‌ಕೆ)– ನೂತನ ಮೇಯರ್ ಶಿವಕುಮಾರ್ ಶುಕ್ರವಾರ ಮೈಸೂರು ನಗರ ಪರ್ಯಟನೆ ನಡೆಸಿದರು.

ನಾಲ್ಕು ದಿನಗಳ ಹಿಂದಷ್ಟೇ 24ನೇ ಮೈಸೂರು ಮೇಯರ್ ಆಗಿ ಪದಗ್ರಹಣ ಮಾಡಿದ್ದ ಅವರು, ದಸರಾ ಮಹೋತ್ಸವ ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ಗುಂಡಿ ಬಿದ್ದಿರುವ ರಸ್ತೆಗಳನ್ನು ರಿಪೇರಿ ಮಾಡಿಸಿ ಸಾರ್ವಜನಿಕರು ಮತ್ತು ಪ್ರವಾಸಿಗರಿಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ಇಂದು ಸ್ಕೂಟರ್‌ನಲ್ಲಿ ಒಂದು ಸುತ್ತು ಹಾಕಿ, ಪರಿಶೀಲಿಸಿದರು.

ತಮ್ಮ ಸಂಬಂಧಿಕ ಎಲ್.ನಾಗೇಶ್ ಅವರ ಹೋಂಡಾ ಆಕ್ಟೀವಾ ಸ್ಕೂಟರ್‌ನಲ್ಲಿ ಕುಳಿತು ಮೈಸೂರಿನ ಹೃದಯಭಾಗದ ಅರಮನೆ ಸುತ್ತಲಿನ ರಸ್ತೆಗಳ ಫುಟ್‌ಪಾತ್, ಕಲ್ಲಿನ ಬ್ಯಾರಿಕೇಡ್, ಬೀದಿ ದೀಪಗಳ ದುಸ್ಥಿತಿಯನ್ನು ಪರಿಶೀಲಿಸಿದ ಶಿವಕುಮಾರ್, ಕೆ.ಆರ್. ಸರ್ಕಲ್‌ನಲ್ಲಿ ಫುಟ್‌ಪಾತ್‌ಗೆ ಹಾಸಿರುವ ಟೈಲ್ಸ್‌ಗಳು ಅಲ್ಲಲ್ಲಿ ಕುಸಿದಿರುವುದನ್ನು ವೀಕ್ಷಿಸಿದರು. ಅಲ್ಲಲ್ಲಿ ಕಲ್ಲಿನ ಬ್ಯಾರಿಕೇಡ್‌ಗಳು ತುಂಡಾಗಿರುವುದು, ಸಂಚಾರಕ್ಕೆ ಅಡ್ಡಿಯುಂಟಾಗಿರುವ ಕಂಬಗಳು, ಸರ್ಕಲ್‌ಗಳಲ್ಲಿ ಗುಂಡಿ ಬಿದ್ದಿರುವುದು, ಮೇಯರ್ ಕಣ್ಣಿಗೆ ಬಿತ್ತು. ಪುರಭವನದ ಆವರಣ ದಲ್ಲಿ ಮಲ್ಟಿ ಲೆವೆಲ್ ಪಾರ್ಕಿಂಗ್ ಲಾಟ್, ಬಯಲು ರಂಗಮಂದಿರ ಕಾಮಗಾರಿ ಅರ್ಧಕ್ಕೇ ನಿಂತು ಸೆಲ್ಲರ್‌ನಲ್ಲಿ ನೀರು ನಿಂತಿರುವುದನ್ನು ಪರಿಶೀಲಿಸಿದರು. ಹಾರ್ಡಿಂಜ್ ಸರ್ಕಲ್‌ನಲ್ಲಿ ವಾಹನಗಳ ಸುಗಮ ಸಂಚಾರಕ್ಕೆ ಪ್ರತಿಮೆ ಸುತ್ತ ಸಂಚಾರ ಪೊಲೀಸರು ಹಾಕಿರುವ ಬ್ಯಾರಿಕೇಡ್‌ನಿಂದ ಅಪಘಾತಗಳು ನಿಯಂತ್ರಣವಾಗುತ್ತಿರುವ ವಿಷಯ ತಿಳಿದು ಸಮಾಧಾನಪಟ್ಟರು.

ಮುಂದೆ ಗನ್‌ಹೌಸ್ ಸರ್ಕಲ್, ಸರ್ಕಾರಿ ಸಂಸ್ಕೃತ ಪಾಠಶಾಲೆ ಸರ್ಕಲ್, ಪಾಲಿಕೆ ಕಚೇರಿ ಬಳಿಯ ಸರ್ಕಲ್ ಹಾಗೂ ಅರಮನೆ ದಕ್ಷಿಣ ದ್ವಾರದ ಸುತ್ತಮುತ್ತಲ ರಸ್ತೆಗಳಲ್ಲಿನ ವಾಹನ ಸಂಚಾರ ದಟ್ಟಣೆ, ಅರಮನೆಗೆ ಬರುವ ಪ್ರವಾಸಿಗರ ವಾಹನ ನಿಲುಗಡೆ ಸಮಸ್ಯೆಗಳ ಬಗ್ಗೆಯೂ ಮೇಯರ್ ಮನವರಿಕೆ ಮಾಡಿಕೊಂಡು, ಯೋಜನೆ ರೂಪಿಸಲು ಮುಂದಾಗಿದ್ದಾರೆ.ಈ ಕುರಿತಂತೆ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯೆ ನೀಡಿದ ಮೇಯರ್ ಶಿವಕುಮಾರ್, ದಸರಾ ಮಹೋತ್ಸವ ಸಮೀಪಿಸುತ್ತಿದೆ. ▶ 9ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ಮಡದಿ : (ಆಫೀಸಿನಿಂದ ಮನೆಗೆ ಬಂದ ಗಂಡನಿಗೆ) ನಿಮಗೊಂದು ಖುಷಿ ಸುದ್ದಿ ಇದೆ. ನಾವಿನ್ನು ಇಬ್ಬರಲ್ಲ, ಮೂವರಾಗುತ್ತೇವೆ.

ಗಂಡ : (ಖುಷಿಯಿಂದ ಆಕೆಗೆ ಮುತ್ತು ನೀಡಿ) ಡಾರ್ಲಿಂಗ್, ನಿನಗೆ ಹೇಗೆ ಗೊತ್ತಾಯಿತು, ನಾಳೆಯಿಂದ ನನ್ನ ಅಮ್ಮ ಕೂಡ ಜೊತೆ ಇರ್ತಾರೆ ಅಂತ?"

ಮೈಸೂರು ಮಿತ್ರ

ಶನಿವಾರ, 10 ಸೆಪ್ಟೆಂಬರ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

ನಮ್ಮ ಅಂತರಂಗದ ಪುಸ್ತಕ ತೆರೆಯುವವರೆಗೆ ಉಳಿದೆಲ್ಲಾ ಪುಸ್ತಕಗಳು ಉಪಯೋಗಕ್ಕೆ ಬಾರವು. –ಸ್ವಾಮಿ ವಿವೇಕಾನಂದ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ತಪ್ಪು ಮಾಡದವರಿಲ್ಲ ತುಪ್ಪ ಉಣದವರಿಲ್ಲ.

ನಿಮ್ಮ ಪತ್ರಗಳು

ಆರೋಗ್ಯವಂತರಾಗಿರಲು ಹೀಗೆ ಮಾಡಿ...!

ಮಾನ್ಯರೇ,

ಜೀವನದ ಎಲ್ಲಾ ಜಂಜಾಟಗಳನ್ನು, ದುಡಿತದ ದಣಿವು, ನೋವು ,ಸಂಕಟ, ಆಯಾಸಗಳನ್ನು ದೂರ ಇಟ್ಟು ದೇಹವನ್ನು ಉಲ್ಲಾಸಗೊಳಿಸುವ ಶಕ್ತಿ ಇರುವುದು ನಿದ್ದೆಗೆ ಮಾತ್ರ. ಹೀಗಿರುವಾಗ ದಿನನಿತ್ಯದ ಜೀವನದಲ್ಲಿ ಆರೋಗ್ಯಕರ ನಿದ್ದೆಗೆ ಒತ್ತು ನೀಡುವುದು ಅತಿಮುಖ್ಯ. ಸೇವಿಸುವ ಆಹಾರದೊಂದಿಗೆ ನಿಯಮಿತ ನಿದ್ದೆಯೂ ಅವಶ್ಯಕ ಎಂಬುದರಲ್ಲಿ ಎರಡು ಮಾತಿಲ್ಲ. ಕೆಲವು ಹಿರಿಯರು ನಿದ್ರಾಹೀನತೆಯಿಂದ ಬಳಲುತ್ತಿರುತ್ತಾರೆ. ಆದ್ದರಿಂದ ಅವರಲ್ಲಿ ಖಿನ್ನತೆ, ಉದ್ವೇಗ, ಅಶಾಂತಿ ತಾಂಡವವಾಡುತ್ತಿರುತ್ತದೆ. ಇವರಲ್ಲಿ ಸ್ವಾಭಾವಿಕ ನಿದ್ದೆ ದೇಹದಿಂದ ದೂರವಾಗಿ ನಿದ್ರೆ ಮಾತ್ರೆಯ ಮೂಲಕ ನಿದ್ದೆ ಮಾಡುವಂತಹ ಪರಿಸ್ಥಿತಿ ಬಂದೊದಗಿರುತ್ತದೆ. ನಿದ್ದೆ ಬಾರದಿದ್ದಾಗ ಔಷಧಿಗೆ ಶರಣಾಗದೆ ಯೋಗ ವಿಜ್ಞಾನದಲ್ಲಿ ಹೇಳಲಾಗಿರುವ ಕೆಲವು ವಿಶೇಷ ರೀತಿಯ ಆಸನಗಳನ್ನು ಮಾಡುವುದರ ಮುಖೇನ ನಿದ್ದೆಯನ್ನು ಪಡೆಯಬಹುದಾಗಿದೆ. ಮೆದುಳು ಮತ್ತು ಶರೀರಗಳಿಗೆ ಸಂಪೂರ್ಣವಾದ ವಿಶ್ರಾಂತಿ ನಿದ್ದೆಯಿಂದಷ್ಟೆ ದೊರೆಯಲು ಸಾಧ್ಯ ಎಂಬುದು ಸಾಬೀತಾಗಿದೆ.

ನಿದ್ದೆಗೆ ಯೋಗವೇ ಮದ್ದು. ಭಯ, ಚಿಂತೆ, ಶೋಕ ಮುಂತಾದವುಗಳಿಂದ ಬಳಲುವವರು ಆರೋಗ್ಯಕರ ಆಹಾರದೊಂದಿಗೆ ವ್ಯಾಯಾಮ ಮಾಡಿ ದೇಹವನ್ನು ಆಕ್ಟಿವ್ ಆಗಿ ಇರಿಸಿಕೊಳ್ಳುವುದು ಬಹುಮುಖ್ಯ ಹಾಗೂ ಸದಾ ಉಲ್ಲಾಸದಿಂದ ಇರಲು ಸಾಧ್ಯ.

ಸುಖ ನಿದ್ದೆ ಬೇಕೆಂದರೆ ಪೂರ್ವ ದಿಕ್ಕಿಗೆ ತಲೆ ಮಾಡಿ ಮಲಗುವುದು, ನಿದ್ದೆ ಮಾಡುವ ಮೂರು ಗಂಟೆಗಳ ಮುಂಚಿತವಾಗಿ ಊಟ ಮಾಡುವುದರಿಂದ ಪಚನ ಕ್ರಿಯೆ ಚೆನ್ನಾಗಿ ಆಗಿ ನಿದ್ದೆಯೂ ಸುಲಭವಾಗಿ ಬರುತ್ತದೆ. ಮಲಗುವ ಕೋಣೆ ಶಾಂತವಾಗಿದ್ದು, ಗಾಳಿ ಬೆಳಕಾಡುವಂತಿರಬೇಕು. ಮಲಗುವ ಮುನ್ನ ಕೈಕಾಲುಗಳನ್ನು ತೊಳೆದು ದೇವರನ್ನು ಪ್ರಾರ್ಥಿಸಿ ಮಲಗಬೇಕು ಹಾಗೂ ಮಲಗುವ ಮುನ್ನ ಕಾಲನ್ನು ಎರಡು ನಿಮಿಷ ಮಸಾಜ್ ಮಾಡುವುದರಿಂದ ದೇಹ ರಿಲಾಕ್ಸ್ ಆದಂತಾಗುತ್ತದೆ. ರಕ್ತ ಪರಿಚಲನೆ ಹೆಚ್ಚಾಗಿ ನಿದ್ರೆ ಮಾಡಲು ಸಹಾಯ ಮಾಡುತ್ತದೆ. ಅತಿಯಾದ ಕಾಫಿ, ಟೀ ಸೇವನೆ ನಿದ್ರೆಗೆ ಅಡ್ಡಿ ಮಾಡುತ್ತದೆ. ಇದರಿಂದ ದೂರವಿರಿ.

ಹಿರಿಯರು ಉತ್ತಮ ನಿದ್ದೆ ಮಾಡುವುದರಿಂದ ಮೆದುಳನ್ನು ಆರೋಗ್ಯವಾಗಿರಿಸಿಕೊಳ್ಳಬಹುದಾಗಿದೆ ಮತ್ತು ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸಿಕೊಳ್ಳಬಹುದಾಗಿದೆ. ಹಿರಿಯರ ಆರೋಗ್ಯ ಸುಧಾರಿಸಲು ನಿದ್ದೆಯೇ ಮದ್ದು ಎಂದರೆ ತಪ್ಪಾಗಲಾರದು. ಹಿರಿಯರಿಗೊಂದು ನನ್ನ ಬಿಗ್ ಸೆಲ್ಯೂಟ್.

–ಕೆಂಡಗಣ್ಣ ಸ್ವಾಮಿ, ಶಿಕ್ಷಕರು, ಬಿದರಹಳ್ಳಿ ಹುಂಡಿ, ಸರಗೂರು ತಾ.

ಈ ಬಾರಿ ಗುಂಡಿ ದಸರೆ ನಡೆಸಿ

ಮಾನ್ಯರೆ,

ಹಿಂದಿನ ಎರಡು ವರ್ಷಗಳಲ್ಲಿ ಕೋವಿಡ್‌ನಿಂದಾಗಿ ದಸರೆಯನ್ನು ಅದ್ದೂರಿಯಾಗಿ ಆಚರಿಸಲು ಸಾಧ್ಯವಾಗಿರಲಿಲ್ಲ. ಈ ಬಾರಿ ರಾಜ್ಯ ಸರ್ಕಾರ ಹಾಗೂ ಜಿಲ್ಲಾಡಳಿತ ಮೈಸೂರು ದಸರೆಯನ್ನು ವಿಜೃಂಭಣೆಯಿಂದ ನಡೆಸಲು ಉದ್ದೇಶಿಸಿದೆ. ಇದಕ್ಕಾಗಿ ಈಗಾಗಲೇ ಸಕಲ ಸಿದ್ಧತೆಗಳು ನಡೆಯುತ್ತಿರುವುದು ಸರಿಯಷ್ಟೆ. ದಸರೆಯಲ್ಲಿ ಹಲವಾರು ವಿವಿಧ ದಸರೆಗಳಾದ, ಯುವ ದಸರೆ, ಆರೋಗ್ಯ ದಸರೆ, ಕೃಷಿ ದಸರೆ, ಮಹಿಳಾ ದಸರೆ, ಮಕ್ಕಳ ದಸರೆ, ಯೋಗ ದಸರೆ, ಆಹಾರ ದಸರೆ ಇತ್ಯಾದಿಗಳಿರುವಂತೆ, ಈ ಬಾರಿ ವಿನೂತನವಾಗಿ ಮತ್ತೊಂದು ದಸರೆಯನ್ನೂ ಸೇರಿಸಬಹುದಾಗಿದೆ. ಅದುವೇ ಗುಂಡಿ ದಸರೆ. ಮೈಸೂರು ನಗರದಲ್ಲಿನ ಎಲ್ಲಾ ಬಡಾವಣೆಗಳು ಈ ದಸರೆಗೆ ಅರ್ಹವಿದ್ದು, ಯಾವ ಬಡಾವಣೆಯಲ್ಲಿ ಅತೀ ಹೆಚ್ಚು ಉದ್ದಗಲದ ಗುಂಡಿಗಳಿರುವುದೋ, ಯಾವ ರಸ್ತೆಯ ಗುಂಡಿಗಳು ದೀರ್ಘಕಾಲದಿಂದ ವಿಮೋಚನೆಯಾಗಿರುವುದಿಲ್ಲವೋ, ಯಾವ ರಸ್ತೆಯಲ್ಲಿ ಈ ಗುಂಡಿಗಳಿಂದಾಗಿ ಅತೀ ಹೆಚ್ಚು ಅಪಘಾತಗಳಾಗಿವೆಯೋ, ಅಂತಹ ಬಡಾವಣೆಗಳ ರಸ್ತೆಗೆ ಪಾರಿತೋಷಕವನ್ನು ಮತ್ತು ಸಂಬಂಧಿಸಿದ ವಾರ್ಡ್‌ನ ಪಾಲಿಕೆ ಸದಸ್ಯರಿಗೆ ಮತ್ತು ಪಾಲಿಕೆ ಸಿಬ್ಬಂದಿಯವರಿಗೆ ಬಹುಮಾನ ನೀಡಬಹುದಾಗಿದೆ. ಹಾಗೆಯೇ ಈ ಕಳಪೆ ಗುಣಮಟ್ಟಕ್ಕೆ ಕಾರಣರಾದ ಸಂಬಂಧಿಸಿದ ಗುತ್ತಿಗೆದಾರರನ್ನೂ ಸನ್ಮಾನಿಸಬಹುದಾಗಿದೆ. ಹೀಗಾಗಿ, ಈ ಬಾರಿ ಜಿಲ್ಲಾಡಳಿತ ಗುಂಡಿ ದಸರೆ ಆಚರಿಸುವ ಬಗ್ಗೆ ತೀರ್ಮಾನ ಕೈಗೊಳ್ಳಲಿ ಎಂಬುದೇ ನಗರದ ಎಲ್ಲಾ ಗುಂಡಿಗಳಿಂದ ನೊಂದಿರುವ ಸಾರ್ವಜನಿಕರ ಆಗ್ರಹವಷ್ಟೆ.

–ವಿಜಯ್ ಹೆಮ್ಮಿಗೆ, ಮೈಸೂರು.

ಕತ್ತಿ ಇನ್ನಷ್ಟು ದಿನ ಇರಬೇಕಿತ್ತು!

ಮಾನ್ಯರೆ,

ಒಂದಲ್ಲ ಒಂದು ದಿನ ನಾನೇ ಸಿಎಂ ಎಂಬ ಹಟವಿತ್ತು.
ಬದುಕಿನಲ್ಲಿ ಭರವಸೆಯ ಆತ್ಮವಿಶ್ವಾಸವಿತ್ತು.
ಕತ್ತಿಯಂಥ ಚೂಪಾದ ಮೊನಚು ಮಾತಿತ್ತು!
ಮಾತು ಒರಟಾದರೂ ಹಾಸ್ಯಪ್ರಜ್ಞೆ ಹೆಚ್ಚಿತ್ತು.
ನೇರ ನಡೆ–ನುಡಿಯ ಮಾತುಗಳು ಸಾಕಷ್ಟಿತ್ತು.
ಏನೇ ಹೇಳಿ! ಉಮೇಶ್ ಕತ್ತಿ ಇನ್ನಷ್ಟು ವರ್ಷ ಬದುಕಬೇಕಿತ್ತು.
ಬದುಕಿ ರಾಜ್ಯ ರಾಜಕಾರಣವನ್ನು ಮತ್ತಷ್ಟು ಬೆಳಗಬೇಕಿತ್ತು!

–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.

'ಕೋಡು!'

ಮಾನ್ಯರೆ,

"ಮಹಾತ್ಮ ಗಾಂಧಿಯವರ ಹುಟ್ಟು ಹೆಸರು ಮೋಹನದಾಸ ಕರಮಚಂದ ಗಾಂಧಿ. ಅವರು ಹುಟ್ಟಿದ್ದು ಗುಜರಾತ್ ಪ್ರಾಂತ್ಯದ ಪೋರ್‌ಬಂದರ್ ಎಂಬ ಪುಟ್ಟ ಪಟ್ಟಣದಲ್ಲಿ..." ಇದೇನು ಮಕ್ಕಳ ಪುಸ್ತಕವೊಂದರ ಆರಂಭವೆ? ಖಂಡಿತ ಅಲ್ಲ; ಡಿ.ಎಸ್. ನಾಗಭೂಷಣ ಅವರ 'ಗಾಂಧಿ ಕಥನ' ಎಂಬ 700 ಪುಟಗಳ ಬೃಹತ್ ಗ್ರಂಥದ ನೇರ ಆರಂಭ ! ಅದನ್ನು ನಾನೀಗ ಓದುತ್ತಿದ್ದೇನೆ.

ವಿಷಯ ಸಮೃದ್ಧಿ, ಆಕರ್ಷಕ ಸರಳ ಶೈಲಿ (ಕುವೆಂಪು ಶೈಲಿಗೆ ಭಿನ್ನ)ಗಳಿಂದ ಕೂಡಿದ ಇಂಥದೊಂದು ಜೀವನ ಚರಿತ್ರೆ ಮತ್ತು ಯಾವುದೇ ಭಾಷೆಯಲ್ಲಿರುವುದು ಅನುಮಾನ. ಕನ್ನಡಕ್ಕೆ ಇದೊಂದು ದೊಡ್ಡ ಕೊಡುಗೆ ಕೋಡು, ನಿಸ್ಸಂದೇಯವಾಗಿ! (ಆದರೆ ಕಥನ ಕರ್ತೃ ಈ ಹೊತ್ತು ನಮ್ಮ ನಡುವೆ ಇಲ್ಲದಿರುವುದು ವ್ಯಥೆಯ ವಿಚಾರ).

ಕಾಲ ಮಹಿಮೆ

ಎತ್ತೊಂದು ಹುಲಿಯನ್ನು ಓಡಿಸಿತೆಂದು ಸುದ್ದಿ! ಕಾಲವಶದಿಂದ "ಬಡವ ಬಲ್ಲಿದನಾಗನೇ? ಹರಹರಾ..."

–ಸಿಪಿಕೆ, ದತ್ತಪೀಠ ಆಸ್ಥಾನ ವಿದ್ವಾನ್, ಮೈಸೂರು.



ಕಾರ್ಕಳ ಆನಂದಭಟ್
ಮೊ.7676554198

ದಿಕ್ಕುದೆಸೆ

ಹಳೆಯ ಅಣೆಕಟ್ಟುಗಳು; ಸಂಭಾವ್ಯ ಅಪಾಯಗಳು

1889 ಮೇ ಮೂವತ್ತೊಂದು, ಅಮೇರಿಕದ ಪೆನ್ಸಿಲ್ವೇನಿಯಾ ಸ್ಟೇಟ್‌ನ ಪುಟ್ಟ ನಗರ ಜೋನ್ಸ್ ಟೌನ್. ಮೂವತ್ತು ಸಾವಿರ ಜನಸಂಖ್ಯೆಯ ಈ ನಗರದಲ್ಲಿ ಕೆಲವು ದಿನಗಳಿಂದ ಧಾರಾಕಾರವಾಗಿ ಮಳೆ ಸುರಿಯುತ್ತಿತ್ತು. ಮುಂದೆ ಸಂಭವಿಸಲಿರುವ ವಿನಾಶದ ಮುನ್ಸೂಚನೆ ಇಲ್ಲದೆ ಜನಜೀವನ ನಿರಾತಂಕವಾಗಿತ್ತು. ಏಕಾಏಕಿ ರಕ್ಕಸ ಗಾತ್ರದ ನೀರಿನ ಅಲೆಗಳು ನಗರಕ್ಕೆ ಅಪ್ಪಳಿಸಿದವು. ಕೆಲವೇ ಕ್ಷಣಗಳಲ್ಲಿ ನಗರವು ಜಲಸಮಾಧಿಯಾಗಿತ್ತು. 14.55 ಮಿಲಿಯನ್ ಕ್ಯೂ ಮೀಟರ್‌ನಷ್ಟು ಜಲರಾಶಿ ಜೋನ್ಸ್‌ಟೌನ್ ನಗರವನ್ನು ನಾಶ ಮಾಡಿತ್ತು 2000ಕ್ಕಿಂತ ಹೆಚ್ಚು ಜನರು ಸಾವಿಗೀಡಾಗಿದ್ದರು. ಬದುಕುಳಿದವರು ಸರ್ವಸ್ವವನ್ನು ಕಳೆದುಕೊಂಡು ನಿರ್ಗತಿಕರಾಗಿದ್ದರು. ಆಗಿನ ಲೆಕ್ಕದಲ್ಲಿ 17 ಮಿಲಿಯನ್ ಡಾಲರ್ (ಈಗಿನ ಪ್ರಕಾರ 534 ಮಿಲಿಯನ್ ಡಾಲರ್) ನಷ್ಟವಾಗಿತ್ತು. ಇದಕ್ಕೆ ಕಾರಣ ನಗರದ ಬಳಿ ಹರಿಯುತ್ತಿದ್ದ ಲಿಟ್ಲಕೊನ್‌ವಾಗ್ ನದಿಗೆ ಅಡ್ಡವಾಗಿ ನಿರ್ಮಿಸಿದ ಸೌತ್ ಫೋರ್ಕ್ ಅಣೆಕಟ್ಟು ನಿರಂತರ ಮಳೆಯಿಂದಾಗಿ ಸಂಗ್ರಹವಾಗಿದ್ದ ಜಲರಾಶಿಯ ಒತ್ತಡ ತಡೆಯಲಾರದೇ ಈ ಅಣೆಕಟ್ಟು ಒಡೆದು ಹೋಗಿತ್ತು.

ಜಗತ್ತಿನ ಇತಿಹಾಸದಲ್ಲಿ ಅತ್ಯಂತ ವಿನಾಶಕಾರಿ ದುರಂತ ಚೀನಾದಲ್ಲಿ ಸಂಭವಿಸಿತು. 1975 ರಲ್ಲಿ ಚೀನಾದ ಹೆನಸ್ ಪ್ರಾಂತ್ಯದಲ್ಲಿ ಚಂಡಮಾರುತದಿಂದ ಸುರಿದ ಬಾರಿ ಮಳೆಯಿಂದಾಗಿ ಬೆನ್ ಕ್ವಿ ಯೋ ಅಣೆಕಟ್ಟು ಒಡೆದು ಹೋಯಿತು. ಈ ವಿನಾಶಕಾರಿ ದುರಂತದಲ್ಲಿ 1.71 ಲಕ್ಷ ಜನರು ಸಾವಿಗೀಡಾಗಿ, 11 ಮಿಲಿಯನ್ ಜನರು ತಮ್ಮ ಸರ್ವಸ್ವವನ್ನು ಕಳೆದುಕೊಂಡಿದ್ದರು.

1979, ಆಗಸ್ಟ್ 11 ರಂದು ಭಾರತದ ಗುಜರಾತ್ ರಾಜ್ಯದ ಪುಟ್ಟನಗರ ಮೊರ್ವಿಯಲ್ಲೂ ಇದೇ ರೀತಿ ಭೀಕರ ದುರಂತ ಸಂಭವಿಸಿತು. ನಗರದಿಂದ ಐದು ಕಿ.ಮೀ. ದೂರದಲ್ಲಿ ಮಚ್ಚು ನದಿಗೆ ನಿರ್ಮಿಸಿದ್ದ ಅಣೆಕಟ್ಟು ಭಾರೀ ಮಳೆಯಿಂದಾಗಿ ಒಡೆದು ಹೋಯಿತು. ಮಧ್ಯಾಹ್ನ ಮೂರೂವರೆ ಗಂಟೆ ಹೊತ್ತಿಗೆ ಇದ್ದಕ್ಕಿದ್ದಂತೆ ಎರಗಿದ ಮೂವತ್ತು ಅಡಿಗೂ ಎತ್ತರದ ದೈತ್ಯಾಕಾರದ ನೀರಿನ ಅಲೆಗಳಿಗೆ ನಗರವು ಜಲಸಮಾಧಿಯಾಗಿತ್ತು. ಸಾವಿರಾರು ಜನರು ಮೃತರಾಗಿ, 22 ಬಿಲಿಯನ್ ರೂ.ನಷ್ಟು ನಷ್ಟ ಸಂಭವಿಸಿತ್ತು. ಜಗತ್ತಿನಲ್ಲಿ 2000 ದಿಂದ 2009 ರ ಅವಧಿಯಲ್ಲಿ 200ಕ್ಕೂ ಹೆಚ್ಚು ಬೃಹತ್ ಅಣೆಕಟ್ಟುಗಳು ವಿಫಲವಾಗಿವೆ. ಈ ಹಿನ್ನೆಲೆಯಲ್ಲಿ ಜಗತ್ತಿನಲ್ಲಿರುವ ಅಣೆಕಟ್ಟುಗಳ ಸಾಮರ್ಥ್ಯ, ಗಾತ್ರ, ಸುರಕ್ಷೆಗಳ ಬಗ್ಗೆ ಅಧ್ಯಯನವಾಗಬೇಕಾಗಿದೆ.

ವಿಶ್ವ ಸಂಸ್ಥೆಯ ಅಧ್ಯಯನ ವರದಿ :

ಕೆನಡಾದ ಹೆಮಿಲ್ಟನ್‌ನಲ್ಲಿರುವ ವಿಶ್ವಸಂಸ್ಥೆಯ ಅಧ್ಯಯನ ಕೇಂದ್ರದ ಜಲ ಪರ್ಯಾವರಣ ಮತ್ತು ಸ್ವಾಸ್ಥ್ಯ ಸಂಸ್ಥೆಯು ಪ್ರಕಟಿಸಿರುವ "ಹಳೆಯ ನೀರಾವರಿ ನಿರ್ಮಾಣಗಳು–ಸಂಭಾವ್ಯ ಜಾಗತಿಕ ಅಪಾಯಗಳು" ಶೀರ್ಷಿಕೆಯಿರುವ ವರದಿಯಲ್ಲಿ ಬೃಹತ್ ಅಣೆಕಟ್ಟುಗಳ ಕೆಳ ಪ್ರವಾಹ ಪ್ರದೇಶದಲ್ಲಿ ವಾಸಿಸುತ್ತಿರುವ ಕೋಟ್ಯಾಂತರ ಜನರು ಭವಿಷ್ಯದಲ್ಲಿ ಅಪಾಯಕ್ಕೀಡಾಗುವ ಸಾಧ್ಯತೆ ಅಧಿಕವಾಗಿದೆ ಎಂದು ತಿಳಿಸಿದೆ. ಸಂಸ್ಥೆಯ ವರದಿಯಂತೆ ವಿಶ್ವಾದ್ಯಂತ ಇರುವ 58700 ಬೃಹತ್ ಅಣೆಕಟ್ಟುಗಳಲ್ಲಿ ಹೆಚ್ಚಿನವು 1930 ರಿಂದ 1970ರ ಅವಧಿಯಲ್ಲಿ ನಿರ್ಮಾಣಗೊಂಡಿವೆ. ಇವುಗಳ ನಿರ್ವಹಣಾ ಆಯಸ್ಸು ಐವತ್ತರಿಂದ ನೂರು ವರ್ಷಗಳೆಂದು ಆಗ ತಜ್ಞರು ನಿಗದಿಪಡಿಸಿದ್ದರು. ಐವತ್ತು ವರ್ಷ ದಾಟುತ್ತಿದ್ದಂತೆ ಅಣೆಕಟ್ಟುಗಳ ಕಾರ್ಯಕ್ಷಮತೆ ಕುಸಿದು ದುರ್ಬಲವಾಗುತ್ತವೆ ಎಂಬುದು ತಜ್ಞರ ಅಭಿಪ್ರಾಯವಾಗಿದೆ. ಅಣೆಕಟ್ಟುಗಳಲ್ಲಿ ಹೂಳು ಶೇಖರಣೆ, ನಿರ್ವಹಣಾ ವೆಚ್ಚದಲ್ಲಿ ಹೆಚ್ಚಳ ದುರಸ್ತಿಯಂತಹ ಸಮಸ್ಯೆಗಳು ಹೆಚ್ಚುತ್ತವೆ ಎಂದು ವರದಿಯಲ್ಲಿ ತಿಳಿಸಿದೆ. ಭಾರತ, ಜಪಾನ್, ಜಿಂಬಾಬ್ವೆ, ಝಾಂಬಿಯಾ, ಅಮೇರಿಕಾ ಹಾಗೂ ಕೆನಡಾ ದೇಶಗಳಲ್ಲಿ ಹಳೆಯ ಅಣೆಕಟ್ಟುಗಳ ಕ್ಷಮತೆಯ ಅಧ್ಯಯನ ಮತ್ತು ದುರ್ಬಲ ಅಣೆಕಟ್ಟುಗಳನ್ನು ತೆರವುಗೊಳಿಸುವ ಬಗ್ಗೆ ಸಂವಾದ ಆರಂಭವಾಗಿದೆ. ಹೀಗಾಗಿ ಇಪ್ಪತ್ತನೇ ಶತಮಾನದಲ್ಲಾದಂತೆ ಈ ಶತಮಾನದ ಮಧ್ಯಾವಧಿಯಲ್ಲಿ ಹೊಸದಾಗಿ ಅಣೆಕಟ್ಟುಗಳ ನಿರ್ಮಾಣದ ಭಾರಿ ದೊಡ್ಡ ಅಭಿಯಾನ ಪ್ರಾರಂಭ ವಾಗುವ ಸಾಧ್ಯತೆ ಇದೆ ಎಂದು ತಿಳಿಸಿದೆ.



> ವಿಶ್ವ ಸಂಸ್ಥೆಯ ಅಧ್ಯಯನ ಕೇಂದ್ರದ ವರದಿಯಲ್ಲಿ ಕೇರಳ, ತಮಿಳುನಾಡು ಮಧ್ಯೆ ವಿವಾದದ ಕೇಂದ್ರ ಬಿಂದುವಾಗಿರುವ ಮುಲ್ಲಪೆರಿಯಾರ್ ಅಣೆಕಟ್ಟೆಗೆ ನೂರು ವರ್ಷವಾಗಿದ್ದು, ದುರ್ಬಲ ಮತ್ತು ಭೂಕಂಪನ ವಲಯದಲ್ಲಿದ್ದು, ಅತ್ಯಂತ ಅಪಾಯಕಾರಿ ಸ್ಥಿತಿಯಲ್ಲಿರುವುದಾಗಿ ತಿಳಿಸಿದೆ. ಈ ಅಣೆಕಟ್ಟಿನ ಕೆಳ ಪ್ರವಾಹದ ವ್ಯಾಪ್ತಿಯಲ್ಲಿ ಬರುವ ನಾಲ್ಕು ಜಿಲ್ಲೆಗಳಲ್ಲಿ ಮೂವತ್ತೈದು ಲಕ್ಷಕ್ಕೂ ಹೆಚ್ಚು ಜನರು ವಾಸವಿದ್ದು, ಅಕಸ್ಮಾತ್ ಈ ಅಣೆಕಟ್ಟು ಒಡೆದಲ್ಲಿ ಊಹಿಸಲಾರದಂತಹ ವಿನಾಶಕಾರಿ ಜಲಪ್ರಳಯ ಸಂಭವಿಸಲಿದೆಯೆಂದು ಎಚ್ಚರಿಸಿದೆ. ಈ ಅಣೆಕಟ್ಟಿನ ವಿನ್ಯಾಸದಲ್ಲೂ ನ್ಯೂನತೆ ಇದೆಯೆಂದು ಭೀತಿ ವ್ಯಕ್ತಪಡಿಸಲಾಗಿದೆ.

ಜಗತ್ತಿನಲ್ಲಿರುವ 32715 (ಶೇ. 55 ರಷ್ಟು) ಬೃಹತ್ ಅಣೆಕಟ್ಟುಗಳು ಅತ್ಯಂತ ಜನಸಾಂದ್ರತೆಯಳ್ಳ ಏಷ್ಯಾ ಖಂಡದ ನಾಲ್ಕು ದೇಶಗಳಾದ ಭಾರತ, ಚೀನಾ, ಜಪಾನ್ ಹಾಗೂ ದಕ್ಷಿಣ ಕೊರಿಯಾಗಳಲ್ಲಿವೆ. ಇವುಗಳಲ್ಲಿ ಹೆಚ್ಚಿನವು ಶೀಘ್ರದಲ್ಲಿ ಐವತ್ತು ವರ್ಷ ಪೂರೈಸಲಿವೆ. ಇದೇ ಸ್ಥಿತಿ ಆಫ್ರಿಕಾ, ದ. ಅಮೇರಿಕ ಹಾಗೂ ಪೂರ್ವ ಯುರೋಪ್‌ನಲ್ಲಿಯೂ ಇದೆಯೆಂಬ ಮಾಹಿತಿಯನ್ನೂ ನೀಡಿದೆ. ಕಾರ್ಯಕ್ಷಮತೆ ಕಳೆದುಕೊಂಡಿರುವ ಹಳೆ ಅಣೆಕಟ್ಟುಗಳ ಉಪಯೋಗ ದುಬಾರಿ ಹಾಗೂ ಇವುಗಳ ನವೀಕರಣವು ಸೂಕ್ತವಲ್ಲ ಎಂಬುದು ತಜ್ಞರ ಅಭಿಪ್ರಾಯವಾಗಿದೆ. ಉತ್ಕೃಷ್ಟ ರೀತಿಯಲ್ಲಿ ನಿರ್ಮಾಣ ಹಾಗೂ ನಿರ್ವಹಣೆ ಇರುವ ಅಣೆಕಟ್ಟುಗಳು ನೂರು ವರ್ಷಗಳ ಕಾಲ ಯಾವುದೇ ಸಮಸ್ಯೆಗಳಿಲ್ಲದೇ ಕಾರ್ಯ ನಿರ್ವಹಿಸುತ್ತಿದ್ದರೂ ಇವುಗಳನ್ನು ಕಾರ್ಯ ಮುಕ್ತಗೊಳಿಸಬೇಕೆಂಬ ಅಭಿಯಾನವು ಅಮೇರಿಕಾ ಹಾಗೂ ಯೂರೋಪ್‌ನಲ್ಲಿ ಆರಂಭವಾಗಿದೆ.

ವಿಶ್ವಾದ್ಯಂತ ಇರುವ ಅಣೆಕಟ್ಟುಗಳಲ್ಲಿ ಸಂಗ್ರಹವಾಗುವ ನೀರಿನ ಪ್ರಮಾಣ 7000 ದಿಂದ 8300 ಕ್ಯೂ ಕಿ.ಮೀ. ಎಂದು ಅಂದಾಜು ಮಾಡಲಾಗಿದೆ ಈ ಅಣೆಕಟ್ಟುಗಳಲ್ಲಿರುವ ನೀರು ಏಕಕಾಲದಲ್ಲಿ ಬಿಡುಗಡೆಯಾದಲ್ಲಿ ಕೆನಡಾ ದೇಶದ ಒಟ್ಟು 99.85 ಲಕ್ಷ ಚ.ಕಿ.ಮೀ. ವಿಸ್ತೀರ್ಣದಲ್ಲಿ ಶೇ. 80ರಷ್ಟು ಭೂ ಪ್ರದೇಶವು ಒಂದು ಮೀಟರ್‌ನಷ್ಟು ನೀರಿನಲ್ಲಿ ಮುಳುಗಬಹುದು.

ಅಮೇರಿಕದ ಅಣೆಕಟ್ಟುಗಳ ಸ್ಥಿತಿ : ಅಮೇರಿಕದಲ್ಲಿ 90580 ಅಣೆಕಟ್ಟುಗಳ ನಿರ್ಮಾಣವಾಗಿ ಐವತ್ತು ವರ್ಷಗಳಾಗಿದ್ದು, ಇವುಗಳಲ್ಲಿ ಶೇ. 85 ರಷ್ಟು ಕಾರ್ಯ ಸಾಮರ್ಥ್ಯ ಭಾರೀ ಕುಸಿದಿದೆ. ಈ ಅಣೆಕಟ್ಟುಗಳನ್ನು ನವೀಕರಿಸಲು 64 ಬಿಲಿಯನ್ ಡಾಲರ್ ಖರ್ಚಾಗಬಹುದೆಂದು ಅಂದಾಜು ಮಾಡಲಾಗಿದೆ. ಕಳೆದ ಮೂವತ್ತು ವರ್ಷಗಳಲ್ಲಿ ಅಮೇರಿಕದ ಇಪ್ಪತ್ತೊಂದು ರಾಜ್ಯಗಳಲ್ಲಿನ 1275 ಅಣೆಕಟ್ಟುಗಳನ್ನು ತೆರವುಗೊಳಿಸಲಾಗಿದೆ. 2017 ಒಂದರಲ್ಲೇ ಎಂಬತ್ತು ಅಣೆಕಟ್ಟುಗಳನ್ನು ನೆಲಸಮ ಮಾಡಲಾಗಿದೆ.


ಭಾರತದ ಅಣೆಕಟ್ಟುಗಳ ಮಾಹಿತಿ : ಕೇಂದ್ರ ಜಲಶಕ್ತಿ ಸಚಿವ ಗಜೇಂದ್ರ ಸಿಂಗ್ ಶೇಖಾವತ್ ಅವರು 31.7.2019 ರಂದು ಸಂಸತ್ತಿಗೆ ನೀಡಿದ ಮಾಹಿತಿಯಂತೆ ದೇಶದಲ್ಲಿ ಒಟ್ಟು 5344 ಬೃಹತ್ ಅಣೆಕಟ್ಟುಗಳಿದ್ದು, ಈ ಪೈಕಿ 293 ಅಣೆಕಟ್ಟುಗಳು ನೂರು ವರ್ಷ ಹಳೆಯದಾಗಿವೆ. 1040 (ಶೇ. 20) ಅಣೆಕಟ್ಟುಗಳಿಗೆ ಐವತ್ತರಿಂದ ನೂರು ವರ್ಷಗಳಾಗಿವೆಯೆಂದು ತಿಳಿಸಿದ್ದರು. ವಿಶ್ವ ಸಂಸ್ಥೆಯ ವರದಿಯಂತೆ ಭಾರತದಲ್ಲಿ 2050ರ ವೇಳೆಗೆ 4250ಕ್ಕೂ ಹೆಚ್ಚು ಅಣೆಕಟ್ಟುಗಳಿಗೆ ಐವತ್ತು ವರ್ಷವಾಗಲಿದ್ದು, 64 ಅಣೆಕಟ್ಟುಗಳಿಗೆ ನೂರೈವತ್ತು ವರ್ಷವಾಗಲಿದೆ. ಈ ಮಾಹಿತಿಗಳ ಆಧಾರದಲ್ಲಿ ಕೇಂದ್ರ ಜಲಶಕ್ತಿ ಸಚಿವರು ಅಣೆಕಟ್ಟುಗಳ ಮೇಲೆ ನಿಗಾ, ಅವುಗಳ ತಪಾಸಣೆ ಹಾಗೂ ನಿರ್ವಹಣೆಗಾಗಿ ರಾಷ್ಟ್ರೀಯ ಅಣೆಕಟ್ಟು ಸುರಕ್ಷಾ ಪ್ರಾಧಿಕಾರ ಸ್ಥಾಪಿಸಲು ಅವಕಾಶ ನೀಡುವ ಮಸೂದೆ ಮಂಡಿಸಿದ್ದರು. ಅಣೆಕಟ್ಟುಗಳಿಂದಾಗುವ ಅನಾಹುತಗಳನ್ನು ತಡೆಯಲು 'ರಾಷ್ಟ್ರೀಯ ಅಣೆಕಟ್ಟು ಸುರಕ್ಷಾ ಸಮಿತಿ' ರಚಿಸುವ ಪ್ರಸ್ತಾಪವನ್ನು ಮಾಡಿದ್ದರು.

ವಿಶ್ವ ಸಂಸ್ಥೆಯ ಅಧ್ಯಯನ ಕೇಂದ್ರದ ವರದಿಯಲ್ಲಿ ಕೇರಳ, ತಮಿಳುನಾಡು ಮಧ್ಯೆ ವಿವಾದದ ಕೇಂದ್ರ ಬಿಂದುವಾಗಿರುವ ಮುಲ್ಲಪೆರಿಯಾರ್ ಅಣೆಕಟ್ಟೆಗೆ ನೂರು ವರ್ಷವಾಗಿದ್ದು, ದುರ್ಬಲ ಮತ್ತು ಭೂಕಂಪನ ವಲಯದಲ್ಲಿದ್ದು, ಅತ್ಯಂತ ಅಪಾಯಕಾರಿ ಸ್ಥಿತಿಯಲ್ಲಿರುವುದಾಗಿ ತಿಳಿಸಿದೆ. ಈ ಅಣೆಕಟ್ಟಿನ ಕೆಳ ಪ್ರವಾಹದ ವ್ಯಾಪ್ತಿಯಲ್ಲಿ ಬರುವ ನಾಲ್ಕು ಜಿಲ್ಲೆಗಳಲ್ಲಿ ಮೂವತ್ತೈದು ಲಕ್ಷಕ್ಕೂ ಹೆಚ್ಚು ಜನರು ವಾಸವಿದ್ದು, ಅಕಸ್ಮಾತ್ ಈ ಅಣೆಕಟ್ಟು ಒಡೆದಲ್ಲಿ ಊಹಿಸಲಾರದಂತಹ ವಿನಾಶಕಾರಿ ಜಲಪ್ರಳಯ ಸಂಭವಿಸಲಿದೆಯೆಂದು ಎಚ್ಚರಿಸಿದೆ. ಈ ಅಣೆಕಟ್ಟಿನ ವಿನ್ಯಾಸದಲ್ಲೂ ನ್ಯೂನತೆ ಇದೆಯೆಂದು ಭೀತಿ ವ್ಯಕ್ತಪಡಿಸಲಾಗಿದೆ.

ಕಳೆದ ವರ್ಷ ಉತ್ತರಾಖಂಡದ ಚಮೇಲಿ ಜಿಲ್ಲೆಯ ತಪೋವನ್ ಎಂಬಲ್ಲಿ ಉಂಟಾದ ಹಠಾತ್ ಪ್ರವಾಹದಿಂದ ಭಾರಿ ವಿನಾಶ ಸಂಭವಿಸಿತು. ಜಲವಿದ್ಯುತ್ ಯೋಜನೆಗಾಗಿ ನಿರ್ಮಿಸಿದ ಅಣೆಕಟ್ಟುಗಳು ನಾಶವಾಗಿ ಕೋಟ್ಯಾಂತರ ರೂಪಾಯಿ ನಷ್ಟ ಮತ್ತು ಅನೇಕ ಮಂದಿ ಪ್ರಾಣ ಕಳೆದುಕೊಂಡಿದ್ದರು. ಕರ್ನಾಟಕದಲ್ಲೂ ಅಕ್ರಮ/ಸಕ್ರಮ ಗಣಿಗಾರಿಕೆಯಿಂದ ಹಳೆಯದಾದ ಕನ್ನಂಬಾಡಿ ಅಣೆಕಟ್ಟು ಅಪಾಯದಲ್ಲಿದೆ ಎಂಬ ಆತಂಕ ವ್ಯಕ್ತಪಡಿಸಲಾಗುತ್ತಿದೆ. ತಜ್ಞರು, ಪರಿಸರವಾದಿಗಳು ಅವೈಜ್ಞಾನಿಕ ಎಂದು ಹೇಳುತ್ತಿರುವ ಎತ್ತಿನ ಹೊಳೆ ಯೋಜನೆಯ ಕಾಮಗಾರಿ ಆಮೆಗತಿಯಲ್ಲಿ ಸಾಗುತ್ತಿದೆ. ಈ ಯೋಜನೆ ಬಯಲು ಸೀಮೆ ಜಿಲ್ಲೆಗಳಾದ ಕೋಲಾರ, ಚಿಕ್ಕಬಳ್ಳಾಪುರ ಜಿಲ್ಲೆಯ ಜನರ ಕುಡಿಯುವ ನೀರಿನ ಸಮಸ್ಯೆಗೆ ಶಾಶ್ವತ ಪರಿಹಾರ ನೀಡುವ ಬಗ್ಗೆ ಅನುಮಾನಗಳಿವೆ. ಆದರೆ ಈ ಯೋಜನೆಯು ಅಧಿಕಾರಸ್ಥರಿಗೆ ಹಣದ ಹೊಳೆ ಹರಿಸುತ್ತಿದೆಯೆಂಬ ಅನುಮಾನದ ಹುತ್ತ ಈ ಯೋಜನೆಯ ಸುತ್ತ ಇದೆ. ಅಭಿವೃದ್ಧಿಯ ಹೆಸರಿನಲ್ಲಿ ಅವ್ಯಾಹತವಾಗಿ ಸಾಗುತ್ತಿರುವ ಅರಣ್ಯ ನಾಶ, ಅಕ್ರಮ ಗಣಿಗಾರಿಕೆ, ಕೆರೆ–ಸರೋವರಗಳ ಸಮಾಧಿ ಮೇಲೆ ಅರಮನೆಗಳನ್ನು ನಿರ್ಮಿಸುವ ಮೂಲಕ ಮಾನವನು ಪ್ರಕೃತಿಯ ಮೇಲೆ ಅನಾಚಾರಗಳನ್ನು ಮುಂದುವರಿಸುತ್ತಿದ್ದಾನೆ. ಈ ರೀತಿ ಮನುಕುಲ ತನ್ನ ನಾಶಕ್ಕೆ ತಾನೇ ಮುನ್ನುಡಿ ಬರೆಯುತ್ತಿದೆ.

ಅನಾಥ ಮಕ್ಕಳ ದೇವಾಲಯ ತಾತಯ್ಯನವರ ಅನಾಥಾಲಯ

'ಸಾಫ್ಟ್‌ವೇರ್ ರತ್ನಾಕರ' ಡಾ. ಎಸ್.ಮುರಳಿ ಅವರಿಗೆ ಇಂದು ತಾತಯ್ಯ ಪ್ರಶಸ್ತಿ–2022 ಪ್ರದಾನ



ಎಂ. ವೆಂಕಟಕೃಷ್ಣಯ್ಯ(ತಾತಯ್ಯ)

ಶ್ರೀ ಎಂ.ವೆಂಕಟಕೃಷ್ಣಯ್ಯ(ತಾತಯ್ಯ) ಅವರ 178ನೇ ಜಯಂತ್ಯುತ್ಸವ ಹಾಗೂ ಅವರ ಹೆಸರಿನಲ್ಲಿ ಕೊಡಮಾಡುವ ಪ್ರಶಸ್ತಿ ಪ್ರದಾನ ಸಮಾರಂಭ ಮೈಸೂರಿನ ನಾರಾಯಣಶಾಸ್ತ್ರಿ ರಸ್ತೆಯಲ್ಲಿನ ತಾತಯ್ಯನವರ ಅನಾಥಾಲಯ ಆವರಣದಲ್ಲಿ ನಾಳೆ(ಸೆ.10) ಸಂಜೆ 4 ಗಂಟೆಗೆ ನಡೆಯುತ್ತಿದೆ.

ಅನಾಥಾಲಯದ ಅಧ್ಯಕ್ಷರೂ ಆದ ಕೇಂದ್ರ ಸರ್ಕಾರದ ನಿವೃತ್ತ ಅಪರ ಕಾರ್ಯದರ್ಶಿ ಸಿ.ವಿ.ಗೋಪಿನಾಥ್ ಅಧ್ಯಕ್ಷತೆಯಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಚಿಂತಕ, ಬರಹಗಾರ ರೋಹಿತ್ ಚಕ್ರತೀರ್ಥ ವಿಶೇಷ ಆಹ್ವಾನಿತರಾಗಿ ಭಾಗವಹಿಸಲಿದ್ದಾರೆ.

ಈ ಬಾರಿ 'ಶ್ರೀ ಎಂ.ವೆಂಕಟಕೃಷ್ಣಯ್ಯ ಪ್ರಶಸ್ತಿ'ಯನ್ನು ಶಿಕ್ಷಣ ತಜ್ಞ ಡಾ.ಎಸ್.ಮುರುಳಿ ಅವರಿಗೆ ಪ್ರದಾನ ಮಾಡಿ ಅಭಿನಂದಿಸಲಾಗುತ್ತದೆ. ಇವರು ಕಂಪ್ಯೂ ಟರ್ ತಜ್ಞರು, ಸಾಫ್ಟ್‌ವೇರ್ ರತ್ನಾಕರ ಎಂದೇ ಹೆಸರುವಾಸಿಯಾಗಿದ್ದಾರೆ. ಮೈಸೂರು ವಿವಿಯಲ್ಲಿ ಕಂಪ್ಯೂಟರ್ ಎಂಜಿನಿಯರಿಂಗ್‌ನಲ್ಲಿ ಪಿಎಚ್.ಡಿ ಪಡೆದಿದ್ದು, 33 ವರ್ಷಗಳಿಗೂ ಹೆಚ್ಚು ಕಾಲ ಬೋಧಕರಾಗಿ ಸೇವೆ ಸಲ್ಲಿಸಿದ್ದಾರೆ ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ 250ಕ್ಕೂ ಹೆಚ್ಚು ಪ್ರಬಂಧ ಮಂಡಿಸಿದ್ದಾರೆ. ಪ್ರಸ್ತುತ 2 ತಾಂತ್ರಿಕ ಕಾಲೇಜು, 20 ಪದವಿ ಕಾಲೇಜು, 2 ಎಂಬಿಎ ಹಾಗೂ ಆಯುರ್ವೇದ ಪದವಿ ಹಾಗೂ ನರ್ಸಿಂಗ್ ಕಾಲೇಜಿನ ಮುಖ್ಯಸ್ಥರಾಗಿ ಸೇವೆ ಸಲ್ಲಿಸುತ್ತಿದ್ದು, ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಮಟ್ಟದ ಹಲವು ಪ್ರಶಸ್ತಿಗಳು ಸಂದಿವೆ.


ಈ ಸಮಾರಂಭದ ಅಧ್ಯಕ್ಷತೆ ವಹಿಸಲಿರುವ ಸಿ.ವಿ. ಗೋಪಿನಾಥ್ ಅವರು ಸಹ ಅನಾಥಾಲಯದ ಹಿರಿಯ ವಿದ್ಯಾರ್ಥಿ ಮಾತ್ರವಲ್ಲ ಈಗ ಅನಾಥಾಲಯದ ಸಾರಥಿ ಆಗಿದ್ದಾರೆ. ಇವರು ಕೇಂದ್ರ ಸರ್ಕಾರದ ಮಾಜಿ ಅಪರ ಕಾರ್ಯದರ್ಶಿಯೂ ಹೌದು. ತಾತಯ್ಯನವರ ಅನಾಥಾಲಯವನ್ನು ಯಶಸ್ವಿಯಾಗಿ ಮುನ್ನಡೆಸಿಕೊಂಡು ಹೋಗುವಲ್ಲಿ ಭಾರೀ ಪರಿಶ್ರಮ ವಹಿಸುತ್ತಿದ್ದಾರೆ.

ಅನಾಥ ಮಕ್ಕಳ ಪಾಲಿನ ದೇವಾಲಯ ಈ 'ಅನಾಥಾಲಯ'

ಮೈಸೂರಿನ ಮನೆಮಾತಾಗಿರುವ ಕೆಲವು ಹೆಸರುಗಳ ಪೈಕಿ ದಿವಂಗತ ವೆಂಕಟಕೃಷ್ಣಯ್ಯನವರ ಹೆಸರು ಪ್ರಮುಖವಾದುದು. ಅವರನ್ನು ಎಲ್ಲರೂ ಗೌರವದಿಂದ 'ತಾತಯ್ಯ' ಎಂದೇ ಕರೆಯುತ್ತಿದ್ದರು. ಇವರು ಪತ್ರಿಕೋದ್ಯಮಿಯಾಗಿ, ಸ್ವಾತಂತ್ರ್ಯ ಹೋರಾಟಗಾರರಾಗಿ, ಅಲ್ಲದೇ ಬಡಮಕ್ಕಳಿಗಾಗಿ ಅನಾಥಾಲವನ್ನು ಸ್ಥಾಪಿಸಿದ್ದರು. ಅದು ಮೈಸೂರಿನಲ್ಲಿ ಈಗಲೂ ಯಶಸ್ವಿಯಾಗಿ ನಡೆಯುತ್ತಿದೆ.



ಡಾ. ಎಸ್. ಮುರಳಿ



ಸಿ.ವಿ.ಗೋಪಿನಾಥ್

ಶ್ರೀ ವೆಂಕಟಕೃಷ್ಣಯ್ಯನವರ ಜೀವನ ಒಂದು ಹೋರಾಟದ ಅದ್ಭುತವೆನಿಸುವಂತಹುದು. ಅವರ ಜೀವನ ಕಷ್ಟಕರವಾದ ಜೀವನ. ಹೆಚ್ಚು ಓದಲೂ ಸಾಧ್ಯವಾಗದ ಪರಿಸ್ಥಿತಿ. ಆದರೆ ಹೆಚ್ಚು ಓದಿದವರೂ ಸಾಧಿಸಲಾಗದ ಸಾಧನೆಯನ್ನು ಅವರು ಮಾಡಿದ್ದಾರೆ. ಅದು ಹೋರಾಟದ ಬದುಕಿನ ಫಲ. ಅತ್ಯಂತ ನಿಷ್ಠುರವಾದಿಯಾದರೂ, ವಿರೋಧಿಗಳೂ ಅವರನ್ನು ಮೆಚ್ಚುವಂತೆ ಅವರ ಜೀವನ ಇತ್ತು ಏಕೆಂದರೆ ಅದು ಸ್ವಾರ್ಥರಹಿತ ಜೀವನ. ಅವರ ನಡೆಯ ಹಾದಿ ಅವಲೋಕಿಸಿದಾಗ ಒಬ್ಬ ವ್ಯಕ್ತಿ ಇಷ್ಟೆಲ್ಲಾ ಮಾಡಲು ಸಾಧ್ಯವಾಯಿತೇ ಎನಿಸುತ್ತದೆ. ಅವರನ್ನು ಸಮಾಜ ಗುರುತಿಸುತ್ತಿದ್ದ ರೀತಿಯೇ ವೈಶಿಷ್ಟ್ಯಪೂರ್ಣವಾದುದು. ಅವರನ್ನು 'ಪತ್ರಿಕೋದ್ಯಮದ ಪಿತಾಮಹ', 'ತಾತಯ್ಯ', 'ದಯಾಸಾಗರ' ಎಂದೆಲ್ಲಾ ಕರೆಯಲಾಗುತ್ತಿತ್ತು. ಇದಕ್ಕಿಂತ ಮಿಗಿಲಾಗಿ ಗಾಂಧೀಜಿಯವರಿಂದ 'ಭೀಷ್ಮಾಚಾರ್ಯ' ಎಂದೂ ಕರೆಸಿಕೊಂಡಿದ್ದರು.

ಬಾಲಕರಾಗಿದ್ದಾಗಲೇ ತಂದೆಯನ್ನು ಕಳೆದುಕೊಂಡು ಮೈಸೂರಿಗೆ ಬಂದು, ಕಡುಕಷ್ಟದ ಜೀವನ ನಡೆಸಿದ ಕುಟುಂಬ ಅವರದ್ದು. ಸುಬ್ಬರಾಯರು ವಿದ್ಯೆ ಕಲಿಸುವ ವ್ಯವಸ್ಥೆ ಮಾಡಿದರು. ನಂತರ ಓದಿ ಸಹ ಉಪಾಧ್ಯಾಯರಾಗಿ, ಆದರ್ಶ ಶಿಕ್ಷಕರಾಗಿ ಬೆಳಗಿದರು.

ತಾವು ಶಿಕ್ಷಕರಾಗಿದ್ದಾಗ ಓದುತ್ತಿದ್ದ ಕೆಲವು ಬಡಮಕ್ಕಳು ವಾರಾನ್ನ ಮಾಡಿಕೊಂಡಿದ್ದನ್ನು ಕಂಡ ಅವರು ನಾರಾಯಣ ಶಾಸ್ತ್ರಿ ರಸ್ತೆಯಲ್ಲಿ ಅನಾಥಾಲಯ ಸ್ಥಾಪಿಸಿದರು. ಮೈಸೂರಿಗೆ ಅನೇಕ ವಿದ್ಯಾರ್ಥಿಗಳು ಓದಲು ಬರುತ್ತಾರೆ. ಅದರಲ್ಲಿ ಸಾಕಷ್ಟು ಮಕ್ಕಳು ಓದುವ ಆಸೆ ಇದ್ದರೂ ಅವರ ಆರ್ಥಿಕ ಸ್ಥಿತಿಯಿಂದಾಗಿ ಓದು ಮುಂದುವರೆಸಲು ಸಾಧ್ಯವಾಗುವುದಿಲ್ಲ. ಆದರೆ ಹಾಗೆ ಮಕ್ಕಳು ಓದದಿದ್ದರೆ ಅದು ದೇಶಕ್ಕೆ ಆಗುವ ನಷ್ಟ, ಹಾಗಾಗದೆ ಶಕ್ತಿ ಇರುವವರು ಅಂತಹ ಮಕ್ಕಳ ಓದಿಗೆ ಸಹಾಯ ಮಾಡಬೇಕು. ಅವರಿಗೆ ವಸತಿ, ಊಟ–ತಿಂಡಿಗೆ ವ್ಯವಸ್ಥೆ ಮಾಡಬೇಕು, ಅವರ ಓದಿಗೆ ಸಂಬಂಧಿಸಿದಂತೆ ಶಾಲಾ ಫೀಸನ್ನು ಕಟ್ಟಬೇಕು, ಅವರಿಗೆ ಓದಲು ಪಠ್ಯಪುಸ್ತಕಗಳನ್ನು ಒದಗಿಸಬೇಕು. ಹೀಗೆ ಮಾಡಿದಾಗ ಅವರು ಓದುತ್ತಾರೆ, ನಂತರ ದೇಶದ ಆಸ್ತಿಯಾಗುತ್ತಾರೆ ಎಂದೇ ನಮ್ಮ ಹಿಂದಿನವರು ಭಾವಿಸುತ್ತಿದ್ದರು. ಹಾಗೆ ಭಾವಿಸಿದವರಲ್ಲಿ ಮೈಸೂರಿನಲ್ಲಿ ಮೊದಲ ಸಾಲಿನಲ್ಲಿ ಕಾಣುವ ಹೆಸರು ದಿವಂಗತ ವೆಂಕಟಕೃಷ್ಣಯ್ಯನವರು. ಹಾಗಾಗಿ ಇಂದಿಗೂ ಅವರು ಸ್ಥಾಪಿಸಿದ ಅನಾಥಾಲಯವನ್ನು 'ತಾತಯ್ಯನವರ ಅನಾಥಾಲಯ' ಎಂದೇ ಕರೆಯಲಾಗುತ್ತದೆ. ಗಂಡು ಮಕ್ಕಳಿಗೆ ಮಾತ್ರವಲ್ಲ ಹೆಣ್ಣುಮಕ್ಕಳು, ವಿಧವೆಯರ ಬಗ್ಗೆಯೂ ಅವರು ಯೋಚಿಸುತ್ತಿದ್ದರು.

ಬಹಳ ಹಿಂದೆ ನಂಜುಂಡಪ್ಪ ಎನ್ನುವವರ ಒಡೆತನದಲ್ಲಿ ಒಂದು ಮಠವಿತ್ತು. ಅವರು ತಮ್ಮ ಅವಸಾನದ ಪೂರ್ವದಲ್ಲಿ ಅದನ್ನು ಸ್ವಾಮಿ ವಿಶ್ವೇಶ್ವರಾನಂದ ಸರಸ್ವತಿ ಎಂಬ ಯತಿಗಳಿಗೆ ವಹಿಸಿಕೊಟ್ಟರು. ಈ ಯತಿಗಳು ಕೆಲವು ಅನಾಥ ಮಕ್ಕಳಿಗೆ ತಮ್ಮ ಮಠದಲ್ಲಿ ಅನ್ನ ವಸತಿ ಕಲ್ಪಿಸಿ ಸಹಾಯ ಮಾಡುತ್ತಿದ್ದರು. ನಂತರ ಮಠವನ್ನು ಶ್ರೀ ವೆಂಕಟಕೃಷ್ಣಯ್ಯನವರು, ಕೆ ಚಂದ್ರಶೇಖರಯ್ಯನವರು, ಹೆಚ್ ಕೃಷ್ಣರಾಯರು, ಡಾ|| ಆರ್ಮುಗಂ ಮೊದಲಿಯಾರ್ ಇವರುಗಳನ್ನು ಹೊಂದಿದ ಒಂದು ಸಮಿತಿಗೆ ವಹಿಸಿಕೊಟ್ಟರು. ಇದು ನಡೆದಿದ್ದು ಸುಮಾರು 1890 ರಲ್ಲಿ. ಈ ಸಮಿತಿಯು ಸಭೆ ಸೇರಿ ಅನಾಥ ವಿದ್ಯಾರ್ಥಿಗಳಿಗೆ ಅನ್ನ–ವಸತಿಗಳನ್ನು ನೀಡಿ ಸಹಾಯ ಮಾಡುವ ಒಂದು ಸಂಸ್ಥೆಯನ್ನು ಮಠದಲ್ಲಿ ಸ್ಥಾಪಿಸಲು ನಿರ್ಧರಿಸಿದರು. ಅದರಂತೆ ಅನಾಥಾಲಯ ಪ್ರಾರಂಭ ವಾಯಿತು. ಆದರೆ ಸಮಿತಿಯಿದ್ದರೂ ಈ ಅನಾಥಾಲಯ ನಡೆಸುವ ಜವಾಬ್ದಾರಿ ವೆಂಕಟಕೃಷ್ಣಯ್ಯನವರ ಹೆಗಲಿಗೇರಿತು.

ಅನಾಥಾಲಯ ನಡೆಸುವುದು ಅಷ್ಟು ಸುಲಭದ ಮಾತಾಗಿರಲಿಲ್ಲ. ಇದಕ್ಕಾಗಿ ಅವರು ಮನೆಮನೆಗೆ ಅಲೆಯುವಂತಾಯಿತು. ಹಣ, ಅಕ್ಕಿ, ಉಪ್ಪು, ಎಣ್ಣೆ, ಬೇಳೆ ಹೀಗೆ ಜನರು ಕೊಟ್ಟಿದ್ದನ್ನು ಸಂಗ್ರಹಿಸಿಕೊಂಡು ಬರುವ ಕೆಲಸವನ್ನು ಅವರು ಮಾಡಬೇಕಾಯಿತು. ಇದಕ್ಕಾಗಿ ಅವರು ನಗರದ ವಿವಿಧ ಭಾಗಗಳಲ್ಲಿ ಕೆಲವು ಸಮಿತಿಗಳನ್ನು ಮಾಡಿ ಅನಾಥಾಲಯ ನಡೆಸಲು ಸಹಕರಿಸುವಂತೆ ಕೇಳಿಕೊಂಡರು. ಅನಾಥಾಲಯದ ಮಕ್ಕಳಿಗೆ ಊಟ ವಸತಿಯ ಜೊತೆಗೆ ಬಟ್ಟೆಬರೆಗಳು, ಪಠ್ಯಪುಸ್ತಕಗಳು, ಶಾಲಾ ಶುಲ್ಕವನ್ನೂ ಭರಿಸಬೇಕಾಗಿತ್ತು. ಜೊತೆಗೆ ವಿದ್ಯಾರ್ಥಿಗಳ ಆರೋಗ್ಯ ಕೆಟ್ಟರೆ ವೈದ್ಯರ ಸಹಕಾರ ಬೇಕಾಗಿತ್ತು. ಮಕ್ಕಳ ಅನುಕೂಲಕ್ಕಾಗಿ ಅವರು ಅನಾಥಾಲಯಕ್ಕೆ ಒಬ್ಬ ಕ್ಷೌರಿಕನನ್ನು ಹಾಗೂ ಬಟ್ಟೆ ಶುಭ್ರಗೊಳಿಸಿ ಕೊಡಲು ಒಬ್ಬರನ್ನೂ ನೇಮಕ ಮಾಡಿದ್ದರು ಎಂದರೆ ಅವರ ದೂರಾಲೋಚನೆ ಹಾಗೂ ಬಡ ಮಕ್ಕಳ ಬಗ್ಗೆ ಇದ್ದ ಕರುಣಾ ಭಾವನೆ ಮನ ಮುಟ್ಟುತ್ತದೆ.

1915 ರ ಸುಮಾರಿಗೆ ಈ ಅನಾಥಾಲಯದಲ್ಲಿ 52 ವಿದ್ಯಾರ್ಥಿಗಳಿದ್ದರು. ಮಕ್ಕಳಿಗೆ ಶಾಲಾ ವಿದ್ಯಾಭ್ಯಾಸದ ಜೊತೆಗೆ ಮರಗೆಲಸ, ಹೊಲಿಗೆ, ನೇಯ್ಗೆ, ಚಾಪೆ ಹೆಣೆಯುವುದು ಮೊದಲಾದ ಕೈಕಸುಬುಗಳನ್ನೂ ಕಲಿಸಬೇಕೆಂದು ಅವರು ಬಯಸಿ ವ್ಯವಸ್ಥೆ ಮಾಡಿದರು. ಮಕ್ಕಳು ಸಂಸ್ಕೃತ ಜ್ಞಾನ ಹೊಂದಬೇಕು, ಅವರು ಆಚಾರ ವಿಚಾರಗಳನ್ನು ಅರಿತಿರಬೇಕು ಎಂದೂ ಒಬ್ಬರು ಸಂಸ್ಕೃತ ಕಲಿಸುವ ಶಿಕ್ಷಕರನ್ನೂ ನೇಮಕ ಮಾಡಿಕೊಂಡರು.

ಈ ಅನಾಥಾಲಯದ ಮಕ್ಕಳು ವೇದ ಉಪನಿಷತ್ತನ್ನೂ ಕಲಿಯಬೇಕಾಗಿತ್ತು. ಇದರಿಂದಾಗಿ ಸಂಸ್ಥೆ ಎಷ್ಟು ಜನಪ್ರಿಯವಾಯಿತು ಎಂದರೆ ಮೈಸೂರಿನ ಅನೇಕ ಮನೆಗಳಲ್ಲಿ ನಡೆಯುವ ಮಂಗಳ ಕಾರ್ಯದ ಸಮಯದಲ್ಲಿ ಈ ಮಕ್ಕಳನ್ನು ಆಹ್ವಾನಿಸಿ ಅವರಿಂದ ವೇದೋಪನಿಷತ್ತುಗಳನ್ನು ಹೇಳಿಸಿ, ದಕ್ಷಿಣೆ ತಾಂಬೂಲ ನೀಡಿ ಕಳುಹಿಸುತ್ತಿದ್ದರು. ಶೃಂಗೇರಿಯ ಜಗದ್ಗುರುಗಳಾಗಿದ್ದ ಶ್ರೀ ನರಸಿಂಹಭಾರತಿ ಸ್ವಾಮಿಗಳು ಮೈಸೂರಿಗೆ ಬಂದಿದ್ದಾಗ ಈ ಮಕ್ಕಳಿಂದ ವೇದ ಘೋಷ ಮಾಡಿಸಿ ಸಂತಸಪಟ್ಟು ಎಲ್ಲರಿಗೂ ಒಂದು ಜೊತೆ ರೇಷ್ಮೆ ಪಂಚೆ ಕೊಟ್ಟಿದ್ದರು.

ವಿದ್ಯಾರ್ಥಿಗಳ ವಿದ್ಯಾಭ್ಯಾಸ ಹಾಗೂ ಊಟೋಪಚಾರಕ್ಕಾಗಿ ಅನೇಕರು ಕಾತುರರಾಗಿ ಕಾಯ್ದು ಆರ್ಥಿಕ ಸಹಾಯ ಮಾಡುತ್ತಿದ್ದರು. 1897 ರಲ್ಲಿ ಅಮ್ಮಣ್ಣನೆಂಬ ಒಬ್ಬ ಮಹಿಳೆ ವಿದ್ಯಾರ್ಥಿಗಳಿಗೆ ಅಡುಗೆ ಮಾಡಲು ತಾವಾಗಿಯೇ ಮುಂದೆ ಬಂದರು. ಅದರಲ್ಲೇ ಅವರು ಬಾಳಿನ ಸಾರ್ಥಕ್ಯ ಕಂಡರು. ಅದೇ ರೀತಿ ಕಸಮುಸುರೆ ಮಾಡಲು ಎಂದು 1906 ರಲ್ಲಿ ಬಂದ ಚಿಕ್ಕಮ್ಮ ಎಂಬ ಮಹಿಳೆ ನಿಸ್ವಾರ್ಥವಾಗಿ ದುಡಿದರು. ಕೊನೆಗೆ ಆಕೆಯು ತನಗೆ ಸೇರಿದ್ದ ಸ್ವಲ್ಪ ಆಸ್ತಿ ಹಾಗೂ ಕೂಡಿಟ್ಟಿದ್ದ ಹಣವನ್ನು ಅನಾಥಾಲಯಕ್ಕೇ ನೀಡಿ ಸಾರ್ಥಕ ಭಾವ ಹೊಂದಿದರು. 1910 ರಲ್ಲಿ ಮಿರ್ಲೆ ಕೃಷ್ಣಪ್ಪ ತಮಗೆ ಸೇರಿದ್ದ ಇಪ್ಪತ್ತು ಎಕರೆ ತರಿ ಭೂಮಿ ಹಾಗೂ ಹನ್ನೆರಡು ಸಾವಿರ ರೂಪಾಯಿಗಳನ್ನು ಅನಾಥಾಲಯಕ್ಕೆ ನೀಡಿದ್ದರು. ಇದರಿಂದಾಗಿ ಮಕ್ಕಳಿಗೆ ಊಟದ ದೊಡ್ಡ ಸಮಸ್ಯೆ ನಿವಾರಣೆಯಾದಂತಾಗಿತ್ತು.

ಮೈಸೂರಿಗೆ ಬಂದಿದ್ದ ಸ್ವಾಮಿ ವಿವೇಕಾನಂದರು ಈ ಅನಾಥಾಲಯಕ್ಕೆ ಭೇಟಿ ನೀಡಿದ್ದರು. ಇಲ್ಲಿನ ಕೆಲಸ ಪವಿತ್ರ ಕೆಲಸ ಎಂದ ಅವರು ರಾಜಾತಿಥ್ಯವನ್ನು ಬಿಟ್ಟು ಅನಾಥಾಲಯದಲ್ಲೇ ಇದ್ದರು. ವಿಶ್ವಕವಿ ರವೀಂದ್ರನಾಥ ಠಾಗೋರರು 1913 ರಲ್ಲಿ ಅನಾಥಾಲಯಕ್ಕೆ ಭೇಟಿ ನೀಡಿದ್ದರು. ಅವರು ತಾವು ರಚಿಸಿದ್ದ ಇಂದಿನ ರಾಷ್ಟ್ರಗೀತೆ ಜನಗಣಮನವನ್ನು ತಾವೇ ಸ್ವತಃ ವಿದ್ಯಾರ್ಥಿಗಳಿಗೆ ಕಲಿಸಿಕೊಟ್ಟಿದ್ದರು. ಮಹಾತ್ಮಾ ಗಾಂಧೀಜಿ 1927ರಲ್ಲಿ ಇಲ್ಲಿಗೆ ಭೇಟಿ ನೀಡಿದ್ದರು.

ಅವರ ಬದುಕು ಕೇವಲ ಅನಾಥಾಲಯ ಸ್ಥಾಪಿಸಲು ಮಾತ್ರ ಮೀಸಲಾಗಲಿಲ್ಲ. ಅವರು ಸ್ವಾತಂತ್ರ್ಯ ಹೋರಾಟಗಾರರಾಗಿ, ಪತ್ರಿಕೋದ್ಯಮಿಯಾಗಿ, ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿ ಸೇವಾ ಸಾಧನೆ ಮಾಡಿದ್ದಾರೆ. ಮೈಸೂರಿನಲ್ಲಿ ಹಲವು ಸಂಸ್ಥೆಗಳ ಬೆಳವಣಿಗೆಗೆ ಕಾರಣವಾದರು. ಮೈಸೂರಿನಲ್ಲಿ ಈಗ ಪ್ರತಿಷ್ಠಿತ ವಿದ್ಯಾಸಂಸ್ಥೆ ಎಂದು ಹೆಸರು ಮಾಡಿರುವ ಶಾರದಾ ವಿಲಾಸ ವಿದ್ಯಾಸಂಸ್ಥೆ ಅವರೇ ಪ್ರಾರಂಭಿಸಿದ್ದು. ತಾತಯ್ಯನವರು 1933ರ ನವೆಂಬರ್ 8 ರಂದು ಇಹಲೋಕ ತ್ಯಜಿಸಿದರು. ಆದರೆ ಅವರ ಹೆಸರು ಈ ಅನಾಥಾಲಯದ ಮೂಲಕ ಇಂದಿಗೂ ಶಾಶ್ವತವಾಗಿ ಉಳಿದಿದೆ.

– ಡಾ. ವಿ ರಂಗನಾಥ್

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಮೂರನೇ ಪುಟದಿಂದ

ಸುರಂಗ ಮಾರ್ಗ

ಅತೀ ಉದ್ದದ ಈ ಸುರಂಗ ಮಾರ್ಗ ಅತ್ಯಂತ ಆಧುನಿಕವಾಗಿ ನಿರ್ಮಾಣಗೊಳ್ಳಲಿದೆ. ರೈಲಿನಲ್ಲಿ ಸಂಚರಿಸುವ ಪ್ರಯಾಣಿಕರಿಗೆ ಯಾವುದೇ ರೀತಿಯ ತೊಂದರೆ ಇರುವುದಿಲ್ಲ. ಮೆಟ್ರೋ ಸುರಂಗ ಮಾರ್ಗಕ್ಕೆ ಅನುಸರಿಸಿದ ತಂತ್ರಜ್ಞಾನವನ್ನು ಇಲ್ಲಿಯೂ ಅನುಸರಿಸುತ್ತೇವೆ ಎಂದರು. ಕಾಡು ಉಳಿಸುವುದು ಮತ್ತು ಪರಿಸರಕ್ಕೆ ಧಕ್ಕೆ ಬಾರದಂತೆ ನೋಡಿಕೊಳ್ಳಲು ಈ ಸುರಂಗ ನಿರ್ಮಾಣವಾಗಲಿದೆ ಎಂದ ಅವರು, ಈ ಸುರಂಗ ಕೂಡ ಅರಣ್ಯ ಪ್ರದೇಶದ ಗುಡ್ಡಗಾಡು ಪ್ರದೇಶದಲ್ಲಿ ಸಾಗಲಿದೆ ಎಂದು ವಿವರಿಸಿದರು. ಯೋಜನೆ ಅನುಷ್ಠಾನಗೊಂಡ ನಂತರ ಈ ಮಾರ್ಗದಲ್ಲಿ ಸಂಚರಿಸುವವರಿಗೆ ಅರವತ್ತೆರಡು ಕಿಲೋಮೀಟರ್‌ಗಳಷ್ಟು ದೂರ ಕಡಿಮೆಯಾಗಲಿದೆ ಎಂದರು. ಕೇರಳದ ತಲ್ಲಚೇರಿಯಿಂದ ಚಾಮರಾಜನಗರಕ್ಕೆ ರೈಲು ಸಂಪರ್ಕಿಸುವ ಯೋಜನೆಗೆ ರಾಜ್ಯ ಸರ್ಕಾರ ಅನುಮತಿ ನೀಡುವುದಿಲ್ಲ ಎಂದು ಇದೇ ಸಂದರ್ಭದಲ್ಲಿ ಅವರು ಸ್ಪಷ್ಟಪಡಿಸಿದರು.

ಕೇರಳದ ಪ್ರಸ್ತಾಪ: ಈ ಮಾರ್ಗದಲ್ಲಿ ನಾಗರಹೊಳೆ ಮತ್ತು ಬಂಡೀಪುರ ಸಂರಕ್ಷಿತ ಅರಣ್ಯ ಪ್ರದೇಶದ ಇಪ್ಪತ್ತೆರಡು ಕಿಮೀ ಉದ್ದದಷ್ಟು ರೈಲ್ವೆ ಸುರಂಗ ಮಾರ್ಗವನ್ನು ರೂಪಿಸಲು ಕೇರಳ ಸರ್ಕಾರ ಯೋಜನೆ ರೂಪಿಸಿ ಅನುಮತಿ ನೀಡಿದೆ. ಆದರೆ ಸಂರಕ್ಷಿತ ಅರಣ್ಯ ಪ್ರದೇಶದಲ್ಲಿ ಇಷ್ಟು ಬೃಹತ್ ಗಾತ್ರದ ಸುರಂಗ ಮಾರ್ಗ ನಿರ್ಮಿಸುವುದು ಸುರಕ್ಷಿತವಲ್ಲ, ಹಾಗೊಂದು ವೇಳೆ ಇದರ ನಿರ್ಮಾಣಕ್ಕೆ ಅನುಮತಿ ನೀಡಿದರೆ ಅರಣ್ಯ ಪ್ರದೇಶಕ್ಕೆ ಧಕ್ಕೆ ಆಗುತ್ತದೆ. ವನ್ಯ ಜೀವಿಗಳಿಗೆ ಹಾನಿಯಾಗುತ್ತದೆ.

ಕಾಂಗ್ರೆಸ್ ಮುಖಂಡ ಸೇರಿ ಐವರಿಗೆ ಜೈಲು ಶಿಕ್ಷೆ

5 ಕೋಟಿ ರೂ.ಗಳನ್ನು ಅಲಹಾಬಾದ್ ಬ್ಯಾಂಕ್‌ನಲ್ಲಿ ಠೇವಣಿ ಇಡಲಾಗಿತ್ತು. ತಮ್ಮ ಬ್ಯಾಂಕ್‌ನಲ್ಲೂ ಮುಡಾ ಹಣವನ್ನು ಠೇವಣಿ ಇಡುವಂತೆ 2013ರಲ್ಲಿ ಇಂಡಿಯನ್ ಬ್ಯಾಂಕ್‌ನ ಮ್ಯಾನೇಜರ್ ಮುಡಾಗೆ ಪತ್ರ ಬರೆದಿದ್ದರು. ಈ ಪತ್ರದ ಆಧಾರದ ಮೇರೆಗೆ ಮುಡಾದ ಅಂದಿನ ಅಯುಕ್ತ ಡಾ.ಹೆಚ್.ಹೆಚ್. ಶಿವರಾಮು 5 ಚೆಕ್‌ಗಳ ಮೂಲಕ ಇಂಡಿಯನ್ ಬ್ಯಾಂಕ್‌ಗೆ 5 ಕೋಟಿ ರೂ.ಗಳನ್ನು ವರ್ಗಾವಣೆ ಮಾಡಿದ್ದರು. ಆದರೆ, ಈ ಹಣವು ಕಾಂಗ್ರೆಸ್ ಮುಖಂಡ ಕೆಬ್ಬಳ್ಳಿ ಆನಂದ್ ತಂಡದ ಖಾತೆಗಳಿಗೆ ವರ್ಗಾವಣೆಯಾಗಿತ್ತು. ಅದೇ ವೇಳೆ ವಿವೇಕಾನಂದ ನಗರದ ಒಳ ಚರಂಡಿ ಕಾಮಗಾರಿಗೆ ಬಿಡುಗಡೆಯಾಗಿದ್ದ 5 ಕೋಟಿ ರೂ.ಗಳನ್ನು ಇಂಡಿಯನ್ ಬ್ಯಾಂಕ್‌ನಲ್ಲಿ ಠೇವಣಿ ಇಟ್ಟಿರುವುದಾಗಿ ನಕಲಿ ಬಾಂಡ್‌ಗಳನ್ನು ಮುಡಾ ದಾಖಲೆಗಳಲ್ಲಿ ಲಗತ್ತಿಸಲಾಗಿತ್ತು ಎಂದು ಹೇಳಲಾ ಗಿದೆ. ಹಣ ಬಿಡುಗಡೆಯಾಗಿ ಬಹಳ ದಿನಗಳಾ ದರೂ ಒಳ ಚರಂಡಿ ಕಾಮಗಾರಿ ಆರಂಭವಾಗದ ಕಾರಣ ಮುಡಾ ಸಭೆಗಳಲ್ಲಿ ಜನಪ್ರತಿನಿಧಿಗಳು ಗಲಾಟೆ ಮಾಡುತ್ತಿದ್ದರು. ಆಗ ಸಭೆಯ ಅಧ್ಯಕ್ಷತೆ ವಹಿಸಿದ್ದ ಅಂದಿನ ಜಿಲ್ಲಾಧಿಕಾರಿಗಳು ಒಳಚರಂಡಿ ಕಾಮಗಾರಿಗಾಗಿ ಇಂಡಿಯನ್ ಬ್ಯಾಂಕ್‌ನಲ್ಲಿ ಠೇವಣಿ ಇಟ್ಟಿರುವ ಹಣವನ್ನು ಕರ್ನಾಟಕ ಒಳ ಚರಂಡಿ ಮಂಡಳಿಗೆ ವರ್ಗಾಯಿಸುವಂತೆ ಮುಡಾ ಆಯುಕ್ತರಿಗೆ ಆದೇಶ ನೀಡಿದ್ದರು.

ಬ್ಯಾಂಕ್‌ನಲ್ಲಿ ಹಣವೇ ಇರಲಿಲ್ಲ: ಕರ್ನಾಟಕ ಒಳಚರಂಡಿ ಮಂಡಳಿಗೆ ಹಣ ವರ್ಗಾವಣೆ ಮಾಡಲು ಮುಡಾ ಆಯುಕ್ತರು ಮುಂದಾದರೆ ಇಂಡಿಯನ್ ಬ್ಯಾಂಕ್‌ನಲ್ಲಿದ್ದ ಮುಡಾ ಖಾತೆಯಲ್ಲಿ ಹಣವೇ ಇರಲಿಲ್ಲ. ಬ್ಯಾಂಕ್‌ನಿಂದ ಮುಡಾಗೆ ನೀಡಿದ್ದ ಎಫ್‌ಡಿ ಬಾಂಡ್‌ಗಳು ನಕಲಿ ಎಂದು ಬ್ಯಾಂಕ್ ಅಧಿಕಾರಿಗಳು ತಿಳಿಸಿದ್ದರು. ಈ ಹಿನ್ನೆಲೆಯಲ್ಲಿ ಹಣ ದುರುಪಯೋಗಪಡಿಸಿಕೊಂಡು ನಕಲಿ ಬಾಂಡ್‌ಗಳನ್ನು ಮುಡಾಗೆ ನೀಡಲಾಗಿದೆ ಎಂದು ಮುಡಾ ಆಯುಕ್ತರಾಗಿದ್ದ ಡಾ. ಎಚ್.ಎಸ್. ಶಿವರಾಮು ಅವರು 2013ರ ಜುಲೈ 5ರಂದು ಇಂಡಿಯನ್ ಬ್ಯಾಂಕ್‌ನ ನಿವೃತ್ತ ಮ್ಯಾನೇಜರ್ ರಾಮಸ್ವಾಮಿ ಮತ್ತು ಆಗ ಮ್ಯಾನೇಜರ್ ಆಗಿದ್ದ ಕುಮಾರ ನಾಯಕ್ ವಿರುದ್ಧ ಮಂಡ್ಯ ಪಶ್ಚಿಮ ಠಾಣೆಯಲ್ಲಿ ದೂರು ದಾಖಲಿಸಿದ್ದರು.

ಮುಡಾ ಆಯುಕ್ತರ ಬಂಧನ: ಈ ಪ್ರಕರಣವನ್ನು ತನಿಖೆ ನಡೆಸಿದ ಅಂದಿನ ಮಂಡ್ಯ ಡಿವೈಎಸ್ಪಿ ಡಾ. ವಿ.ಜೆ. ಶೋಭಾರಾಣಿ ಅವರು ದೂರು ನೀಡಿದ್ದ ಮುಡಾ ಆಯುಕ್ತರು, ಕಾಂಗ್ರೆಸ್ ಮುಖಂಡ ಕೆಬ್ಬಳ್ಳಿ ಆನಂದ್ ಸೇರಿದಂತೆ 8 ಮಂದಿ ವಿರುದ್ಧ ಮಂಡ್ಯ ಜೆಎಂಎಫ್‌ಸಿ ನ್ಯಾಯಾಲಯಕ್ಕೆ 2013ರ ಸೆ.10ರಂದು ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದರು. ಈ ಪ್ರಕರಣದಲ್ಲಿ ಆರೋಪಿಗಳಾಗಿದ್ದ ಇಂಡಿಯನ್ ಬ್ಯಾಂಕ್, ಬ್ಯಾಂಕ್‌ನ ನಿವೃತ್ತ ಮ್ಯಾನೇಜರ್ ಆರ್. ರಾಮಸ್ವಾಮಿ, ಆಗ ಮ್ಯಾನೇಜರ್ ಆಗಿದ್ದ ಎನ್. ಕುಮಾರನಾಯಕ್ ಅವರನ್ನು ಆರೋಪ ಪಟ್ಟಿಯಿಂದ ಕೈಬಿಟ್ಟಿದ್ದರು. ಮುಡಾ ಆಯುಕ್ತರು ಬ್ಯಾಂಕ್ ಮತ್ತು ಬ್ಯಾಂಕ್ ಅಧಿಕಾರಿಗಳ ವಿರುದ್ಧವೇ ದೂರು ಸಲ್ಲಿಸಿದ್ದರೂ ಕೂಡ ತನಿಖೆ ನಡೆಸಿದ ಡಿವೈಎಸ್ಪಿ ಶೋಭಾರಾಣಿ ಬ್ಯಾಂಕ್ ಮತ್ತು ಬ್ಯಾಂಕ್‌ನ ಅಧಿಕಾರಿಗಳ ಪಾತ್ರ ಈ ಪ್ರಕರಣದಲ್ಲಿ ಕಂಡು ಬರುತ್ತಿಲ್ಲ ಎಂದು ಆರೋಪ ಪಟ್ಟಿಯಲ್ಲಿ ತಿಳಿಸಿದ್ದರಲ್ಲದೆ, ದೂರುದಾರರಾದ ಮುಡಾ ಆಯುಕ್ತರನ್ನೂ ಕೂಡ ಆರೋಪಿ ಮಾಡಿದ್ದರು. ಅದು ಮಾತ್ರವಲ್ಲದೆ ಮುಡಾ ಆಯುಕ್ತ ಡಾ. ಎಚ್.ಎಸ್. ಶಿವರಾಮು, ಕಾಂಗ್ರೆಸ್ ಮುಖಂಡರ ಕೆಬ್ಬಳ್ಳಿ ಆನಂದ್ ಸೇರಿದಂತೆ ಆರು ಮಂದಿಯನ್ನು ಬಂಧಿಸಿದ್ದರು. ಇಬ್ಬರು ಆಗ ತಲೆಮರೆಸಿಕೊಂಡಿದ್ದರು. ಡಿವೈಎಸ್ಪಿ ದೋಷಾರೋಪಣಾ ಪಟ್ಟಿ ಸಲ್ಲಿಸಿದ ವೇಳೆ ಬೆಂಗಳೂರಿನ ವಿಧಿವಿಜ್ಞಾನ ಪ್ರಯೋಗಾಲಯದಿಂದ ಕೈಬರಹ ತಜ್ಞರ ವರದಿ ಬಂದಿರಲಿಲ್ಲ.

ಸಿಬಿಐಗೆ ವರ್ಗಾವಣೆ: ಈ ಪ್ರಕರಣ ಮಂಡ್ಯ ರಾಜಕೀಯ ವಲಯದಲ್ಲಿ ಭಾರೀ ತಲ್ಲಣವನ್ನೇ ಸೃಷ್ಟಿಸಿತ್ತು. ಅದೇ ವೇಳೆ ರಾಮನಗರ-ಚನ್ನಪಟ್ಟಣ ನಗರಾಭಿವೃದ್ಧಿ ಪ್ರಾಧಿಕಾರದಲ್ಲೂ ಕೆಬ್ಬಳ್ಳಿ ಆನಂದ್ ತಂಡ ಇಂತಹದ್ದೇ ಕೃತ್ಯ ಎಸಗಿದೆ ಎಂಬ ಆರೋಪಗಳು ಕೇಳಿಬಂದಿದ್ದು, ರಾಜಕೀಯ ಪಕ್ಷಗಳ ನಡುವೆ ಆರೋಪ-ಪ್ರತ್ಯಾರೋಪಗಳು ಕೇಳಿಬರುತ್ತಿದ್ದವು. ಆ ಸಂದರ್ಭದಲ್ಲಿ ಮುಖ್ಯಮಂತ್ರಿಗಳಾಗಿದ್ದ ಸಿದ್ದರಾಮಯ್ಯ ಅವರು ಪ್ರಕರಣವನ್ನು ಸಿಬಿಐಗೆ ವಹಿಸಲು ಆದೇಶ ನೀಡಿದ್ದರು. ಈ ಪ್ರಕರಣ 2014ರ ಮಾರ್ಚ್ 18ರಂದು ಸಿಬಿಐನಲ್ಲಿ ದಾಖಲಾಯಿತು. ಸಿಬಿಐನ ಅಂದಿನ ಡಿವೈಎಸ್ಪಿ ಕೆ.ವೈ. ಗುರುಪ್ರಸಾದ್ ಅವರು ತನಿಖೆ ನಡೆಸಿ, ಕೆಬ್ಬಳ್ಳಿ ಆನಂದ್, ಹೆಚ್.ಎಸ್. ನಾಗಲಿಂಗಸ್ವಾಮಿ, ಚಂದ್ರಶೇಖರ್, ಹೆಚ್.ಕೆ ನಾಗರಾಜ ಮತ್ತು ಕೆ.ಬಿ.ಹರ್ಷನ್ ವಿರುದ್ಧ ಸಿಬಿಐ ವಿಶೇಷ ನ್ಯಾಯಾಲಯದಲ್ಲಿ 2015ರ ಜೂನ್ 27ರಂದು ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದರು.

2ನೇ ಎಲಿಜಬೆತ್ ಅಂತ್ಯಕ್ರಿಯೆ

ಮಂದಿರದಲ್ಲಿ ಪತಿ ಪ್ರಿನ್ಸ್ ಫಿಲಿಪ್ ಸೇರಿದಂತೆ ಸಹೋ ದರಿ ಮಾರ್ಗರೇಟ್, ತಾಯಿ ಎಲಿಜ ಬೆತ್ ಮತ್ತು ತಂದೆ 5ನೇ ಜಾರ್ಜ್ ಅವರ ಸಮಾಧಿಯೊಂದಿಗೆ ರಾಣಿಯ ಸಮಾಧಿ ಮಾಡಲಾಗುತ್ತದೆ ಎಂದು ಮೂಲಗಳು ತಿಳಿಸಿವೆ. ಬ್ರಿಟನ್ ಇತಿಹಾಸ ದಲ್ಲಿ ಅತ್ಯಂತ ಹೆಚ್ಚಿನ ದಿನ ಆಳ್ವಿಕೆ ನಡೆಸಿದ ಎರಡನೇ ಎಲಿಜಬೆತ್ ರಾಣಿ 96ನೇ ವಯಸ್ಸಿನಲ್ಲಿ ಗುರುವಾರ ನಿಧನರಾದರು.

ನಾಳೆ ದೇಶಾದ್ಯಂತ ಶೋಕಾಚರಣೆ: ಬ್ರಿಟನ್ ರಾಣಿ ಎಲಿಜಬೆತ್II ನಿಧನದ ಹಿನ್ನೆಲೆಯಲ್ಲಿ ಭಾರತದಾದ್ಯಂತ ಒಂದು ದಿನದ ಶೋಕಾಚರಣೆ ನಡೆಸಲು ಭಾರತ ಸರ್ಕಾರ ನಿರ್ಧರಿಸಿದೆ ಎಂದು ಗೃಹ ವ್ಯವಹಾರಗಳ ಸಚಿವಾಲಯ ಪ್ರಕಟಿಸಿದೆ.

ನಿಯಮ ಪಾಲಿಸದ ಶಾಲೆಗೆ ಬೀಗ

● ಇಲಾಖೆಯಿಂದ ನೋಂದಣಿ ಪಡೆಯದ ಉಪಶಾಲೆಗಳು ● ಹೆಚ್ಚುವರಿ ತರಗತಿಯನ್ನು ಅನುಮತಿ ಪಡೆಯದೇ ಪ್ರಾರಂಭಿಸಿರುವ ಶಾಲೆಗಳು ● ಅನುಮತಿ ಪಡೆದ ನಂತರ ಮತ್ತೊಂದು ಮಾಧ್ಯಮದಲ್ಲಿ ಪಠ್ಯ ಬೋಧನೆ ಮಾಡುವುದು ● ಸರ್ಕಾರ ಅನುಮತಿ ನೀಡಿದ ಪಠ್ಯಕ್ರಮ ಬದಲಾಗಿ ಬೇರೆ ಪಠ್ಯ ಬೋಧನೆ ಮಾಡುವ ಶಾಲೆಗಳು ● ಶಾಲೆ ಸ್ಥಾಪನೆಗೆ ಅನುಮತಿ ಕೊಟ್ಟ ಜಾಗದಿಂದ ಅನುಮತಿ ಪಡೆಯದೇ ಸ್ಥಳಾಂತರ ಮಾಡಿದ ಶಾಲೆಗಳು ● ಅನುಮತಿ ಪಡೆಯದೇ ಬೇರೊಂದು ಆಡಳಿತ ಮಂಡಳಿ ನಡೆಸುವುದು ● ಬೇರೆ ಪಠ್ಯಕ್ರಮದ ಅನುಮತಿ ಪಡೆದ ಬಳಿಕವೂ ರಾಜ್ಯ ಪಠ್ಯಕ್ರಮ ಬೋಧನೆ ಮಾಡುವ ಶಾಲೆಗಳು

ವಿವಿಧ ಇಲಾಖೆಗಳಿಗೆ ಆದೇಶ

ಕೆಲಸ ಮಾಡುವ ಸ್ಕ್ಯಾವೆಂಜರ್‌ಗಳು ಸೇರಿದ್ದಾರೆ. ಮಾರ್ಗಸೂಚಿಗಳ ಹೊರತಾಗಿಯೂ ಇಲಾಖೆಗೆ ಕನಿಷ್ಠ ವೇತನ ನೀಡುತ್ತಿಲ್ಲ. ಪಾವತಿ ವಿಳಂಬದ ಕುರಿತು ವಿವಿಧ ವಲಯಗಳಿಂದ ದೂರುಗಳು ಬರುತ್ತಿವೆ ಎಂದು ಅಧಿಕಾರಿಗಳು ಹೇಳುತ್ತಾರೆ. ಸರ್ಕಾರದ ನಿಯಮ ಪಾಲಿಸದ ಏಜೆನ್ಸಿಗಳನ್ನು ಕಪ್ಪು ಪಟ್ಟಿಗೆ ಸೇರಿಸಲಾಗುವುದು ಎಂದು ಕಾರ್ಮಿಕ ಇಲಾಖೆಯ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಕೃಷಿ ಕಾರ್ಮಿಕರು, ಟೈಲರ್‌ಗಳು, ತೋಟಗಾರರು ಮತ್ತು ನೇಕಾರರು ಸೇರಿದಂತೆ ಕಾರ್ಮಿಕ ವರ್ಗದ ಅಡಿಯಲ್ಲಿ ಬರುವ 82 ವರ್ಗಗಳಿಗೆ ರಾಜ್ಯ ಸರ್ಕಾರವು ಕನಿಷ್ಠ ವೇತನವನ್ನು ಪರಿಷ್ಕರಿಸಿದೆ. ಕನಿಷ್ಠ ವೇತನವನ್ನು ಐದು ವರ್ಷಗಳಿಗೊಮ್ಮೆ ನಿಗದಿಪಡಿಸಲಾಗುತ್ತದೆ. ಈ ವರ್ಷ ಜುಲೈ ಕೊನೆಯ ವಾರದಲ್ಲಿ ಮಾಡಲಾಗಿದೆ. ಇತ್ತೀಚಿನ ಪರಿಷ್ಕರಣೆ ಯಂತೆ, ಇದು ತಿಂಗಳಿಗೆ 14 ಸಾವಿರ ರೂಪಾಯಿಗಳಿಂದ 18 ಸಾವಿರ ರೂಪಾಯಿಗಳವರೆಗೆ ಬದಲಾಗುತ್ತದೆ. ಸುತ್ತೋಲೆಯು ಎಂಟು ಗಂಟೆಗಳ ಕೆಲಸದ ಸಮಯವನ್ನು ಒತ್ತಿಹೇಳುತ್ತದೆ. ಉದ್ಯೋಗದಾತರು ದಿನಕ್ಕೆ ಎಂಟು ಗಂಟೆಗಳಿಗಿಂತ ಕಡಿಮೆ ಕೆಲಸ ಮಾಡಿದರೆ, ಅವರು ಗಂಟೆಯ ಆಧಾರದ ಮೇಲೆ ವೇತನವನ್ನು ಪಾವತಿಸಲು ಅವಕಾಶವನ್ನು ಹೊಂದಿರುತ್ತಾರೆ. ಕಾರ್ಮಿಕರನ್ನು ಎಂಟು ಗಂಟೆಗಳಿಗಿಂತ ಹೆಚ್ಚು ಕೆಲಸ ಮಾಡಿದರೆ, ಪ್ರತಿ ಹೆಚ್ಚುವರಿ ಗಂಟೆಗೆ ಅವರಿಗೆ ಹೆಚ್ಚಿನ ವೇತನ ನೀಡಬೇಕು. ಅಲ್ಲದೆ ಒಂದು ತಿಂಗಳಲ್ಲಿ ಕಾರ್ಮಿಕರಿಗೆ ನಾಲ್ಕು ದಿನ ರಜೆ ನೀಡಬೇಕು. ಮಾಲೀಕರು ತಮ್ಮ ರಜೆಯ ದಿನಗಳಲ್ಲಿ ಕಾರ್ಮಿಕರನ್ನು ಕೆಲಸ ಮಾಡಿಸಿದರೆ ಅವರಿಗೆ ಪರಿಹಾರ ನೀಡಬೇಕು. ಪ್ರತಿ ತಿಂಗಳ 5ನೇ ತಾರೀಖಿನೊಳಗೆ ವೇತನ ಪಾವತಿಸಬೇಕು ಎಂದು ಸುತ್ತೋಲೆಯಲ್ಲಿ ಸೇರಿಸಲಾಗಿದೆ.

ಮನೆ ಡೋರ್‌ಲಾಕ್ ಮುರಿದು 4.11 ಲಕ್ಷದ ಚಿನ್ನಾಭರಣ ಕಳವು

ಕೆ.ಆರ್.ನಗರ, ಸೆ.9-ಮನೆಯ ಡೋರ್‌ಲಾಕ್ ಮುರಿದು 4.11 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಕಳವು ಮಾಡಿರುವ ಘಟನೆ ಕೆ.ಆರ್.ನಗರ ಟೌನ್‌ನ ಮುಳ್ಳೂರು ರಸ್ತೆಯಿಂದ ವರದಿಯಾಗಿದೆ. ಅಲ್ಲಿನ ನಿವಾಸಿ ಮೈಸೂರಿನ ನಿಂಗರಾಜನ ಕಟ್ಟೆಯಲ್ಲಿ ಅಂಗನವಾಡಿ ಕಾರ್ಯಕರ್ತೆಯಾಗಿರುವ ಶ್ವೇತಾ(36) ಚಿನ್ನಾಭರಣ ಕಳೆದುಕೊಂಡವರಾಗಿದ್ದು, ಇವರು ಸೆಪ್ಟೆಂಬರ್ 1 ರಂದು ಮೈಸೂರು ಜಿಲ್ಲಾ ಪಂಚಾಯ್ತಿ ಸಂಪನ್ಮೂಲ ಕೇಂದ್ರದಲ್ಲಿ ತರಬೇತಿಗೆ ತೆರಳಿದ್ದು, ಸೆಪ್ಟೆಂಬರ್ 9 ರಂದು ಹಿಂತಿರುಗಿದಾಗ ಮನೆಯ ಡೋರ್‌ಲಾಕ್ ಮುರಿದು 3.33 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಹಾಗೂ 78,750 ರೂ. ಮೌಲ್ಯದ ಬೆಳ್ಳಿ ಪದಾರ್ಥ ಕಳವು ಮಾಡಲಾಗಿದೆ. ಈ ಸಂಬಂಧ ಕೆ.ಆರ್.ನಗರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಭಾವಪೂರ್ಣ ಶ್ರದ್ಧಾಂಜಲಿ



ಕೋರ್ಟ್ ಚೌಡಯ್ಯ

ಇವರು ದಿ:09.09.2022 ಶುಕ್ರವಾರದಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರ ಅಂತ್ಯಕ್ರಿಯೆಯನ್ನು ದಿ: 10.09.2022 ಶನಿವಾರ ಮಧ್ಯಾಹ್ನ 11.00 ಗಂಟೆಗೆ ಜಯನಗರದ ಕೆ.ಜಿ.ಕೊಪ್ಪಲು ರುದ್ರಭೂಮಿ, ಕಾವೇರಿ ಶಾಲೆ ಪಕ್ಕದಲ್ಲಿ ನೆರವೇರಿಸಲಾಗುವುದು.

ದುಃಖತಪ್ತರು: ಕುಟುಂಬವರ್ಗದವರು

ಪುರಸಭಾ ಕಾರ್ಯಾಲಯ, ಗುಂಡ್ಲುಪೇಟೆ

ಚಾಮರಾಜನಗರ ಜಿಲ್ಲೆ-571111

ಕಛೇರಿ : 08229-222226
Fax : 08229-222226
Helpline : 08229-223377
E-mail : tmc_gundlupet@yahoo.com
Website : www.gundlupettown.gov.in

ಸಂಖ್ಯೆ:ಪುಗು/ಕಿಅ/ಪುರಸಭೆ ನಿಧಿ/10/2022-23 ದಿನಾಂಕ: 07.09.2022.

ದರಪಟ್ಟಿ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳು ಹಾಗೂ ಇತ್ತೀಚಿನ ತಿದ್ದುಪಡಿ ನಿಬಂಧನೆಗೆ ಒಳಪಟ್ಟಂತೆ ನೋಂದಾಯಿಸಿದ ಅರ್ಹ ಸಿವಿಲ್ ಇಂಜಿನಿಯರಿಂಗ್ ಕನ್ಸಲ್‌ಟೆಂಟ್ಸ್ ಸರ್ವೀಸ್ (ಪಿ.ಎಂ.ಸಿ) ರವರಿಂದ ಗುಂಡ್ಲುಪೇಟೆ ಪುರಸಭೆಗೆ ಸೇರಿದ ಸ.ನಂ. 219/1, 220/2, 221/1, 130/1, 130/2, 130/3, 131/1, 131/2 ರಲ್ಲಿ ಒಟ್ಟು 18 ಎಕರೆ 30 ಗುಂಟೆ ಪ್ರದೇಶದಲ್ಲಿ ರಚಿಸಲಾಗಿರುವ ಆಶ್ರಯ ಬಡಾವಣೆಯಲ್ಲಿ ಹೌಸಿಂಗ್ ಸ್ಕೀಮ್ ಡೆವಲಪ್‌ಮೆಂಟ್ ಡಿ.ಪಿ.ಆರ್. ತಯಾರಿಸಿ ಕೊಡಲು ಕೊಟೇಷನ್ ಆಹ್ವಾನಿಸಲಾಗಿದೆ.

1)ಭರ್ತಿ ಮಾಡಿದ ಕೊಟೇಷನ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ : 14.09.2022 ಸಂಜೆ 4-00 ವರೆಗೆ

2)ಕೊಟೇಷನ್‌ನ್ನು ತೆರೆಯುವ ದಿನಾಂಕ : 15.09.2022.

Sl.No.	Details
1.	Preparation of Detail Project Report-(DPR) as per norms, Architectural & Engineering Consurtancy Services (AEC Services), Project Management Consultancy Services(PMC) and other allied serives for development of Housing Schemes at S.No. 219/1, 220/2, 221/1,130/1,130/2, 130/3, 131/1,131/2. Total 18 Acre, 30 Gunte, belongs to Gundlupet TMC

ಡಿಪಿಆರ್ ತಯಾರಿಸಿಕೊಡಲು ಕಾಲಾವಧಿ:- 15 ದಿನಗಳು.
ಮೇಲಿನ ಎಲ್ಲಾ ಕಾಮಗಾರಿಗಳಿಗೆ ಅರ್ಹ ಗುತ್ತಿಗೆದಾರರ ವರ್ಗ:- ಅರ್ಹ ನೊಂದಾಯಿತ ನಿರ್ಮಾಣ ಸಂಸ್ಥೆ/ಕನ್ಸಲ್ಟೆನ್ಸಿ ಏಜೆನ್ಸಿ.

ಸಹಿ/- ಪಿ.ಗಿರೀಶ್
ಅಧ್ಯಕ್ಷರು, ಪುರಸಭೆ, ಗುಂಡ್ಲುಪೇಟೆ

ಸಹಿ/-ಆರ್.ಹೇಮಂತರಾಜು
ಮುಖ್ಯಾಧಿಕಾರಿ, ಪುರಸಭೆ, ಗುಂಡ್ಲುಪೇಟೆ

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಲೇಟ್ ಎನ್. ರಾಮಸ್ವಾಮಿ ರವರ ಮಕ್ಕಳಾದ 1] ಶ್ರೀ. ಆರ್. ಸುರೇಶ್, 2] ಶ್ರೀಮತಿ ಆರ್. ಸುಜಾತ ಮತ್ತು 3] ಶ್ರೀ. ಮುರಳಿ ಆರ್. ರವರು ಒಟ್ಟಾಗಿ ಈ ಕೆಳಗೆ ವಿವರಿಸಿರುವ ಷೆಡ್ಯೂಲ್ ಸ್ವತ್ತನ್ನು, ನನ್ನ ಕಕ್ಷಿದಾರರಿಗೆ ಮಾರಾಟ ಮಾಡಲು ಅಪೇಕ್ಷಿಸಿರುತ್ತಾರೆ. ಅದರಂತೆ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಖರೀದಿಗೆ ಪಡೆಯಲು ಸಿದ್ಧರಿರುವುದರಿಂದ ಸದರಿ ಸ್ವತ್ತಿನ ಮೇಲೆ ಯಾರಿಗಾದರೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಆಕ್ಷೇಪಣೆ, ಸಿವಿಲ್ ವ್ಯಾಜ್ಯ, ತಂಟೆ-ತಕರಾರುಗಳು ಇದ್ದಲ್ಲಿ ಈ ಪ್ರಕಟಣೆ ಪ್ರಕಟವಾದ ದಿನದಿಂದ 5 (ಐದು) ದಿನಗಳ ಒಳಗಾಗಿ ತಮ್ಮ ಆಕ್ಷೇಪಣೆಗಳನ್ನು ಲಿಖಿತ ರೂಪದಲ್ಲಿ ಅಥವಾ ಖುದ್ದಾಗಿ ಸೂಕ್ತ ದಾಖಲಾತಿಗಳೊಂದಿಗೆ ಈ ಕೆಳಗೆ ನಮೂದಿಸಿರುವ ಕಛೇರಿ ವಿಳಾಸಕ್ಕೆ ಸಲ್ಲಿಸಬಹುದಾಗಿದೆ. ತಪ್ಪಿದ್ದಲ್ಲಿ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧ ಕ್ರಯಕ್ಕೆ ಪಡೆದುಕೊಳ್ಳುತ್ತಾರೆ. ಮೇಲ್ಕಂಡ ಅವಧಿ ನಂತರ ಬರುವ ಆಕ್ಷೇಪಣೆ, ತಂಟೆ-ತಕರಾರುಗಳಿಗೆ ನನ್ನ ಕಕ್ಷಿದಾರರು ಬಾಧ್ಯರಾಗುವುದಿಲ್ಲ ಎಂಬ ಅಂಶವನ್ನು ಈ ಮೂಲಕ ತಿಳಿಯ ಪಡಿಸಲಾಗಿದೆ.

ಷೆಡ್ಯೂಲ್ ಸ್ವತ್ತಿನ ವಿವರ: ಮೈಸೂರು ಸಿಟಿ, ನಾಚನಹಳ್ಳಿ ಕೊಪ್ಪಲೂರು 3ನೇ ಹಂತ, ಎ-ವಲಯ ಬಡಾವಣೆಯಲ್ಲಿರುವ ನಿವೇಶನ ಸಂಖ್ಯೆ 234, ವಿಸ್ತೀರ್ಣ ಪೂರ್ವ ಪಶ್ಚಿಮ 12.00 ಮೀಟರ್‌ಗಳು ಮತ್ತು ಉತ್ತರ ದಕ್ಷಿಣ 18.00 ಮೀಟರ್‌ಗಳುಳ್ಳ ಸ್ವತ್ತಿಗೆ ಚಕ್ಕುಬಂದಿ. ಪೂರ್ವಕ್ಕೆ: ನಿವೇಶನ ಸಂಖ್ಯೆ 231 & 232, ಪಶ್ಚಿಮಕ್ಕೆ: ನಿವೇಶನ ಸಂಖ್ಯೆ 236, ಉತ್ತರಕ್ಕೆ: ರಸ್ತೆ ಮತ್ತು ದಕ್ಷಿಣಕ್ಕೆ: ನಿವೇಶನ ಸಂಖ್ಯೆ 235, ಹಾಲಿ ಮೈಸೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ 63, ಪಿಐಡಿ ಸಂಖ್ಯೆ 65774 ರ ವ್ಯಾಪ್ತಿಯಲ್ಲಿದೆ.

ಎಸ್.ಎಲ್.ಡಿ. ಲಾ ಫರ್ಮ್,
ಸಹಿ/-ಶ್ರೀಲತಾ ದೀಕ್ಷಿತ್, ವಕೀಲರು, ನಂ. 1458/ಎ, ನಾರಾಯಣಶಾಸ್ತ್ರಿ ರಸ್ತೆ, ಸಪ್ನ ಬುಕ್ ಹೌಸ್ ಹತ್ತಿರ, ಮೈಸೂರು.ಮೊ: 9844640641
email: sldlawfirm2021@gmail.com

IN THE COURT OF THE HON'BLE IV ADDITIONAL SENIOR CIVIL JUDGE AND CJM COURT AT MYSORE

O.S. No. 258 / 2022

Plaintiff :Sri. Rangaraju C.S, S/o C.B Sannappa Aged about 47 year, R/at # 393, 3rd Stage, Basavaraja Circle, Vijayan agara, Devaraja Mohalla, Mysuru **VS**
Defendants :Ravikumar A.S, S/o Siddalingasetty Aged about 46 years, R/at # 70/A, M Block, 5th Cross, Kuvempu nagara, Mysuru

PAPER PUBLICATION

Whereas, the above named Plaintiff have filed above suit for Specific Performance of Contract against the Defendant. In this case herby called upon Defendant to appear before this Hon'ble Court on 01-10-2022 at about 11.00 am either person or through an advocate to answer for, failing which the case will be heard and disposed of ex-parte. Given under my hand and seal of the Court on this 08/09/22 Day of 2022

By the Order of the Court
Sd/- Chief ministerial officer
Court of Senior Civil Judge and CJM, Mysuru

Sd/- J.Suresh, advocate, Off. No.1, 1st cross, 2nd main, Jayanagar, Mysuru, Ph: 9448322896

ಮೈಸೂರು ಮಿತ್ರ 43 ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಕಾಂಗ್ರೆಸ್ ಮುನ್ನಡೆಸಲು ನಾಯಕರೇ ಇಲ್ಲ

ಪಕ್ಷ ಹೇಳಿದರೆ ಚುನಾವಣೆಯಲ್ಲಿ ಸ್ಪರ್ಧೆ, ಇಲ್ಲ ಪಕ್ಷ ಸಂಘಟಿಸುವೆ: ಬಿ.ವೈ.ವಿಜಯೇಂದ್ರ



ಕೆ.ಆರ್.ಪೇಟೆ, ಸೆ.9– ದೇಶದಲ್ಲಿ ಕಾಂಗ್ರೆಸ್ ಪಕ್ಷವನ್ನು ಮುನ್ನಡೆಸಲು ನಾಯಕರೇ ಇಲ್ಲದಂತಾಗಿದೆ. ಇನ್ನು ಅಧಿಕಾರಕ್ಕೆ ಬರುತ್ತೇವೆ ಎಂಬುದು ಕನಸಿನ ಮಾತಾಗಿದೆ ಎಂದು ಬಿಜೆಪಿ ರಾಜ್ಯ ಉಪಾಧ್ಯಕ್ಷ ಬಿ.ವೈ.ವಿಜಯೇಂದ್ರ, ಕಾಂಗ್ರೆಸ್ ದೇಶದಲ್ಲಿ ಮುಳುಗುತ್ತಿರುವ ಹಡಗಿನಂತಾಗಿದೆ. ಕಾಂಗ್ರೆಸ್‌ನಲ್ಲಿ ಹಡಗನ್ನು ಮೇಲೆತ್ತುವ ನಾಯಕತ್ವವೇ ಇಲ್ಲ ಎಂದರು.

ಪ್ರಧಾನಿ ನರೇಂದ್ರಮೋದಿ ಅವರು ದೇಶದ ನಾಯಕರಷ್ಟೇ ಅಲ್ಲ, ವಿಶ್ವದ ನಾಯಕರಾಗಿದ್ದಾರೆ. ಮೋದಿಯವರನ್ನು ಎದುರಿಸಲು ಭಾರತ್ ಜೋಡೋ ಯಾತ್ರೆ ಮಾಡುತ್ತಿರುವ ರಾಹುಲ್‌ಗಾಂಧಿಯವರದು ವಿಫಲ ಪ್ರಯತ್ನವಾಗಲಿದೆ ಎಂದು ಇದೇ ವೇಳೆ ತಿಳಿಸಿದರು.

ತಾಲೂಕಿನ ಭೂ ವರಾಹನಾಥ ಕಲ್ಲಹಳ್ಳಿ ಶ್ರೀ ಕ್ಷೇತ್ರ, ಬೋಳಾರೆ ರಂಗನಾಥಸ್ವಾಮಿ ಶ್ರೀ ಕ್ಷೇತ್ರಗಳಿಗೆ ಭೇಟಿ ನೀಡಿ ವಿಶೇಷ ಪೂಜೆ ಸಲ್ಲಿಸಿದ ನಂತರ ಬೂಕನಕೆರೆಯಲ್ಲಿ ಯಡಿಯೂರಪ್ಪ ಅಭಿಮಾನಿಯೊಬ್ಬರ ಗೃಹಪ್ರವೇಶ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

2024ಕ್ಕೆ ಅಧಿಕಾರಕ್ಕೆ ಬರುತ್ತೇವೆ ಎಂದು ಕಾಂಗ್ರೆಸ್ ನಾಯಕರು ಭ್ರಮೆಯಲ್ಲಿದ್ದಾರೆ. ದೇಶವನ್ನು ಸತತವಾಗಿ ಕಾಡಿದ ಕೊರೊನಾವನ್ನು ಮೋದಿಯವರು ಎದುರಿಸಿದ ರೀತಿಗೆ ವಿಶ್ವವೇ ಕೊಂಡಾಡುತ್ತಿದೆ. ಆದರೆ ಕಾಂಗ್ರೆಸ್ ನಾಯಕರು ಪ್ರತಿಯೊಂದನ್ನು ಕೂಡಾ ಹಳದಿ ಕನ್ನಡಕದಿಂದಲೇ ನೋಡುತ್ತಿದ್ದಾರೆ. ಇದನ್ನು ಜನರು ಗಮನಿಸುತ್ತಿದ್ದಾರೆ. ಇದಕ್ಕೆ ಮುಂದೆ ಬರುವ ಚುನಾವಣೆಗಳಲ್ಲಿ ತಕ್ಕ ಉತ್ತರವನ್ನು ನೀಡಲಿದ್ದಾರೆ ಎಂದರು.

ಬೆಂಗಳೂರು ಇಡೀ ವಿಶ್ವದ ಐಕಾನ್‌ಸಿಟಿ. ಆದರೆ ಪ್ರಕೃತಿ ವಿಕೋಪಕ್ಕೆ ಸಿಲುಕಿ ಜನರು ಪರಿತಪಿಸುವಂತಾಗಿದೆ. ಇದರ ಹೊಣೆಯನ್ನು ಎಲ್ಲರೂ ಹೊರಬೇಕು. ಕೇವಲ ಟೀಕೆಯಿಂದ ಜನರ ಕಷ್ಟವನ್ನು ಪರಿಹರಿಸಲಾಗುವುದಿಲ್ಲ. ಸಕಾರಾತ್ಮಕವಾಗಿ ಸಲಹೆಗಳನ್ನು ನಮ್ಮ ಸರಕಾರಕ್ಕೆ ನೀಡಬೇಕು. ನಮ್ಮ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಯವರು ಬ್ರಾಂಡ್ ಬೆಂಗಳೂರನ್ನು ಉಳಿಸಲು ಶ್ರಮಿಸುತ್ತಿದ್ದಾರೆ. ಜನರು ಆತಂಕಕ್ಕೆ ಒಳಗಾಗುವುದು ಬೇಡ. ಬೇರೆ ರಾಜ್ಯಗಳ ಜನರನ್ನು ಬೆಂಗಳೂರು ಸಲಹುತ್ತಿದೆ. ಇಡೀ ವಿಶ್ವದ ಜನರು ಬೆಂಗಳೂರಿನಲ್ಲಿದ್ದಾರೆ. ಎಲ್ಲರೂ ಸಹಕರಿಸಿ. ನಮ್ಮ ಬೆಂಗಳೂರನ್ನು ಅನಧಿಕೃತ ಒತ್ತುವರಿದಾರರಿಂದ ಮುಕ್ತಗೊಳಿಸಿ ಜನರ ನೆರವಿಗೆ ನಿಲ್ಲೋಣ ಎಂದು ಅವರು ಮನವಿ ಮಾಡಿದರು.

ನಾನು ಶಿಕಾರಿಪುರದಲ್ಲಿ ಚುನಾವಣೆಗೆ ಸ್ಪರ್ಧಿಸುವುದು ಪಕ್ಷದ ಇಚ್ಛೆ. ನಾನು ರಾಜ್ಯವನ್ನು ಸುತ್ತುತ್ತಿದ್ದೇನೆ. ಪಕ್ಷವು ಶಿಕಾರಿಪುರದಲ್ಲಿ ಸ್ಪರ್ಧಿಸಲು ಸೂಚಿಸಿದರೆ ಸ್ಪರ್ಧಿಸುತ್ತೇನೆ. ಇಲ್ಲವೇ ಪಕ್ಷ ಸಂಘಟನೆಯಲ್ಲಿ ತೊಡಗಿಸಿ ಕೊಳ್ಳುತ್ತೇನೆ ಎಂದು ಅವರು ಇದೇ ವೇಳೆ ಹೇಳಿದರು.

ರೇಷ್ಮೆ, ಕ್ರೀಡೆ ಮತ್ತು ಯುವ ಸಬಲೀಕರಣ ಸಚಿವ ಡಾ.ನಾರಾಯಣ ಗೌಡ, ಮುಡಾ ಅಧ್ಯಕ್ಷ ಕೆ.ಶ್ರೀನಿವಾಸ್, ಹಾಪ್ ಕಾಮ್ಸ್ ಜಿಲ್ಲಾಧ್ಯಕ್ಷ ಕೆ.ಜಿ.ತಮ್ಮಣ್ಣ, ಕುರಿ ಮತ್ತು ಉಣ್ಣೆ ನಿಗಮದ ಅಧ್ಯಕ್ಷ ಶರಣು ತಳ್ಳೀಕೆರೆ, ಬಿಜೆಪಿ ಮುಖಂಡರಾದ ಪಾಂಡವಪುರ ಇಂದ್ರೇಶ್, ಬ್ಯಾಂಕ್ ಪರಮೇಶ್, ಕಿಕ್ಕೇರಿ ಪ್ರಭಾಕರ್, ಮೈಮುಲ್ ನಿರ್ದೇಶಕ ಎಸ್.ಸಿ.ಅಶೋಕ್, ಮುಖ್ಯಮಂತ್ರಿಯ ಮಾಜಿ ವಿಶೇಷಾಧಿಕಾರಿ ಎಸ್.ಸಿ.ಅರವಿಂದ್, ಪುರಸಭಾ ಸದಸ್ಯರಾದ ನಟರಾಜ್, ಕೆ.ಆರ್.ನೀಲಕಂಠ, ಸೆಸ್ಕಾಂ ನಿರ್ದೇಶಕ ಸಾಸಲು ನಾಗೇಶ್, ಡಿಸಿಸಿ ಬ್ಯಾಂಕ್ ಮಾಜಿ ನಿರ್ದೇಶಕ ತೋಟಪ್ಪ ಶೆಟ್ಟಿ, ಮಡುವಿನಕೋಡಿ ಗಂಗಾಧರ್, ಬಿಜೆಪಿ ಅಧ್ಯಕ್ಷ ಎ.ಜಿ. ಪರಮೇಶ್ ಅರವಿಂದ್, ಸಾರಂಗಿ ನಾಗಣ್ಣ, ಪುರ ಮಂಜುನಾಥ್, ಮತ್ತಿತರರಿದ್ದರು.

ಬೆಂಗಳೂರು–ಮೈಸೂರು ದಶಪಥ ರಸ್ತೆ ಕಾಮಗಾರಿ ಅವೈಜ್ಞಾನಿಕ

ಮದ್ದೂರು ಪುರಸಭೆಗೆ ಕೋಟ್ಯಂತರ ರೂ. ನಷ್ಟ ; ಸಭೆಯಲ್ಲಿ ಆಕ್ರೋಶ

ಮದ್ದೂರು, ಸೆ.9– ಪಟ್ಟಣದ ಪುರಸಭಾ ವ್ಯಾಪ್ತಿಯಲ್ಲಿ ಬೆಂಗಳೂರು–ಮೈಸೂರು ದಶಪಥ ಹೆದ್ದಾರಿ ಕಾಮಗಾರಿ ಅವೈಜ್ಞಾನಿಕವಾಗಿದ್ದು, ಪಟ್ಟಣದ ಪುರಸಭೆಗೆ ಕೋಟ್ಯಂತರ ರೂ. ನಷ್ಟವಾಗಿದ್ದು, ನಷ್ಟದ ಹಣವನ್ನು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದಿಂದ ಭರಿಸುವಂತೆ ಕ್ರಮ ಕೈಗೊಳ್ಳಬೇಕೆಂದು ಪುರಸಭಾ ಸದಸ್ಯರಾದ ಎಂ.ಐ.ಪ್ರವೀಣ್, ಪ್ರಿಯಾಂಕ ಅಪ್ಪುಗೌಡ ಒತ್ತಾಯಿಸಿದರು.

ಪಟ್ಟಣದ ಪುರಸಭೆಯ ಎಸ್.ಎಂ.ಕೃಷ್ಣ ಸಭಾಂಗಣದಲ್ಲಿ ಪುರಸಭಾ ಅಧ್ಯಕ್ಷ ಎಸ್. ಸುರೇಶ್ ಕುಮಾರ್ ಅಧ್ಯಕ್ಷತೆಯಲ್ಲಿ ಶುಕ್ರವಾರ ನಡೆದ ವಿಶೇಷ ಸಭೆಯಲ್ಲಿ ಈ ವಿಷಯ ಚರ್ಚೆಗೆ ಬಂತು.

ಪುರಸಭಾ ವ್ಯಾಪ್ತಿಯಲ್ಲಿ ದಶಪಥ ಹೆದ್ದಾರಿ ಕಾಮಗಾರಿಯನ್ನು ಯೋಜನೆಯಂತೆ ಮಾಡದೇ ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ಪ್ರಾಧಿಕಾರದ ಅಧಿಕಾರಿಗಳು ಪುರಸಭಾ ಅಧಿಕಾರಿಗಳ ಮನವಿಗೂ ಸ್ಪಂದಿಸದೆ ಮನಸೋಇಚ್ಛೆ ಕಾಮಗಾರಿ ಮಾಡುತ್ತಿರುವುದರಿಂದ ಹಲವಾರು ಸಮಸ್ಯೆಗಳು ಉಂಟಾಗಿ ಸಾರ್ವಜನಿಕರಿಗೆ ತೊಂದರೆಯಾಗಿದೆ ಎಂದು ಸದಸ್ಯರು ಆರೋಪಿಸಿದರು.

ಬೆಂಗಳೂರು–ಮೈಸೂರು ಹೆದ್ದಾರಿಯಲ್ಲಿ ಒಳಚರಂಡಿ ಕಲುಷಿತ ನೀರು ಹರಿಯುತ್ತಿರುವುದರಿಂದ ಪ್ರಯಾಣಿಕರಿಗೆ ಮತ್ತು ಸಾರ್ವಜನಿಕರಿಗೆ ತೊಂದರೆಯಾಗುತ್ತಿದ್ದರೂ ಹೆದ್ದಾರಿ ಅಭಿವೃದ್ಧಿ ಪ್ರಾಧಿಕಾರದ ಅಧಿಕಾರಿಗಳು ಯಾವುದೇ ಕ್ರಮ ಕೈಗೊಳ್ಳದಿರುವುದು ವಿಪರ್ಯಾಸದ ಸಂಗತಿ ಎಂದು ಆಕ್ರೋಶ ವ್ಯಕ್ತಪಡಿಸಿದರು. ಅವೈಜ್ಞಾನಿಕ ಕಾಮಗಾರಿಯಿಂದ ಹೆದ್ದಾರಿಯಲ್ಲಿ ಅಪಘಾತ ಸಂಭವಿಸಿ ಈಗಾಗಲೇ ಇಬ್ಬರು ಮೃತಪಟ್ಟಿದ್ದಾರೆ. ರಸ್ತೆ, ಚರಂಡಿ, ಒಳಚರಂಡಿ, ಕುಡಿಯುವ ನೀರಿನ ಪೈಪ್‌ಗಳು ಹೊಡೆದು ಅಪಾರ ಪ್ರಮಾಣದಲ್ಲಿ ನಷ್ಟ ಉಂಟಾಗಿದೆ ಎಂದು ತಿಳಿಸಿದರು.

ಸದಸ್ಯ ಆದಿಲ್ ಮಾತನಾಡಿ, ಇತ್ತೀಚೆಗೆ ಜಿಲ್ಲಾ ಉಸ್ತುವಾರಿ ಸಚಿವ ಗೋಪಾಲಯ್ಯ ಆಗಮಿಸಿ ಹೆದ್ದಾರಿಯಲ್ಲಿ ಒಳಚರಂಡಿ ನೀರು ಹರಿಯುತ್ತಿರುವುದರ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದ್ದರೂ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಆರೋಪಿಸಿದರು.

ಪುರಸಭಾ ಅಧ್ಯಕ್ಷ ಸುರೇಶ್‌ಕುಮಾರ್ ಮಾತನಾಡಿ, ಈ ಸಂಬಂಧ ಜಿಲ್ಲಾಧಿಕಾರಿಗಳಿಗೆ, ಹೆದ್ದಾರಿ ಪ್ರಾಧಿಕಾರಕ್ಕೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರ ಗಮನಕ್ಕೆ ತರಲಾಗುವುದು ಎಂದು ತಿಳಿಸಿದರು. ಪಟ್ಟಣದ ಪ್ರವಾಸಿ ಮಂದಿರದಿಂದ ಕೊಲ್ಲಿ ವೃತ್ತದವರೆಗಿನ ಪೇಟೆಬೀದಿ ಇತ್ತೀಚೆಗೆ ಬಂದ ಮಳೆಯಿಂದ ಹಾನಿಯಾಗಿರುವುದರಿಂದ 10 ಲಕ್ಷ ರೂ.ವೆಚ್ಚದಲ್ಲಿ ರಸ್ತೆ ದುರಸ್ತಿ ಮಾಡಿಸಿ ಪ್ರಯಾಣಿಕರಿಗೆ ಮತ್ತು ಸಾರ್ವಜನಿಕರಿಗೆ ಅನುಕೂಲ ಕಲ್ಪಿಸಲು ಸಭೆಯಲ್ಲಿ ಅನುಮೋದಿಸಲಾಯಿತು.

ಎಂ.ಐ.ಪ್ರವೀಣ್ ಮಾತನಾಡಿ, ತಾಲೂಕು ಕೇಂದ್ರದಲ್ಲಿ ಪುರಸಭೆ ಇದ್ದು, ಆರೋಗ್ಯ ಸ್ಥಾಯಿ ಸಮಿತಿ ರಚನೆಯಾಗಬೇಕು. ಈ ಸಂಬಂಧ ಮುಂದಿನ ಸಭೆಯೊಳಗೆ ರಚನೆಗೆ ತಾಂತ್ರಿಕ ಸಲಹೆ ಪಡೆಯಲು ಅಧಿಕಾರಿಗಳಿಗೆ ಸೂಚಿಸಿದರು.

ಸ್ಥಾಯಿ ಸಮಿತಿಗೆ ಅಧ್ಯಕ್ಷರಾಗಿ ಪ್ರಸನ್ನಕುಮಾರ್ ಆಯ್ಕೆ



ಪಟ್ಟಣದ ಪುರಸಭೆಯ ಎಸ್.ಎಂ.ಕೃಷ್ಣ ಸಭಾಂಗಣದಲ್ಲಿ ಶುಕ್ರವಾರ ನಡೆದ ಪುರಸಭೆಯ ವಿಶೇಷ ಸಭೆಯಲ್ಲಿ ಸ್ಥಾಯಿ ಸಮಿತಿ ಅಧ್ಯಕ್ಷರಾಗಿ ಟಿ.ಎನ್.ಪ್ರಸನ್ನಕುಮಾರ್ ಅವರನ್ನು ಅವಿರೋಧವಾಗಿ ಆಯ್ಕೆ ಮಾಡಲಾಯಿತು.

ಸ್ಥಾಯಿ ಸಮಿತಿ ಅಧ್ಯಕ್ಷರಾಗಿದ್ದ ಎಸ್.ಮಹೇಶ್ ಅವರ ಅವಧಿ ಅಂತ್ಯಗೊಂಡ ಹಿನ್ನೆಲೆಯಲ್ಲಿ, ತೆರವಾಗಿದ್ದ ಸ್ಥಾನಕ್ಕೆ ಟಿ.ಎನ್.ಪ್ರಸನ್ನಕುಮಾರ್ ಅವರನ್ನು ಸಭೆಯಲ್ಲಿ ಆಯ್ಕೆ ಮಾಡಲಾಯಿತು. ಸಭೆಯಲ್ಲಿ ಪುರಸಭಾ ಉಪಾಧ್ಯಕ್ಷೆ ಸುಮಿತ್ರಾ ರಮೇಶ್, ಪ್ರಭಾರ ಮುಖ್ಯಾಧಿಕಾರಿ ಚಂದ್ರಶೇಖರ್, ಪುರಸಭಾ ಸದಸ್ಯರು, ಅಧಿಕಾರಿಗಳು ಇದ್ದರು.

ಇಂದು ನವೋದಯ ವಿದ್ಯಾ ಪೀಠದಲ್ಲಿ ಗಿರಿಜನ ಉತ್ಸವ

ಮಂಡ್ಯ, ಸೆ.9– ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಗಿರಿಜನ ಉತ್ಸವ 2022–23 ಗಿರಿಜನ ಉಪಯೋಜನೆಯಡಿ ಸೆ.10ರಂದು ಶಿವಾರಗುಡ್ಡ ವಿದ್ಯಾಪೀಠ ಜವಾಹರ ನವೋದಯ ವಿದ್ಯಾಲಯ ವಿದ್ಯಾ ಪೀಠದಲ್ಲಿ ಮಧ್ಯಾಹ್ನ 4 ಗಂಟೆಗೆ ಹಮ್ಮಿಕೊಳ್ಳಲಾಗಿದೆ.

ಕಾರ್ಯಕ್ರಮವನ್ನು ಅಬಕಾರಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಕೆ ಗೋಪಾಲಯ್ಯ ಉದ್ಘಾಟಿಸಲಿದ್ದಾರೆ. ವಿಧಾನಸಭಾ ಕ್ಷೇತ್ರದ ಶಾಸಕರಾದ ಡಿ.ಸಿ ತಮ್ಮಣ್ಣ ರವರು ಅಧ್ಯಕ್ಷತೆ ವಹಿಸಲಿದ್ದಾರೆ. ರೇಷ್ಮೆ, ಯುವಸಬಲೀಕರಣ ಮತ್ತು ಕ್ರೀಡಾ ಸಚಿವ ಡಾ.ಕೆ.ಸಿ ನಾರಾಯಣಗೌಡ ಉಪಸ್ಥಿತರಿರುವರು.

ಕಾರ್ಯಕ್ರಮದಲ್ಲಿ ಕಲಾ ತಂಡಗಳಾದ ಪೂಜಾ ಕುಣಿತ, ಡೊಳ್ಳು ಕುಣಿತ, ಮಹಿಳಾ ವೀರಗಾಸೆ, ಗೊರವನ ಕುಣಿತ, ಸೋಮನ ಕುಣಿತ, ಪಟಕುಣಿತ, ಚಿಲಿಪಿಲಿ ಗೊಂಬೆ, ಹುಲಿ ವೇಷ, ಕೀಲು ಕುದುರೆ ಹಾಗೂ ಕಂಸಾಳೆ ತಂಡಗಳು ಭಾಗವಹಿಸಲಿದ್ದಾರೆ.

ಚಾಮರಾಜನಗರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಹಾಯಕ ಪ್ರಾಧ್ಯಾಪಕರಾದ ಲೋಕೇಶ್ ರವರು ಮುಖ್ಯ ಭಾಷಣ ಮಾಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ಸಂಸದೆ ಸುಮಲತಾ ಅಂಬರೀಶ್ ಶಾಸಕರು ಭಾಗವಹಿಸಲಿದ್ದಾರೆ.

ಅಕ್ರಮ ಖಾತೆ ನಿರೋಧಿಸಿ ಪ್ರತಿಭಟನೆ

ಶ್ರೀರಂಗಪಟ್ಟಣ, ಸೆ.9– ತಾಲೂಕಿನ ಹುಲಿಕೆರೆ ಗ್ರಾಪಂನ ಕಾರ್ಯದರ್ಶಿ ಹಾಗೂ ಸಿಬ್ಬಂದಿ ಜೊತೆಗೂಡಿ ಜುವಾರಿ ಗಾರ್ಡನ್ ಸಿಟಿ ಅವರ ಖಾತೆಗಳನ್ನು ಅಕ್ರಮವಾಗಿ ಮಾಡಲು ಮುಂದಾಗಿದ್ದಾರೆ ಎಂದು ಆರೋಪಿಸಿ ಕೆಲ ಸದಸ್ಯರು ಪ್ರತಿಭಟನೆ ನಡೆಸಿದರು.



ಪಂಚಾಯಿತಿ ಎದುರು ಜಮಾವಣೆಗೊಂಡ ಸದಸ್ಯರು, ಗ್ರಾಪಂ ಕಾರ್ಯದರ್ಶಿ ಶಿವಲಿಂಗಯ್ಯ ಹಾಗೂ ಗುಮಾಸ್ತ ನವೀನ್ ವಿರುದ್ಧ ಘೋಷಣೆ ಕೂಗಿದರು. ನಂತರ ಸದಸ್ಯ ರಾಮು ಮಾತನಾಡಿ, ಜುವಾರಿ ಗಾರ್ಡನ್ ಸಿಟಿ ರವರು ಅಕ್ರಮವಾಗಿ ಸರ್ಕಾರಿ ಜಮೀನುಗಳನ್ನು ಒತ್ತುವರಿ ಮಾಡಿಕೊಂಡಿರುವ ಪ್ರಕರಣ ಈಗಾಗಲೇ ನ್ಯಾಯಾಲಯದಲ್ಲಿದ್ದು ಜೊತೆಗೆ ಜಿಲ್ಲಾಧಿಕಾರಿಗಳು ಈ ವಿಚಾರವಾಗಿ ಒತ್ತುವರಿ ಜಮೀನಿನ ಪರಿಶೀಲನೆ ಹಾಗೂ ಸರ್ವೆ ನಡೆಸುವ ಸಂಬಂಧ ಈಗಾಗಲೇ ಪತ್ರ ವ್ಯವಹಾರ ನಡೆಸಿದ್ದಾರೆ. ಇಷ್ಟೆಲ್ಲ ಗೊಂದಲಗಳಿದ್ದರೂ ಸಹ ಪಂಚಾಯಿತಿ ಕಾರ್ಯದರ್ಶಿ ಶಿವಲಿಂಗಯ್ಯ ಹಾಗೂ ಸಿಬ್ಬಂದಿಗಳು ಜುವಾರಿ ಗಾರ್ಡನ್ ಸಿಟಿ ಅವರೊಂದಿಗೆ ಶಾಮೀಲಾಗಿ ಪಂಚಾಯಿತಿ ಸದಸ್ಯರುಗಳ ಗಮನಕ್ಕೆ ತಾರದೆ ಅಕ್ರಮವಾಗಿ ಖಾತೆ ಮಾಡಿಕೊಡಲು ಮುಂದಾಗಿದ್ದಾರೆ. ಅಲ್ಲದೆ ಜುವಾರಿ ಗಾರ್ಡನ್ ಸಿಟಿಗೆ ಸಂಬಂಧಿಸಿದ ಸಂಪೂರ್ಣ ಕಡತಗಳು ಗ್ರಾಪಂನಲ್ಲಿ ನಾಪತ್ತೆಯಾಗಿದೆ ಎಂದು ಆರೋಪಿಸಿದರು.

ಅಧ್ಯಕ್ಷರ ನೇತೃತ್ವದಲ್ಲಿ ತುರ್ತು ಸಭೆ ಕರೆದರೂ ಸಭೆಗೆ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಜಿಪಂ ನಲ್ಲಿ ತುರ್ತು ಸಭೆ ಇದೆ ಎಂದು ನೆಪಹೇಳಿ ಹಾಗೂ ಕಾರ್ಯದರ್ಶಿ ಶಿವಲಿಂಗಯ್ಯ ಅನಾರೋಗ್ಯದ ಕಾರಣ ಹೇಳಿ ಸಭೆಗೆ ಗೈರಾಗುವ ಮೂಲಕ ಅಧ್ಯಕ್ಷರಿಗೆ ಅಗೌರವ ತೋರಿಸಿದ್ದಾರೆ ಎಂದು ಸದಸ್ಯರು ಆಕ್ರೋಶ ವ್ಯಕ್ತಪಡಿಸಿದರು. ಪ್ರತಿಭಟನೆಯಲ್ಲಿ ಅಧ್ಯಕ್ಷೆ ಸುಶೀಲ, ಸದಸ್ಯರಾದ ರಾಮು, ಹರೀಶ್, ವೈರಮುಡಿಗೌಡ ಕರೀಗೌಡ, ರಾಮಕೃಷ್ಣ, ಶ್ವೇತ ಕೃಷ್ಣ, ನರಸಿಂಹಚಾರ್, ರೇಣುಕಾ ಇತರರು ಇದ್ದರು.

ಮಳೆಗೆ ಮನೆ ಗೋಡೆ ಕುಸಿತ




ಭಾರತೀನಗರ, ಸೆ.9– ಕಳೆದ ಒಂದು ವಾರದಿಂದ ಸುರಿದ ಭಾರೀ ಮಳೆಗೆ ಮನೆ ಗೋಡೆ ಕುಸಿದು ಬಿದ್ದಿರುವ ಘಟನೆ ಸಮೀಪದ ಕೆ.ಪಿ.ದೊಡ್ಡಿ ಗ್ರಾಮದಲ್ಲಿ ನಡೆದಿದೆ.

ಕೆ.ಪಿ.ದೊಡ್ಡಿ ಗ್ರಾಮದ ಕೆ.ಶಿವಮಲ್ಲಯ್ಯ ಎಂಬುವವರ ಮನೆ ಮಳೆಗೆ ಕುಸಿದು ಬಿದ್ದಿದೆ. ಸ್ಥಳಕ್ಕೆ ಗ್ರಾಪಂ ಅಭಿವೃದ್ಧಿ ಅಧಿಕಾರಿ ಎನ್.ಸುಧಾ ಮತ್ತು ವಿ.ಎ.ರವಿ ಅವರು ಸ್ಥಳಕ್ಕೆ ಭೇಟಿನೀಡಿ ಪರಿಶೀಲನೆ ನಡೆಸಿದರು.

ಜೀವನೋಪಾಯಕ್ಕಾಗಿ ವ್ಯವಸಾಯವನ್ನು ಅವಲಂಬಿಸಿದ್ದು, ಅದರಿಂದ ಬರುವ ಆದಾಯದಲ್ಲಿ ಮೂರೊತ್ತಿನ ಊಟಕ್ಕೂ ಸಾಲದ್ದಾಗಿದೆ ನಮ್ಮ ತಂದೆಯವರು ಕಟ್ಟಿದಂತಹ ಮನೆಯೂ ಸಹ ಸತತವಾಗಿ ಸುರಿದ ಮಳೆಗೆ ಕುಸಿದು ಬಿದ್ದಿದೆ. ಸಂಬಂಧಿಸಿದ ಇಲಾಖಾ ಅಧಿಕಾರಿಗಳು, ಜನಪ್ರತಿನಿಧಿಗಳು ಅಥವಾ ಸಮಾಜ ಸೇವಕರು ಪರಿಹಾರ ನೀಡಬೇಕೆಂದು ಕೆ.ಶಿವಮಲ್ಲಯ್ಯ ಅವರು ಒತ್ತಾಯಿಸಿದ್ದಾರೆ.

ಇಂದು ಬ್ರಹ್ಮ ಶ್ರೀ ನಾರಾಯಣ ಗುರು ಜಯಂತಿ

ಮಂಡ್ಯ, ಸೆ.9– ಜಿಲ್ಲಾಡಳಿತ, ಜಿಪಂ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ನಗರಸಭೆಯಿಂದ ಬ್ರಹ್ಮ ಶ್ರೀ ನಾರಾಯಣ ಗುರು ಜಯಂತಿಯನ್ನು ಸೆ.10 ಬೆಳಗ್ಗೆ 11 ಗಂಟೆಗೆ ನಾಲ್ವಡಿ ಕೃಷ್ಣರಾಜ ಒಡೆಯರ್ ಕಲಾಮಂದಿರದಲ್ಲಿ ಹಮ್ಮಿಕೊಳ್ಳಲಾಗಿದೆ.



ಕಾರ್ಯಕ್ರಮವನ್ನು ಜಿಲ್ಲಾ ಉಸ್ತುವಾರಿ ಸಚಿವ ಕೆ.ಗೋಪಾಲಯ್ಯ ಉದ್ಘಾಟಿಸಲಿದ್ದಾರೆ. ಶಾಸಕ ಎಂ.ಶ್ರೀನಿವಾಸ್ ಅಧ್ಯಕ್ಷತೆ ವಹಿಸಲಿದ್ದಾರೆ. ಸಚಿವ ಡಾ.ಕೆ.ಸಿ.ನಾರಾಯಣ ಗೌಡ ಉಪಸ್ಥಿತರಿರುವರು. ಮುಖ್ಯ ಅತಿಥಿಗಳಾಗಿ ಸಂಸದೆ ಸುಮಲತಾ, ಎಂಎಲ್‌ಸಿ ಗಳಾದ ಮರಿತಿಬ್ಬೇಗೌಡ, ಮಧು ಜಿ.ಮಾದೇಗೌಡ, ದಿನೇಶ್ ಗೂಳಿಗೌಡ, ಶಾಸಕರಾದ ಸಿ.ಎಸ್.ಪುಟ್ಟರಾಜು, ಡಿ.ಸಿ.ತಮ್ಮಣ್ಣ, ಸುರೇಶ್‌ಗೌಡ, ಡಾ.ಕೆ.ಅನ್ನದಾನಿ, ರವೀಂದ್ರ ಶ್ರೀಕಂಠಯ್ಯ, ಎಂ. ಶ್ರೀನಿವಾಸ್, ನಗರಸಭಾಧ್ಯಕ್ಷ ಹೆಚ್.ಎಸ್.ಮಂಜು, ಮುಡಾ ಅಧ್ಯಕ್ಷ ಕೆ.ಶ್ರೀನಿವಾಸ್, ಉಪಾಧ್ಯಕ್ಷೆ ಇಷ್ರತ್ ಫಾತಿಮಾ, ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಜಯರಾಂ, ಜಿಲ್ಲಾ ಆರ್ಯ ಈಡಿಗರ ಸಂಘದ ಅಧ್ಯಕ್ಷ ಅಪ್ಪಾಜಿಗೌಡ ಹಾಗೂ ನಗರಸಭಾ ಸದಸ್ಯ ಎಂ.ಪಿ.ಅರುಣ್ ಕುಮಾರ್ ಸೇರಿದಂತೆ ಇನ್ನಿತರರು ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಎಂ.ಮಹೇಶ್ ನಿಧನ



ಮದ್ದೂರು, ಸೆ.9– ಪಟ್ಟಣದ ಸೋಮೇಗೌಡರ ಬೀದಿಯ ದಿ.ದೊಡ್ಡಮಾಯಪ್ಪ ಅವರ ಪುತ್ರ ಎಂ. ಮಹೇಶ್ (54) ಶುಕ್ರವಾರ ಅನಾರೋಗ್ಯದಿಂದ ನಿಧನರಾಗಿದ್ದಾರೆ.

ಮೃತರು ಸಹೋದರ ಶಿಂಷಾ ಸಹಕಾರ ಬ್ಯಾಂಕ್‌ನ ನಿರ್ದೇಶಕ ಎಂ.ಯಶವಂತ್, ಮೂವರು ಅಕ್ಕಂದಿರು ಹಾಗೂ ಒಬ್ಬ ತಂಗಿಯನ್ನು ಅಗಲಿದ್ದಾರೆ. ಶನಿವಾರ ಬೆಳಗ್ಗೆ 11.30ಕ್ಕೆ ಪಟ್ಟಣದ ಹೊಸ ಕೊಪ್ಪ ಸರ್ಕಲ್ ಬಳಿಯಿರುವ ರುದ್ರಭೂಮಿಯಲ್ಲಿ ಅಂತ್ಯ ಸಂಸ್ಕಾರ ನೆರವೇರಲಿದೆ.

ಹುಣಸೂರು ತಾಲೂಕಿನ 49 ಕೆರೆಗಳ ತುಂಬಿಸುವ ಕಾಲ ಸನ್ನಿಹಿತ

ಸಂಸದ ಪ್ರತಾಪ್ ಸಿಂಹ ಮನವಿಗೆ ಜಲಸಂಪನ್ಮೂಲ ಸಚಿವ ಕಾರಜೋಳ ಸಕಾರಾತ್ಮಕ ಸ್ಪಂದನೆ



ಸಂಸದ ಪ್ರತಾಪ್ ಸಿಂಹ, ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ಅವರಿಗೆ ಕೆರೆ ತುಂಬಿಸುವ ಯೋಜನೆಗಾಗಿ ಮನವಿ ಸಲ್ಲಿಸಿದರು.

ಮೈಸೂರು, ಸೆ.9(ಎಸ್‌ಬಿಡಿ)– ಹುಣಸೂರು ತಾಲೂಕಿನ 49 ಕೆರೆಗಳಿಗೆ ನದಿ ನೀರು ತುಂಬಿಸುವ ಯೋಜನೆ ಅನುಷ್ಠಾನ ಸನ್ನಿಹಿತವಾಗಿದೆ. ಆರ್ಥಿಕ ಇಲಾಖೆ ಜವಾಬ್ದಾರಿಯನ್ನೂ ಹೊಂದಿರುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಯೋಜನೆಗೆ ಅಗತ್ಯ ಅನುದಾನವನ್ನು ಮಂಜೂರು ಮಾಡುವ ಭರವಸೆ ನೀಡಿದ್ದರ ಹಿನ್ನೆಲೆಯಲ್ಲಿ ಸಂಸದ ಪ್ರತಾಪ್ ಸಿಂಹ, ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ಅವರಿಗೆ ಮನವಿ ಸಲ್ಲಿಸಿದ್ದಾರೆ. ಸಕಾರಾತ್ಮಕವಾಗಿ ಸ್ಪಂದಿಸಿದ ಸಚಿವರು, 'ಕೂಡಲೇ ಕಡತ ಮಂಡಿಸಿ' ಎಂದು ಕಾರ್ಯದರ್ಶಿಗೆ ಒಕ್ಕಣೆ ಕಳುಹಿಸಿದ್ದಾರೆ.

ಜಲ ಸಂಪನ್ಮೂಲ ಇಲಾಖೆ ವತಿಯಿಂದ ಹುಣಸೂರು ತಾಲೂಕು ಮರದೂರು ಗ್ರಾಮದ ಬಳಿ ಲಕ್ಷ್ಮಣತೀರ್ಥ ನದಿಯಿಂದ ಬತ್ತಿ ಹೋಗಿರುವ 49 ಕೆರೆಗಳಿಗೆ ನೀರು ತುಂಬಿಸುವ 63.50 ಕೋಟಿ ರೂ. ಅಂದಾಜು ಮೊತ್ತದ ಕಾಮಗಾರಿಗೆ ಡಿಪಿಆರ್ ತಯಾರಿಸಲಾಗಿತ್ತು. ಅಂದಾಜು ಪರಿಶೀಲನಾ ಸಮಿತಿ 2017ರ ಜ.10ರಂದು ವರದಿ ನೀಡಿದ ನಂತರ 2017ರ ನವೆಂಬರ್ 21ರಂದು ನಡೆದ 60ನೇ ಮಂಡಳಿ ಸಭೆಯಲ್ಲಿ ಅನುಮೋದನೆ ನೀಡಲಾಗಿತ್ತು. ತುರ್ತಾಗಿ ಕಾಮಗಾರಿ ಆರಂಭಿಸುವ ಅವಶ್ಯಕತೆ ಇರುವುದರಿಂದ ಸಹಕರಿಸುವಂತೆ ಸಂಸದ ಪ್ರತಾಪ್ ಸಿಂಹ, ಮುಖ್ಯಮಂತ್ರಿಗಳಲ್ಲಿ ಮನವಿ ಮಾಡಿದ್ದರು.

ಅವರು ಸಮ್ಮತಿಸಿದ್ದರ ಹಿನ್ನೆಲೆಯಲ್ಲಿ ಜಲಸಂಪನ್ಮೂಲ ಸಚಿವರನ್ನೂ ಭೇಟಿ ಮಾಡಿ ತುರ್ತು ಕ್ರಮಕ್ಕೆ ಆಗ್ರಹಿಸಿದ್ದಾರೆ. ಸದ್ಯ ಕಡತ ಮಂಡಿಸಲು ಕಾರ್ಯದರ್ಶಿಗೆ ಸೂಚಿಸಿರುವ ಸಚಿವರು, ಪ್ರಸ್ತಾವನೆ ಅನುಮೋದಿಸುವ ಭರವಸೆ ನೀಡಿದ್ದಾರೆ.



ಮೈಸೂರು ಮಹಾನಗರ ಪಾಲಿಕೆ ನೂತನ ಮೇಯರ್ ಶಿವಕುಮಾರ್ ಅವರನ್ನು ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಹಾಗೂ ಅವರ ಪುತ್ರ ಭರತ್ ಮಂಜೇಗೌಡ ಅಭಿನಂದಿಸಿದರು.

ಕೋರ್ಟ್ ಚೌಡಯ್ಯ ನಿಧನ



ಮೈಸೂರು, ಸೆ.9– ಮೈಸೂರಿನ ಜಯನಗರದ ನಿವಾಸಿ ಹಾಗೂ ನ್ಯಾಯಾಲಯದ ನಿವೃತ್ತ ದಫೇದಾರ್ ಕೋರ್ಟ್ ಚೌಡಯ್ಯ (88)ಅವರು ಶುಕ್ರವಾರ ನಿಧನರಾದರು.

ಮೃತರು ಪತ್ನಿ, ಆರು ಮಂದಿ ಪುತ್ರರು ಹಾಗೂ ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ.

ಇವರ ಅಂತ್ಯಕ್ರಿಯೆ ಶನಿವಾರ ಬೆಳಗ್ಗೆ 10 ಗಂಟೆಗೆ ಜಯನಗರ–ಕೆಜಿಕೊಪ್ಪಲು ರುದ್ರ ಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ

ಮುಡಾದ 'ಮೂಢ' ಕೆಲಸಕ್ಕೆ ಮತ್ತೊಂದು ನಿದರ್ಶನ

ಮಣ್ಣಿನ ಮೇಲೆ 'ಪ್ರಹಾರ': ಪರಿಸರವಾದಿಗಳ ಆಕ್ರೋಶ

- ಪೋಷಿಸಬೇಕಿದ್ದ ಸಸಿಗಳ ಸಂಹಾರ
- ಫಲವತ್ತಾದ ಮಣ್ಣು ಹಳ್ಳದ ಪಾಲು





ಎಂ.ಟಿ.ಯೋಗೇಶ್ ಕುಮಾರ್

ಮೈಸೂರು, ಸೆ.9– ಮೈಸೂರು ದಸರಾ ಮಹೋತ್ಸವದ ಹಿನ್ನೆಲೆಯಲ್ಲಿ ಬನ್ನಿಮಂಟಪದ ಪಂಜಿನ ಕವಾಯತು ಸಂಬಂಧ ತರಾತುರಿ ಸಿದ್ಧತೆಗೆ ಮುಂದಾಗಿರುವ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮಣ್ಣಿನ ಮೇಲೆ ಗದಾಪ್ರಹಾರ ನಡೆಸುತ್ತಿದೆ ಎಂದು ಪರಿಸರವಾದಿಗಳು ಬೇಸರ ವ್ಯಕ್ತಪಡಿಸಿದ್ದಾರೆ.

ದಶಮಿಯಂದು ನಡೆಯುವ ಜಂಬೂ ಸವಾರಿ ಮೆರವಣಿಗೆ ಬನ್ನಿಮಂಟಪದಲ್ಲಿ ಮುಕ್ತಾಯದ ಬಳಿಕ ಇಲ್ಲಿನ ಮೈದಾನ'ದಲ್ಲಿ ಮೈನವಿರೇಳಿಸುವ ಪಂಜಿನ ಕವಾಯತು ನಡೆಯುತ್ತದೆ. ಆ ಮೂಲಕ ಉತ್ಸವಕ್ಕೆ ತೆರೆಬೀಳಲಿದೆ. ಈವರೆಗೆ ಸುಮ್ಮನೆ ಕುಳಿತಿದ್ದ ಮುಡಾ ಅಧಿಕಾರಿಗಳು, ದಸರೆಗೆ ದಿನಗಣನೆ ಆರಂಭವಾಗಿರುವಾಗ ತರಾತುರಿಯಲ್ಲಿ ಸಿದ್ಧತೆಗೆ ಮುಂದಾಗಿದ್ದಾರೆ. ಭಾರೀ ಯಂತ್ರೋಪಕರಣಗಳ ಬಳಸಿ ಸ್ವಚ್ಛತೆ ನಡೆಸುವ ಮೂಲಕ ಪರಿಸರವನ್ನು ಹಾಳು ಮಾಡುತ್ತಿದ್ದಾರೆ.

ಕೊರೊನಾ ಪರಿಣಾಮ ಕಳೆದೆರಡು ವರ್ಷ ಪಂಜಿನ ಕವಾಯತು ನಡೆದಿರಲಿಲ್ಲ. ಹಾಗಾಗಿ ಮುಡಾ ಅಧಿಕಾರಿಗಳು ಸ್ವಚ್ಛತೆಗೆ ಹೆಚ್ಚು ತಲೆಕೆಡಿಸಿಕೊಂಡಿರಲಿಲ್ಲ. ಪರಿಣಾಮ ಗಿಡಗಂಟಿಗಳು, ಮುಳ್ಳಿನ ಪೊದೆಗಳು ಆಳೆತ್ತರಕ್ಕೆ ಬೆಳೆದಿವೆ. ಈ ಬಾರಿ ಅದ್ಧೂರಿ ದಸರೆಗೆ ನಿರ್ಧರಿಸಿರುವ ಹಿನ್ನೆಲೆಯಲ್ಲಿ ಪಂಜಿನ ಕವಾಯತು ಮೈದಾನದ ಸ್ವಚ್ಛತೆಗೆ ತರಾತುರಿಯಲ್ಲಿ ಮುಂದಾಗಿದ್ದಾರೆ. ಕಾರ್ಯಕ್ರಮಕ್ಕೆ ಆಗಮಿಸುವ ಅತಿಥಿಗಳು, ಸಾರ್ವಜನಿಕರ ವಾಹನ ನಿಲುಗಡೆಗೆ ವ್ಯವಸ್ಥೆ ಮಾಡಲು ಗಿಡಗಂಟಿಗಳ ತೆರವು ಕಾರ್ಯಾಚರಣೆ ಆರಂಭಿಸಿದ್ದಾರೆ. ಆದರೆ ಅದಕ್ಕಾಗಿ ಅವರು ಅನುಸರಿಸುತ್ತಿರುವ ಕ್ರಮ ಪರಿಸರವಾದಿಗಳ ಆಕ್ರೋಶಕ್ಕೆ ಕಾರಣವಾಗಿದೆ.

ಗಿಡಗಂಟಿಗಳನ್ನು ನೆಲಮಟ್ಟಕ್ಕೆ ಕಟರ್ ಮೂಲಕ ಕತ್ತರಿಸಿ, ಸ್ವಚ್ಛಗೊಳಿಸಬಹುದಿತ್ತು. ಇದಕ್ಕೆ ಹೆಚ್ಚು ಕಾರ್ಮಿಕರು ಹಾಗೂ ಸಮಯದ ಅವಶ್ಯಕತೆ ಇದೆ. ಅಲ್ಲದೆ ಸ್ಥಳದಲ್ಲೇ ನಿಂತು ಸೂಕ್ತ ರೀತಿಯಲ್ಲಿ ಕೆಲಸ ಮಾಡಿಸಬೇಕು. ಆದರೆ ಇಷ್ಟೆಲ್ಲಾ ಗೋಜಿಗೆ ಹೋಗದೆ ಸುಲಭ ಮಾರ್ಗಕ್ಕಿಳಿದಿದ್ದಾರೆ. ಬೃಹತ್ ಕಟ್ಟಡಗಳನ್ನು ಅನಾಮತ್ತಾಗಿ ನೆಲಸಮಗೊಳಿಸುವ ಬಲಿಷ್ಠ ಜೆಸಿಬಿಗಳನ್ನು ಇಲ್ಲಿ ಬಳಸಲಾಗುತ್ತಿದೆ. ಇದು ಗಿಡಗಂಟಿಗಳು, ಕಳೆಯ ಗಿಡಗಳನ್ನು ಮಣ್ಣು ಸಹಿತ ಕಿತ್ತೊಗೆಯುತ್ತಿದೆ. ಅದನ್ನು ಡೋಸರ್ ಅಳವಡಿಸಿರುವ ಟ್ರ್ಯಾಕ್ಟರ್ ಮೂಲಕ ಗುಡ್ಡೆ ಮಾಡಲಾಗುತ್ತಿದೆ. ಆಗಲೂ ಐದಾರು ಇಂಚಿನಷ್ಟು ಮಣ್ಣು ಗಿಡಗಳೊಂದಿಗೆ ಗುಡ್ಡೆ ಸೇರುತ್ತಿದೆ. ಹೀಗೆ ಗುಡ್ಡೆ ಮಾಡಿದನ್ನು ಟ್ರ್ಯಾಕ್ಟರ್, ಟಿಪ್ಪರ್‌ಗಳ ಮೂಲಕ ವಿಲೇವಾರಿ ಮಾಡಲಾಗುತ್ತಿದೆ. ಹೀಗೆ ಮಣ್ಣಿನ ಮೇಲ್ಪದರ ಹಾಳಾಗುವುದರ ಜೊತೆಗೆ ಫಲವತ್ತಾದ ಮಣ್ಣು ಯಾವುದೋ ಹಳ್ಳ ಸೇರುತ್ತಿದೆ.

ನೆಟ್ಟ ಗಿಡ ಕಡಿತ: ಯಂತ್ರೋಪಕರಣಗಳ ಮೂಲಕ ಸ್ವಚ್ಛತೆ ನಡೆಸುತ್ತಿರುವ ಪರಿಣಾಮ ಹಲವಾರು ಗಿಡಗಳು ಬಲಿಯಾಗಿವೆ. ಈ ಹಿಂದೆ ಹಲವು ಸಂದರ್ಭಗಳಲ್ಲಿ ಮುಡಾ ವತಿಯಿಂದಲೇ ನೆಟ್ಟಿದ್ದ ಗಿಡಗಳು ಜೆಸಿಬಿ, ಡೋಸರ್‌ಗಳಿಂದ ಹನನವಾಗುತ್ತಿವೆ. ಕೆಲ ವರ್ಷ ಕಳೆದಿದ್ದರೆ ಅವು ಮರಗಳಾಗುತ್ತಿದ್ದವು. ಆದರೆ ಅವೈಜ್ಞಾನಿಕ ಕ್ರಮದಿಂದಾಗಿ ಬೆಳೆಯುವ ಹಂತದಲ್ಲೇ ಜೀವ ಕಳೆದುಕೊಂಡಿವೆ. ಅನೇಕ ಮರಗಳ ಕೊಂಬೆಗಳನ್ನು ಜೆಸಿಬಿ ಮೂಲಕವೇ ಮುರಿಯಲಾಗಿದೆ. ಕೆಲ ಮರಗಳು ಬುಡಸಮೇತ ನೆಲಕ್ಕುರುಳಿವೆ. ಇದರಿಂದ ಅದೆಷ್ಟೋ ಪ್ರಾಣಿ–ಪಕ್ಷಿಗಳು ನೆಲೆ ಕಳೆದುಕೊಂಡಿವೆ.

ನಿರ್ಲಕ್ಷ್ಯದ ಪರಮಾವಧಿ: ಬನ್ನಿಮಂಟಪ ಪಂಜಿನ ಕವಾಯತು ಮೈದಾನ ವರ್ಷದಲ್ಲಿ ಮೂರು ಬಾರಿಯಷ್ಟೇ ಬಳಕೆ ಮಾಡಲಾಗುತ್ತಿದೆ. ಗಣರಾಜ್ಯೋತ್ಸವ ಹಾಗೂ ಸ್ವಾತಂತ್ರ್ಯೋತ್ಸವಕ್ಕಾಗಿ ಮೈದಾನದ ಒಳಭಾಗದಲ್ಲಿ ಮಾತ್ರ ಸ್ವಚ್ಛತೆ ಕೈಗೊಳ್ಳಲಾಗುತ್ತದೆ. ಹೊರ ಆವರಣದ ಸ್ವಚ್ಛತೆ ದಸರಾದಲ್ಲಿ ಮಾತ್ರ. ಅದರಲ್ಲೂ ಕಳೆದೆರಡು ವರ್ಷ ಪಂಜಿನ ಕವಾಯತು ನಡೆಯದ ಕಾರಣ ತೀವ್ರ ನಿರ್ಲಕ್ಷ್ಯ ವಹಿಸಲಾಗಿದೆ. ನಿರ್ವಹಣೆ ವೈಫಲ್ಯದಿಂದ ಗಿಡಗಂಟಿಗಳು ಆಳೆತ್ತರಕ್ಕೆ ಬೆಳೆದಿವೆ. ಮುಳ್ಳಿನ ಗಿಡಗಳ ಎಲ್ಲೆಡೆ ವ್ಯಾಪಿಸಿಕೊಂಡಿವೆ. ಈಗ ತರಾತುರಿಯಲ್ಲಿ ಸ್ವಚ್ಛತೆಗೆ ಮುಂದಾಗಿದ್ದಾರೆ. ಕಟರ್ ಬಳಸಿದ್ದರೆ ಮಣ್ಣು ಹಾಳಾಗುತ್ತಿರಲಿಲ್ಲ. ಜೆಸಿಬಿ, ಡೋಸರ್ ಬಳಸುತ್ತಿರುವ ಕಾರಣ ಐದಾರು ಇಂಚು ಫಲವತ್ತಾದ ಮಣ್ಣು ಯಾವುದೋ ಹಳ್ಳ ಸೇರುತ್ತಿದೆ. ಹೀಗೆ ಸ್ವಚ್ಛಗೊಳಿಸಿದ ಸ್ಥಳವನ್ನು ಮಳೆಯಲ್ಲಿ ಬಳಸುವುದೂ ಕಷ್ಟಸಾಧ್ಯ. ಭೂಮಿಯ ಮೇಲ್ಮೈ ಮಣ್ಣಿನ ರಕ್ಷಣೆಯನ್ನು ಗಂಭೀರವಾಗಿ ಪರಿಗಣಿಸಿರುವ ಸರ್ಕಾರ, ಈ ನಿಟ್ಟಿನಲ್ಲಿ ಹಲವು ಕಾರ್ಯಕ್ರಮ ರೂಪಿಸಿದೆ. ಆದರೆ ಮುಡಾ ಅಧಿಕಾರಿಗಳು ಹಾಗೂ ಸಿಬ್ಬಂದಿ ನಿರ್ಲಕ್ಷ್ಯದ ಪರಮಾವಧಿ ಪ್ರದರ್ಶಿಸಿದ್ದಾರೆ. ಅವೈಜ್ಞಾನಿಕ ಕ್ರಮದಿಂದ ಪರಿಸರದ ಮೇಲೆ ಗದಾಪ್ರಹಾರ ನಡೆಸಿರುವುದು ಅಸಹನೀಯ ಎಂದು ಪರಿಸರ ವಾದಿಗಳು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

'ಮಣ್ಣು ಉಳಿಸಿ' ಅಭಿಯಾನ ತಿಳಿದಿಲ್ಲವೇ?

ಇಶಾ ಫೌಂಡೇಷನ್‌ನ ಜಗ್ಗಿ ವಾಸುದೇವ್ ಅವರು ಬೈಕ್‌ನಲ್ಲಿ ಹಲವು ದೇಶಗಳ ಪರ್ಯಟನೆ ಮಾಡಿ ಮಣ್ಣಿನ ರಕ್ಷಣೆ ಬಗ್ಗೆ ಜಾಗೃತಿ ಮೂಡಿಸಿದ್ದಾರೆ. ಮಣ್ಣು ಹಾಳು ಮಾಡಿದರೆ ಎದುರಿಸಬೇಕಾದ ದುಷ್ಪರಿಣಾಮಗಳ ಬಗ್ಗೆ ತಿಳಿವಳಿಕೆ ನೀಡಿದ್ದಾರೆ. ಸರ್ಕಾರವೂ ಮಣ್ಣಿನ ರಕ್ಷಣೆಗೆ ಹಲವು ಕಾರ್ಯಕ್ರಮ ರೂಪಿಸಿದೆ. ಕೃಷಿ ಇಲಾಖೆ ಮೂಲಕ ಮಣ್ಣಿನ ಫಲವತ್ತತೆ ರಕ್ಷಣೆ ಬಗ್ಗೆ ರೈತರಿಗೆ ಮನದಟ್ಟು ಮಾಡಲಾಗುತ್ತಿದೆ. ಆದರೆ ಇದ್ಯಾವುದೂ ನಮ್ಮ ಅಧಿಕಾರಿಗಳಿಗೆ ತಿಳಿದಿಲ್ಲವೇ? ಕಟರ್ ಮೂಲಕ ಗಿಡಗಂಟಿಗಳ ಕತ್ತರಿಸಲು ಕೆಲ ದಿನಗಳು ಬೇಕಾಗಬಹುದು. ಹಾಗೆಂದ ಮಾತ್ರಕ್ಕೆ ದೊಡ್ಡ ಯಂತ್ರೋಪಕರಣಗಳ ಮೂಲಕ ಮಣ್ಣನ್ನು ಹಾಳು ಮಾಡುವುದು ಸರಿಯಲ್ಲ. ಈ ರೀತಿಯ ಕಾರ್ಯದಿಂದ ಹೆಮ್ಮರವಾಗಿ ಜೀವಸಂಕುಲಕ್ಕೆ ನೆರವಾಗಬೇಕಿದ್ದ ಗಿಡಗಳೂ ಹಾಳಾಗಿವೆ. ಈ ಬಗ್ಗೆ ಸಂಬಂಧಪಟ್ಟವರು ಗಮನಹರಿಸಿ, ಸೂಕ್ತ ಕ್ರಮ ವಹಿಸಬೇಕಿದೆ. -ಸಲೀಮ್, ಪರಿಸರವಾದಿ



ನಾಳೆ ಕೆ.ಆರ್.ಬ್ಯಾಂಕ್ ವಾರ್ಷಿಕ ಮಹಾಸಭೆ

ಮೈಸೂರು, ಸೆ.9–ಮೈಸೂರಿನ ಶ್ರೀ ಕೃಷ್ಣರಾಜೇಂದ್ರ ಸಹಕಾರ ಬ್ಯಾಂಕ್‌ನ ವಾರ್ಷಿಕ ಮಹಾಸಭೆ ಸೆ.11ರಂದು ಬೆಳಗ್ಗೆ 11 ಗಂಟೆಗೆ ಮಹಾರಾಜ ಶತಮಾನೋತ್ಸವ ಭವನದಲ್ಲಿ ಬ್ಯಾಂಕ್ ಅಧ್ಯಕ್ಷ ಪ್ರತಿಧ್ವನಿ ಪ್ರಸಾದ್ ಅಧ್ಯಕ್ಷತೆಯಲ್ಲಿ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಎಸಿಬಿಯ ಎಲ್ಲಾ ಪ್ರಕರಣಗಳು ಲೋಕಾಯುಕ್ತಕ್ಕೆ ವರ್ಗಾವಣೆ: ರಾಜ್ಯ ಸರ್ಕಾರ ಅಧಿಕೃತ ಆದೇಶ


ಬೆಂಗಳೂರು, ಸೆ.9– ಸಿದ್ದರಾಮಯ್ಯ ನೇತೃತ್ವದ ಸರ್ಕಾರ ರಚಿಸಿದ್ದ ಭ್ರಷ್ಟಾಚಾರ ನಿಗ್ರಹ ದಳ(ಎಸಿಬಿ)ವನ್ನು ರದ್ದುಗೊಳಿಸಿರುವ ಹೈಕೋರ್ಟ್ ಆದೇಶವನ್ನು ಅನುಷ್ಠಾನಗೊಳಿಸಿ ರಾಜ್ಯ ಸರ್ಕಾರ ಇಂದು(ಸೆ.9) ಆದೇಶ ಹೊರಡಿಸಿದೆ.

ನ್ಯಾಯಾಲಯದ ಆದೇಶದನ್ವಯ ಲೋಕಾಯುಕ್ತ ಪೊಲೀಸ್ ವಿಭಾಗಕ್ಕೆ ಈ ಹಿಂದೆ ನೀಡಲಾಗಿದ್ದ ತನಿಖಾಧಿಕಾರವನ್ನು ಮತ್ತೆ ನೀಡಲಾಗಿದೆ. ಈ ಹಿಂದಿನಂತೆ ಲೋಕಾಯುಕ್ತ ಪೊಲೀಸ್ ವಿಭಾಗಕ್ಕೆ ಠಾಣಾಧಿಕಾರವನ್ನು ನೀಡಲಾಗಿದೆ. ಎಸಿಬಿಗೆ ನೀಡಲಾಗಿದ್ದ ಎಲ್ಲಾ ಅಧಿಕಾರಗಳನ್ನು ರದ್ದುಗೊಳಿಸಿ, ಸದರಿ ಅಧಿಕಾರಗಳನ್ನು ಲೋಕಾಯುಕ್ತ ಪೊಲೀಸ್ ಠಾಣೆಗಳಿಗೆ ನೀಡಲಾಗಿದೆ. ಎಸಿಬಿಯಲ್ಲಿ ಪ್ರಸ್ತುತ ಬಾಕಿಯಿರುವ ತನಿಖೆಗಳು ಹಾಗೂ ಇತರೆ ಶಿಸ್ತು ಪ್ರಕರಣಗಳು ಮತ್ತು ಖಾಸಗಿ ದೂರುದಾರರ ಪ್ರಕರಣಗಳನ್ನು ಸಂಪೂರ್ಣವಾಗಿ ಲೋಕಾಯುಕ್ತಕ್ಕೆ ವರ್ಗಾಯಿಸಿ ಆದೇಶ ಹೊರಡಿಸಲಾಗಿದೆ.



ಹೆಸರಿಗೆ ತಕ್ಕಂತೆ ಅರ್ಜುನ ತೂಕವುಳ್ಳವನು!

ದಸರಾ ಗಜಪಡೆ ಸದಸ್ಯರ ಸುರಕ್ಷೆ ದೃಷ್ಟಿಯಿಂದ ತೂಕ ಪ್ರಕ್ರಿಯೆ ಪೂರ್ಣ



ಶುಕ್ರವಾರ ದಸರಾ ಗಜಪಡೆಯ ಆನೆಗಳ ತೂಕ ಮಾಡಿಸಲಾಯಿತು.

ಮೈಸೂರು,ಸೆ.9(ಎಂಟಿವೈ)– ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳಲು ವಿವಿಧ ಶಿಬಿರಗಳಿಂದ ಬಂದು ಅರಮನೆ ಆವರಣದಲ್ಲಿ ಬೀಡುಬಿಟ್ಟಿರುವ ಅಂಬಾರಿ ಆನೆ ಅಭಿಮನ್ಯು ನೇತೃತ್ವದ ಎಲ್ಲಾ 14 ಆನೆಗಳನ್ನು ಶುಕ್ರವಾರ ತೂಕ ಮಾಡಿಸಲಾಯಿತು.

ಮೈಸೂರಿನ ಧನ್ವಂತರಿ ರಸ್ತೆಯಲ್ಲಿರುವ ಸಾಯಿರಾಮ್ ಅಂಡ್ ಕೊ ತೂಕದ ಕೇಂದ್ರಕ್ಕೆ ಇಂದು ಬೆಳಗ್ಗೆ ಅರಮನೆಯಿಂದ ದಸರಾದ ಗಜಪಡೆಯನ್ನು ಕರೆತಂದು ತೂಕ ಮಾಡಿಸಲಾಯಿತು. ಪ್ರತಿ ವರ್ಷ ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳುವ ಆನೆಗಳ ತೂಕ ಮಾಡಿಸುವುದು ವಾಡಿಕೆ. ಸೆ.11ರಂದು ಮೊದಲ ತಂಡದಲ್ಲಿ ಆಗಮಿಸಿದ್ದ 9 ಆನೆಗಳಿಗೆ ಈಗಾಗಲೇ ತೂಕ ಮಾಡಿಸಲಾಗಿತ್ತು. ಸೆ.7ರಂದು ಎರಡನೇ ತಂಡದಲ್ಲಿ ಬಂದ 5 ಆನೆಗಳ ಜೊತೆಗೆ ಎಲ್ಲಾ 14 ಆನೆಗಳಿಗೂ ತೂಕ ಮಾಡಿಸಿ, ದಾಖಲೀಕರಿಸಲಾಯಿತು. ಅರಮನೆ ಆವರಣದಿಂದ ಬೆಳಗ್ಗೆ 7.45ಕ್ಕೆ ಹೊರಟ ಗಜಪಡೆಯ 14 ಆನೆಗಳು ಕೆ.ಆರ್.ವೃತ್ತ, ಸಯ್ಯಾಜಿರಾವ್ ರಸ್ತೆ ಮೂಲಕ ಧನ್ವಂತರಿ ರಸ್ತೆಯ ಸಾಯಿರಾಂ ಅಂಡ್ ಕೊ ತೂಕದ ಕೇಂದ್ರ ತಲುಪಿದವು. ಅಲ್ಲಿ ಎಲ್ಲಾ ಆನೆಗಳಿಗೂ ತೂಕ ಮಾಡಿಸಿ, ದಾಖಲೀಕರಿಸಿದ ಬಳಿಕ ದಿವಾನ್ಸ್ ರಸ್ತೆ ಇರ್ವಿನ್ ರಸ್ತೆ ಮೂಲಕ ಸಾಗಿ ಕೆ.ಆರ್.ಆಸ್ಪತ್ರೆಯ ವೃತ್ತ ಬಳಸಿ, ಸಯ್ಯಾಜಿರಾವ್ ರಸ್ತೆ, ಕೆ.ಆರ್.ವೃತ್ತ ಹಾದು ಅರಮನೆಗೆ ವಾಪಸ್ಸಾದವು.

ಅರ್ಜುನನೇ ಬಲುಭಾರ: ಮೊದಲ ತಂಡದಲ್ಲಿ ಬಂದ 6 ಹಾಗೂ ಎರಡನೇ ತಂಡ ಸೇರಿದಂತೆ 10 ಗಂಡಾನೆಗಳಲ್ಲಿ ಹಿರಿಯಣ್ಣ ಅರ್ಜುನನೇ ಬಲು ಭಾರ.

ಸೆ.12ರಂದು ಮೊದಲ ಸಿಡಿಮದ್ದು ತಾಲೀಮು

ದಸರಾ ಗಜಪಡೆಯ ಆರೋಗ್ಯದ ಮೇಲೆ ನಿಗಾ ಇಡಲಾಗುತ್ತದೆ. ಪೌಷ್ಟಿಕ ಆಹಾರ ನೀಡಿ ಆರೈಕೆ ಮಾಡಲಾಗುತ್ತಿದೆ. ಇಂದು ಎರಡೂ ತಂಡದಲ್ಲಿ ಬಂದಿರುವ ಎಲ್ಲಾ 14 ಆನೆಗಳಿಗೂ ತೂಕ ಮಾಡಿಸಲಾಗಿದೆ. ಮೊದಲ ತಂಡದ ಆನೆಗಳ ತೂಕದಲ್ಲಿ ಹೆಚ್ಚಳವಾಗಿದೆ. ಎರಡನೇ ತಂಡದಲ್ಲಿ ಬಂದಿರುವ ಗಂಡಾನೆಗಳು 4 ಸಾವಿರಕ್ಕಿಂತ ಹೆಚ್ಚಿನ ತೂಕ ಹೊಂದಿವೆ. ಗಜಪಡೆಯಲ್ಲಿರುವ ಎಲ್ಲಾ 14 ಆನೆಗಳ ಆರೋಗ್ಯ ಉತ್ತಮವಾಗಿದೆ. ಸೆ.12ರಿಂದ ಎಲ್ಲಾ ಆನೆಗಳು ಅರಮನೆಯಿಂದ ಬನ್ನಿಮಂಟಪದ ಪಂಜಿನ ಕವಾಯತು ಮೈದಾನದವರೆಗೆ ತಾಲೀಮಿನಲ್ಲಿ ಪಾಲ್ಗೊಳ್ಳಲಿವೆ. ಅದೇ ದಿನ ಫಿರಂಗಿ ತಾಲೀಮು ನಡೆಸಲು ನಿರ್ಧರಿಸಲಾಗಿದೆ.

–ಡಾ.ವಿ.ಕರಿಕಾಳನ್, ಡಿಸಿಎಫ್
ಮೈಸೂರು ವನ್ಯಜೀವಿ ವಿಭಾಗ

63 ವರ್ಷದ ಅರ್ಜುನ 5950 ತೂಕ ಹೊಂದಿದ್ದಾನೆ. 57 ವರ್ಷದ ಅಂಬಾರಿ ಆನೆ ಅಭಿಮನ್ಯು 5000ಕೆಜಿ, 22 ವರ್ಷದ ಭೀಮ 4345 ಕೆಜಿ, 39 ವರ್ಷದ ಮಹೇಂದ್ರ 4450 ಕೆಜಿ, 39 ವರ್ಷದ ಗೋಪಾಲಸ್ವಾಮಿ 5460 ಕೆಜಿ, 44 ವರ್ಷದ ಧನಂಜಯ 4890 ಕೆಜಿ, 45 ವರ್ಷದ ಕಾವೇರಿ 3245 ಕೆಜಿ, 49 ವರ್ಷದ ಚೈತ್ರ 3235 ಕೆಜಿ, 21 ವರ್ಷದ ಲಕ್ಷ್ಮೀ 3150 ಕೆಜಿ ತೂಗಿದ್ದಾಳೆ.

ಎರಡನೇ ತಂಡದಲ್ಲಿ ಆಗಮಿಸಿದ 40 ವರ್ಷದ ಶ್ರೀರಾಮ 4475, 18 ವರ್ಷದ ಪಾರ್ಥಸಾರಥಿ 3445 ಕೆಜಿ, 41 ವರ್ಷದ ಗೋಪಿ 4670 ಕೆಜಿ, 40 ವರ್ಷದ ಸುಗ್ರೀವ 4785, ಹೆಣ್ಣಾನೆಗಳಲ್ಲೇ ಹಿರಿಯ, 63 ವರ್ಷದ ವಿಜಯ 2760 ಕೆಜಿ ತೂಗಿವೆ.

ತಿಂಗಳಲ್ಲೇ 425 ಕೆಜಿ ತೂಕ ಹೆಚ್ಚಿಸಿಕೊಂಡ ಭೀಮ: ಮೊದಲ ತಂಡದಲ್ಲಿ ಮೈಸೂರಿಗೆ ಬಂದು, ಆ.10ರಿಂದ ಅರಮನೆ ಆವರಣದಲ್ಲಿ ಆರೈಕೆಯಲ್ಲಿರುವ 9 ಆನೆಗಳಲ್ಲಿ ಕಿರಿಯ ಗಂಡಾನೆ 22 ವರ್ಷದ ಭೀಮ ತಿಂಗಳಲ್ಲೇ 425 ಕೆಜಿ ತೂಕ ಹೆಚ್ಚಿಸಿಕೊಂಡಿದೆ. 2018ರಲ್ಲಿ ಕಾಡಾನೆ ದಾಳಿಗೆ ಒಳಗಾಗಿ ಕಿಬ್ಬೊಟ್ಟೆಗೆ ಗಂಭೀರವಾಗಿ ಗಾಯಗೊಂಡು ಸುಧಾರಿಸಿಕೊಂಡಿದ್ದ ಭೀಮನಿಗೆ ಆರಂಭದಲ್ಲಿ ಕರುಳಿನ ಸಮಸ್ಯೆ ಇತ್ತು. ಚಿಕಿತ್ಸೆಯಿಂದ ಈಗ ಚೇತರಿಸಿಕೊಂಡಿದೆ. ವಿಶೇಷ ಆರೈಕೆಯಿಂದ ಗಜಪಡೆಯ ಇತರ ಸದಸ್ಯರಿಗಿಂತ ಹೆಚ್ಚು ತೂಕ ಹೆಚ್ಚಿಸಿಕೊಂಡಿದ್ದಾನೆ.

ಅರ್ಜುನ 230 ಕೆಜಿ, ಅಭಿಮನ್ಯು 175 ಕೆಜಿ, ಮಹೇಂದ್ರ 200 ಕೆಜಿ, ಗೋಪಾಲಸ್ವಾಮಿ 320, ಧನಂಜಯ 80, ಕಾವೇರಿ 140, ಚೈತ್ರ 185 ಹಾಗೂ ಕಿರಿಯ ಹೆಣ್ಣಾನೆ ಲಕ್ಷ್ಮೀ 230 ಕೆಜಿ ತೂಕ ಹೆಚ್ಚಿಸಿಕೊಂಡಿವೆ.

ಸೆ.12ರಿಂದ ತಾಲೀಮು: ಅರಣ್ಯ ಸಚಿವ ಉಮೇಶ್ ಕತ್ತಿ ನಿಧನದ ಹಿನ್ನೆಲೆ ಹಾಗೂ ಮಳೆ ಕಾರಣದಿಂದಾಗಿ ಕಳೆದ ಎರಡು ದಿನಗಳಿಂದ ಗಜಪಡೆಗೆ ತಾಲೀಮಿನಿಂದ ವಿನಾಯಿತಿ ನೀಡಲಾಗಿದ್ದು, ಕೇವಲ ಅರಮನೆ ಅಂಗಳದಲ್ಲಿಯೇ ಬೆಳಗ್ಗೆ ಹಾಗೂ ಸಂಜೆ ವೇಳೆ 4 ಕಿ.ಮಿ ನಡೆಸಲಾಗುತ್ತಿದೆ. ಸೋಮವಾರದಿಂದ(ಸೆ.12) ದಸರಾ ಗಜಪಡೆಯ ಎಲ್ಲಾ 14 ಆನೆಗಳನ್ನು ಅರಮನೆಯಿಂದ ಬನ್ನಿಮಂಟಪದವರೆಗೂ ತಾಲೀಮಿಗೆ ಕರೆದೊಯ್ಯಲಾಗುತ್ತದೆ. ಈ ಸಂದರ್ಭದಲ್ಲಿ ಡಿಸಿಎಫ್ ಡಾ.ವಿ.ಕರಿಕಾಳನ್, ಆರ್‌ಎಫ್‌ಓ ಸಂತೋಷ್‌ಕುಮಾರ್, ಪಶುವೈದ್ಯ ಡಾ.ಮುಜೀಬ್, ಸಹಾಯಕರಾದ ರಂಗರಾಜು, ಅಕ್ರಮ್ ಹಾಗೂ ಇನ್ನಿತರರು ಪಾಲ್ಗೊಂಡಿದ್ದರು.



ತೂಕ ಮಾಡಿಸಲು 14 ಆನೆಗಳನ್ನು ಕೆ.ಆರ್.ವೃತ್ತದ ಮೂಲಕ ಕರೆದೊಯ್ಯುತ್ತಿರುವುದು.

ಈ ಬಾರಿಯ ದಸರಾದಲ್ಲಿ ಸರ್ಕಾರದ ನೆರವಿನ ನಿರೀಕ್ಷೆಯಲ್ಲಿ ಟಾಂಗಾವಾಲಾಗಳು



ಮೈಸೂರು, ಸೆ.9(ಜಿಎ)–ಮೈಸೂರು ಟಾಂಗವಾಲಾಗಳು ಈ ಬಾರಿಯ ಅದ್ಧೂರಿ ದಸರಾ ಮಹೋತ್ಸವದಲ್ಲಾದರೂ ಪೋಷಾಕು, ಗೌರವ ಧನ ನೀಡುತ್ತಾರಾ ಎಂಬ ನಿರೀಕ್ಷೆಯಲ್ಲಿದ್ದಾರೆ.

ಮೈಸೂರಿಗೆ ಬರುವ ಪ್ರವಾಸಿಗರು ಪ್ರವಾಸಿ ತಾಣಗಳನ್ನು ಎಷ್ಟು ಇಷ್ಟಪಡುತ್ತಾರೋ, ಟಾಂಗಾದಲ್ಲಿ ಮೈಸೂರನ್ನು ಸುತ್ತುವುದು ಎಂದರೆ ಅಷ್ಟೇ ಅಚ್ಚುಮೆಚ್ಚು. ಆದರೆ, ಇದನ್ನು ಪೋಷಿಸುವಲ್ಲಿ ಜಿಲ್ಲಾಡಳಿತ ವಿಫಲವಾಗುತ್ತಿದ್ದು, ಕಳೆದ ಮೂರು ವರ್ಷಗಳಿಂದ ವಿಶೇಷ ಪೋಷಾಕು, ಗೌರವ ಧನವನ್ನು ನೀಡುವುದನ್ನೆ ಮರೆಯುತಿದೆ. ಬೇಸರದಲ್ಲಿರುವ ಮೈಸೂರು ಶಾಪಸಂದ್ ಟಾಂಗ ಯೂನಿಯನ್ ವತಿಯಿಂದ ಸೋಮವಾರ ಸಂಬಂಧಪಟ್ಟ ಅಧಿಕಾರಿಗಳಿಗೆ ಮನವಿ ಸಲ್ಲಿಸಲು ಮುಂದಾಗಿದ್ದಾರೆ. ಮೈಸೂರು ದಸರಾ ಸಂದರ್ಭದಲ್ಲಿ ವಿದ್ಯುತ್ ದೀಪಾಲಂಕಾರದಲ್ಲಿ ಜಗಮಗಿಸುವ ಮೈಸೂರು ಒಂದು ಸ್ವರ್ಗ ಲೋಕದಂತೆ ಕಾಣುತ್ತದೆ. ಇದನ್ನು ನೋಡಲು ದೇಶ–ವಿದೇಶ ಗಳಿಂದಲೂ ಜನರು ಬರುತ್ತಾರೆ. ಅದರಲ್ಲೂ ಟಾಂಗ ಹತ್ತಿ ನಗರವನ್ನು ಸುತ್ತುವುದೇ ಒಂದು ಅದ್ಭುತ ಅನುಭವ. ಕಳೆದ ಹಲವಾರು ವರ್ಷ ಗಳಿಂದ ದಸರಾ ಉದ್ಘಾಟನೆಯ ದಿನದಂದು ಅರಮನೆಯ ಒಳಗೆ ಟಾಂಗಾ ಪ್ರವೇಶಿಸಲು ಅವಕಾಶ ನೀಡುತ್ತಿದ್ದರು. ಜೊತೆಗೆ ಟಾಂಗಳಿಗೆ ಬಣ್ಣ ಬಳಿಸುತ್ತಿದ್ದರು. ವಿಶಿಷ್ಟ ಪೋಷಾಕು, ಪೇಟಾ ಹಾಗೂ ದಸರಾ ಬಳಿಕ ಎಲ್ಲರಿಗೂ ಗೌರವ ಧನವನ್ನು ನೀಡುವ ವಾಡಿಕೆ ಇತ್ತು. ಆದರೆ, ಕಳೆದ ಮೂರು ವರ್ಷಗಳಿಂದ ಇದಕ್ಕೆ ಕಡಿವಾಣ ಬಿದ್ದಿದ್ದು, ಟಾಂಗಾವಾಲಾಗಳನ್ನು ಮರೆತಂತೆ ಕಾಣುತ್ತಿದೆ.

ಮೈಸೂರಿನಲ್ಲಿ 200ಕ್ಕೂ ಹೆಚ್ಚು ಇದ್ದ ಟಾಂಗಾ ಗಾಡಿಗಳು ಈಗ 100–120ಕ್ಕೆ ಇಳಿದಿದೆ. ಎಂದು ಅಂದಾಜು ಇದ್ದು, ಅದರಲ್ಲಿ 50 ಸಾರೋಟು, 60ಕ್ಕೂ ಹೆಚ್ಚು ಶಾಪಸದ್ ಟಾಂಗಗಳು. ಅವುಗಳ ನಿರ್ವಹಣೆಗಾಗಿ ಅಗ್ರಹಾರ, ಕುಕ್ಕರಹಳ್ಳಿ ಕೆರೆ ಬಳಿ ಹಾಗೂ ಆರ್.ಎಂ.ಸಿ ಯಾರ್ಡ್ ಮತ್ತು ಗ್ರಾಮಾಂತರ ಬಸ್ ನಿಲ್ದಾಣದ ಬಳಿ ಟಾಂಗಾ ನಿಲ್ದಾಣಗಳಿವೆ. ನಿಲ್ದಾಣಗಳು ಇದ್ದರೂ ಅಲ್ಲಿ ಟಾಂಗಾಗಳಿಗೆ ಬೇಕಿರುವ ಅಗತ್ಯ ಸೌಲಭ್ಯಗಳೇ ಇಲ್ಲ.

ಕಳೆದ ಮೂರು ವರ್ಷಗಳಿಂದ ಟಾಂಗಾವಾಲಾಗಳೇ ದಸರಾ ಆರಂಭಕ್ಕೂ ಮುನ್ನವೇ ಕೈಯ್ಯಲ್ಲಿ ಸಾಧ್ಯವಾಗುವ ವೆಚ್ಚದಲ್ಲಿ ಕುದುರೆ ಗಾಡಿಗಳನ್ನು ರಿಪೇರಿ ಮಾಡಿಸಿ. ಬಣ್ಣ ಬಳಿದು, ನಯನ ಮನೋಹರ ದೀಪಗಳನ್ನು ಅಳವಡಿಸಿ, ಆಕರ್ಷಕವಾಗಿ ಕಾಣುವಂತೆ ಮಾಡಿಕೊಂಡು ಪ್ರವಾಸಿಗರನ್ನು ಸೆಳೆಯಲು ಸಜ್ಜಾಗುತ್ತಾರೆ. ಇವರಿಗೆ ಸರ್ಕಾರ ಪ್ರೋತ್ಸಾಹ ಧನ ನೀಡಿದರೆ, ಮತ್ತಷ್ಟು ಉತ್ಸಾಹದೊಂದಿಗೆ ಪ್ರವಾಸಿಗರನ್ನು ಸ್ವಾಗತಿಸಲು ಸಹಕಾರಿಯಾಗಲಿದೆ.

ಪ್ರವಾಸಿಗರೇ ಟಾಂಗಾಗಳ ಆದಾಯಕ್ಕೆ ಆಧಾರ ಸ್ತಂಭವಾಗಿದ್ದು, ದಸರಾ ಸಮಯದಲ್ಲಿ ಅವರೇ ಆಕರ್ಷಿತರಾಗಿ ತಮ್ಮತ್ತ ಬರುತ್ತಾರೆ. ಇದರಿಂದ ನಮಗೆ ಸ್ವಲ್ಪ ಸಂಪಾದನೆಯಾಗುತ್ತದೆ. ಸರ್ಕಾರ ಈ ಬಾರಿ ಅದ್ದೂರಿ ದಸರಾ ಮಾಡಲು ನಿರ್ಧರಿಸಿರುವುದು ಸಂತಸದ ವಿಚಾರ. ಕಳೆದ ಮೂರು ವರ್ಷಗಳಿಂದ ಸರ್ಕಾರ ನಮ್ಮತ್ತ ಗಮನಹರಿಸದೆ ನಾವು ಸಂಕಷ್ಟದಲ್ಲಿದ್ದೇವೆ. ಈ ಬಾರಿಯಾದರೂ ಇತ್ತ ಮುಖ ಮಾಡಿ ನಮನ್ನೂ ಗುರುತಿಸಬೇಕಿದೆ ಎಂದು ಮೈಸೂರು ಶಾಪಸದ್ ಟಾಂಗ ಯೂನಿಯನ್‌ನ ಅಧ್ಯಕ್ಷ ಫೈಯಾಸ್ ಅಹಮ್ಮದ್ 'ಮೈಸೂರು ಮಿತ್ರ'ನಲ್ಲಿ ತಮ್ಮ ಅಳಲು ತೋಡಿಕೊಂಡರು.

ಮೈಸೂರು ಟಾಂಗಾ ಸವಾರಿ ಎಂದರೆ ಅದಕ್ಕೆ ತನ್ನದೆ ಆದ ಮಹತ್ವವಿದ್ದು, ಮೈಸೂರಿನ ಮಹಾರಾಜರಾಗಿದ್ದ ನಾಲ್ವಡಿ ಅವರು ಶಾಪಸಂದ್ ಟಾಂಗಾವನ್ನು ಮೆಚ್ಚಿ ಅಂದಿನಿಂದಲೂ ವಿಶೇಷ ಪ್ರೋತ್ಸಾಹವನ್ನು ನೀಡಿದ್ದಾರೆ. ದೇಶ, ವಿದೇಶದ ವಿವಿಧ ಭಾಗಗಳಿಂದ ಮೈಸೂರಿಗೆ ಬರುವ ಪ್ರವಾಸಿಗರು ಟಾಂಗಾದಲ್ಲಿ ಒಂದು ರೌಂಡ್ ಹಾಕುತ್ತಾರೆ. ಪ್ರವಾಸೋದ್ಯಮವನ್ನು ಉತ್ತೇಜಿಸಲು ಸಹಕಾರಿಯಾಗಿರುವ ಟಾಂಗಾ ಮತ್ತು ಟಾಂಗಾವಾಲಾಗಳಿಗೆ ಮೈಸೂರಿನ ಜನತೆ, ಸಂಘ ಸಂಸ್ಥೆ ಮತ್ತು ಪೊಲೀಸ್ ಇಲಾಖೆ ಸದಾಕಾಲ ಸಹಕಾರ ನೀಡುತ್ತಿದ್ದು, ಸರ್ಕಾರ ಮಾತ್ರ ಮರೆತ್ತಿದೆ ಎಂದು ನಮಗೆ ಅನಿಸುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಮಾಜಿ ಮುಖ್ಯಮಂತ್ರಿ ಕುಮಾರ ಸ್ವಾಮಿ ಅವರು ಮುಖ್ಯಮಂತ್ರಿಗಳಾಗಿದ್ದಾಗ ಅಂದು ನಡೆದ ದಸರಾ ಮಹೋತ್ಸವದ ವೇಳೆ ಮೈಸೂರಿನ ಕಲಾಮಂದಿರದ ಮುಂಭಾಗ ಮೈಸೂರಿನ ಎಲ್ಲಾ ಟಾಂಗಾವಾಲಾಗಳನ್ನು ಕರೆಸಿ, ಎಲ್ಲರಿಗೂ ಎರಡು ಜೊತೆ ವಿಶೇಷ ಪೋಷಾಕು, ಪೇಟ ಮತ್ತು ಗೌರವ ಧನ ನೀಡಿ ಗೌರವಿಸಿದ್ದರು. ಅದನ್ನು ಬಿಟ್ಟರೆ ಮುಂದೆ ಯಾರು ನಮ್ಮ ಬಗ್ಗೆ ಚಿಂತಿಸುತ್ತಿಲ್ಲ. ಈ ಬಾರಿಯ ಅದ್ಧೂರಿ ದಸರಾದಲ್ಲಿ ಏನು ಮಾಡುತ್ತಾರೋ ನೋಡೋಣ ಎನ್ನುತ್ತಾರೆ.



2018ರ ದಸರಾ ಮಹೋತ್ಸವದ ಅಂದಿನ ಮುಖ್ಯಮಂತ್ರಿ ಹೆಚ್.ಡಿ.ಕುಮಾರ ಸ್ವಾಮಿ ಟಾಂಗಾವಾಲಾಗಳಿಗೆ ವಿಶೇಷ ಪೋಷಾಕು, ಪೇಟಾ ವಿತರಿಸಿದ್ದರು.

ವಿರಾಜಪೇಟೆಯಲ್ಲಿ ವರ್ಣರಂಜಿತ ಮೆರವಣಿಗೆಯೊಂದಿಗೆ ಗಣೇಶನ ವಿಸರ್ಜನೆ

ಅಲಂಕೃತ 22 ಮಂಟಪಗಳ ಭವ್ಯ ಮೆರವಣಿಗೆ, ಡಿಜೆ ವಾದ್ಯ ಗೋಷ್ಠಿ

- ಮಳೆಯ ನಡುವೆಯೇ ಕುಣಿದು ಕುಪ್ಪಳಿಸಿದ ಸಾವಿರಾರು ಜನರು
- ಪಟ್ಟಣದಲ್ಲಿ ಭಾರೀ ಬಿಗಿ ಪೊಲೀಸ್ ಬಂದೋಬಸ್ತ್: ಎಲ್ಲೆಡೆ ಕಟ್ಟೆಚ್ಚರ

ವಿರಾಜಪೇಟೆ, ಸೆ.9–ವಿರಾಜಪೇಟೆಯ ಐತಿಹಾಸಿಕ ಶ್ರೀ ಗೌರಿ–ಗಣೇಶೋತ್ಸವದ ಶೋಭಾಯಾತ್ರೆ ಮೆರವಣಿಗೆಯು ಭವ್ಯ ಮಂಟಪಗಳೊಂದಿಗೆ ಮಳೆಯ ನಡುವೆಯೂ ಅತ್ಯಂತ ವಿಜೃಂಭಣೆಯಿಂದ ನಡೆದು ಇಲ್ಲಿನ ಪವಿತ್ರ ಗೌರಿ ಕೆರೆಯಲ್ಲಿ ವಿಸರ್ಜನೆ ಮಾಡಲಾಯಿತು. ಗೌರಿ–ಗಣೇಶ ಹಬ್ಬದ ದಿನವಾದ ಆ.30,31ರಂದು ಪ್ರತಿಷ್ಠಾಪನೆಗೊಂಡಿದ್ದ ಗೌರಿ–ಗಣೇಶ ಮೂರ್ತಿಗಳನ್ನು ಇಂದು ವೈಭವಯುತವಾಗಿ ವಿದ್ಯುತ್ ದೀಪ ಮತ್ತು ಬಣ್ಣ–ಬಣ್ಣದ ಹೂಗಳಿಂದ ಅಲಂಕೃತಗೊಂಡಿದ್ದ 22 ಮಂಟಪಗಳಲ್ಲಿ ಕೂರಿಸಿ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಲಾಯಿತು. ಈ ವೈಭವದ ಮೆರವಣಿಗೆಯು ಸಾವಿರಾರು ಜನರನ್ನೂ ಆಕರ್ಷಿಸಿತು.





ನಗರದ ಗಣೇಶೋತ್ಸವದ 22 ಸಮಿತಿಗಳು 10 ದಿನಗಳ ಕಾಲ ಬೆಳಿಗ್ಗೆ ಮತ್ತು ರಾತ್ರಿ ವಿಶೇಷ ಪೂಜೆ ಸಲ್ಲಿಸಿ ಗುರುವಾರ ವಿಶೇಷ ಡಿಜೆ ಮತ್ತು ವಾದ್ಯಗೋಷ್ಠಿಯೊಂದಿಗೆ ಮಂಟಪಗಳು ಮೆರವಣಿಗೆಯಲ್ಲಿ ಸಾಗಿತು. ಈ ವೇಳೆ ಸಾರ್ವಜನಿಕರು ಮತ್ತು ಭಕ್ತಾದಿಗಳು ಮೈ ಮರೆತು ಕುಣಿದು ಕುಪ್ಪಳಿಸಿದರು.

ನಗರದ ಶ್ರೀ ಗಣಪತಿ ದೇವಸ್ಥಾನ ಗಡಿಯಾರ ಕಂಬದ ಬಳಿ, ಜೈನರ ಬೀದಿ ಶ್ರೀ ಬಸವೇಶ್ವರ ದೇವಸ್ಥಾನ, ವಿಘ್ನೇಶ್ವರ ಸೇವಾ ಸಮಿತಿ ಅರಸುನಗರ, ವಿನಾಯಕ ಯುವಕ ಭಕ್ತ ಮಂಡಳಿ ಅಂಗಾಳ ಪರಮೇಶ್ವರಿ ದೇವಸ್ಥಾನ, ವಿಜಯ ವಿನಾಯಕ ಉತ್ಸವ ಸಮಿತಿ ದಖ್ಖನಿ ಮೊಹಲ್ಲಾ, ಕಾವೇರಿ ಗಣೇಶ ಉತ್ಸವ ಸಮಿತಿ ಮೂರ್ನಾಡು ರಸ್ತೆ ನೇತಾಜಿ ಉತ್ಸವ ಸಮಿತಿ ನೆಹರು ನಗರ, ಗಣಪತಿ ಸೇವಾ ಸಂಘ ಗಣಪತಿ ಬೀದಿ, ವಿನಾಯಕ ಸೇವಾ ಸಮಿತಿ ಪಂಜರುಪೇಟೆ, ಜಲದರ್ಶಿನಿ ವಿನಾಯಕ ಸೇವಾ ಸಮಿತಿ ಆಂಜನೇಯ ದೇವಸ್ಥಾನ ಚಿಕ್ಕಪೇಟೆ, ವಿಘ್ನೇಶ್ವರ ಉತ್ಸವ ಸಮಿತಿ ಕುಕ್ಲೂರು, ಸರ್ವಸಿದ್ಧಿ ವಿನಾಯಕ ಉತ್ಸವ ಸಮಿತಿ ಸುಂಕದಕಟ್ಟೆ ಕಣ್ಮಣಿ ವಿನಾಯಕ ಉತ್ಸವ ಸೇವಾ ಸಮಿತಿ ಮಲೆತಿರಿಕೆ ಬೆಟ್ಟ, ಗಣಪತಿ ಸೇವಾ ಸಮಿತಿ ಗಾಂಧಿನಗರ, ದೊಡ್ಡಮ್ಮ ಚಿಕ್ಕಮ್ಮ ತಾಯಿ ವಿನಾಯಕ ಸೇವಾ ಸಮಿತಿ ಹಾಕೇರಿ, ವಿಘ್ನೇಶ್ವರ ಗಣಪತಿ ಸೇವಾ ಸಮಿತಿ ಕೆ.ಬೋಯಿಕೇರಿ, ವಿಶ್ವ ವಿನಾಯಕ ಗಣೇಶೋತ್ಸವ ಸಮಿತಿ ಮೀನುಪೇಟೆ, ಗೌರಿಕೆರೆ ಗಣಪತಿ ಸೇವಾ ಸಮಿತಿ ವಿರಾಜಪೇಟೆ, ವಿಘ್ನೇಶ್ವರ ಉತ್ಸವ ಸೇವಾ ಸಮಿತಿ ಪಟ್ಟಣ ಪಂಚಾಯಿತಿ, ವರದ ವಿನಾಯಕ ಸೇವಾ ಸಮಿತಿ ಅಯ್ಯಪ್ಪ ಬೆಟ್ಟ, ವಿನಾಯಕ ಯುವ ಸಮಿತಿ ಶಿವಕೇರಿ, ಶ್ರೀ ಬಾಲಂಜನೇಯ ವಿನಾಯಕ ಉತ್ಸವ ಸಮಿತಿ ಅಪ್ಪಯ್ಯಸ್ವಾಮಿ ರಸ್ತೆ, ಒಟ್ಟು 22 ವಿದ್ಯುತ್ ಅಲಂಕೃತ ಮಂಟಪಗಳು ಮೆರವಣಿಗೆಯಲ್ಲಿ ಭಾಗವಹಿಸಿದ್ದವು.

ಗೌರಿ–ಗಣೇಶ ವಿಸರ್ಜನೆಗಾಗಿ ಪುರಸಭೆಯಿಂದ ಪವಿತ್ರ ಗೌರಿಕೆರೆಯನ್ನು ಸ್ವಚ್ಛತೆಗೊಳಿಸಿ ದೀಪಾಲಂಕಾರ ಹಾಗೂ ತೆಪ್ಪದ ವ್ಯವಸ್ಥೆ ಮಾಡಲಾಗಿತ್ತು. ಗೌರಿ–ಗಣೇಶ ವಿಸರ್ಜನೋತ್ಸವ ಮತ್ತು ಮೆರವಣಿಗೆಯಲ್ಲಿ ಸಾವಿರಾರು ಜನರು ಭಾಗವಹಿಸಿದ್ದರಿಂದ ಪೊಲೀಸ್ ಇಲಾಖೆ ಬಿಗಿ ಬಂದೋಬಸ್ತ್ ಏರ್ಪಡಿಸಲಾಗಿತ್ತು. ಇದಕ್ಕಾಗಿ ಹಾಸನ, ಮೈಸೂರು, ಚಾಮರಾಜನಗರ, ಮಂಡ್ಯ ಮತ್ತು ಕೊಡಗು ಜಿಲ್ಲೆಯಿಂದ ಮೂವರು ಡಿವೈಎಸ್‌ಪಿ, 12 ಸರ್ಕಲ್ ಇನ್ಸ್‌ಪೆಕ್ಟರ್, 32 ಸಬ್ ಇನ್ಸ್‌ಪೆಕ್ಟರ್, 60 ಎಎಸ್ಐ, 406 ಪೊಲೀಸ್ ಸಿಬ್ಬಂದಿಗಳು, 3 ಕೆಎಸ್‌ಆರ್‌ಪಿ, 7 ಡಿಎಆರ್, 25 ಹೋಮ್ ಗಾರ್ಡ್, ಅಗ್ನಿಶಾಮಕದಳವನ್ನು ನಿಯೋಜಿಸಲಾಗಿತ್ತು.

ಜಿಲ್ಲಾಧಿಕಾರಿಗಳ ಆದೇಶದಂತೆ ವಾಹನ ಸಂಚಾರದ ಮಾರ್ಗವನ್ನು ಬದಲಾಯಿಸಲಾಗಿತ್ತು ಹಾಗೂ ಬುಧವಾರ ರಾತ್ರಿಯಿಂದ ಮದ್ಯ ಮಾರಾಟ ನಿಷೇಧ ಮಾಡಲಾಗಿತ್ತು. ಗೌರಿ ಗಣೇಶ ವಿಸರ್ಜನೆಗಾಗಿ ಉತ್ಸವ ಸಮಿತಿ ಸದಸ್ಯರು ಉತ್ಸಾಹದಿಂದ







ಮಳೆಯ ನಡುವೆಯು ಶ್ರಮವಹಿಸಿದ್ದು ಕಂಡು ಬಂತು. ಪುರಸಭೆಯಿಂದ ಸುಗಮ ಸಂಚಾರಕ್ಕೆ ರಸ್ತೆಯ ಗುಂಡಿಗಳನ್ನು ಮುಚ್ಚಿ ರಸ್ತೆ ಬದಿಯಲ್ಲಿ ಸ್ವಚ್ಛಗೊಳಿಸಲಾಗಿತ್ತು. ಸೆಸ್ಕಾಂ ಇಲಾಖೆಯಿಂದ ಮುಖ್ಯ ರಸ್ತೆಯಲ್ಲಿ ವಿದ್ಯುತ್ ತಂತಿಗಳ ಬಗ್ಗೆ ನಿಗವಹಿಸಿದ್ದರು. ಕೆಲವು ಸಮಿತಿಯವರು ಗೌರಿ–ಗಣೇಶ ವಿಸರ್ಜನೋತ್ಸವ ಅಂಗವಾಗಿ ಅನ್ನ ಸಂತರ್ಪಣೆಯನ್ನು ಏರ್ಪಡಿಸಿದ್ದರು.

ಕಿಂಡಿ ಅಣೆಕಟ್ಟೆಯಿಂದ ತೊಂದರೆ ಇಲ್ಲ

ಮಡಿಕೇರಿ, ಸೆ.9– ಗ್ರಾಮಸ್ಥರ ಕೋರಿಕೆಯಂತೆ ಕೊಯನಾಡಿನಲ್ಲಿ ಕಿಂಡಿ ಅಣೆಕಟ್ಟು ನಿರ್ಮಾಣಗೊಂಡಿದೆ. ಅತಿ ಮಳೆಯಾದ ಪರಿಣಾಮ ಪ್ರವಾಹ ಬಂದಿದೆಯೇ ಹೊರತು ಅಣೆಕಟ್ಟೆಯಿಂದ ಯಾವುದೇ ತೊಂದರೆಯಾಗಿಲ್ಲ ಎಂದು ಜಿಲ್ಲಾ ಬಿಜೆಪಿ ಮಾಧ್ಯಮ ವಕ್ತಾರ ಸುಬ್ರಮಣ್ಯ ಉಪಾಧ್ಯಾಯ ಸಮರ್ಥಿಸಿಕೊಂಡಿದ್ದಾರೆ.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜಕೀಯವಾಗಿ ನೆಲೆಯೂರುವುದಕ್ಕಾಗಿ ಕಾಂಗ್ರೆಸ್ ಮತ್ತು ಎಸ್‌ಡಿಪಿಐ ಕಿಂಡಿ ಅಣೆಕಟ್ಟೆಯ ವಿಚಾರದಲ್ಲಿ ಗ್ರಾಮಸ್ಥರಲ್ಲಿ ಕೆಟ್ಟ ಅಭಿಪ್ರಾಯ ಮೂಡಿಸುತ್ತಿವೆ ಎಂದು ಆರೋಪಿಸಿದರು. ಶಾಸಕ ಕೆ.ಜಿ.ಬೋಪಯ್ಯ ಅವರ ಪ್ರಯತ್ನದ ಫಲವಾಗಿ ನಡೆಯುತ್ತಿರುವ ಅಭಿವೃದ್ಧಿ ಕಾರ್ಯಗಳನ್ನು ಸಹಿಸದ ವಿರೋಧ ಪಕ್ಷಗಳು ಕೀಳು ಮಟ್ಟದ ರಾಜಕೀಯ ಮಾಡುತ್ತಿವೆ. ಶಾಸಕರ ವಿರುದ್ಧ ಅವಹೇಳನ ಮಾಡುವ ಪ್ರಯತ್ನ ನಡೆದಿದ್ದು, ಇದನ್ನು ಪಕ್ಷ ಖಂಡಿಸುತ್ತದೆ. ಇದು ಮುಂದುವರೆದರೆ ಕಾನೂನು ಕ್ರಮಕ್ಕೆ ಮುಂದಾಗಬೇಕಾಗುತ್ತದೆ ಎಂದು ಅವರು ಎಚ್ಚರಿಕೆ ನೀಡಿದರು.

ಶಾಸಕರ ಆಸಕ್ತಿಯಿಂದ ಜಿಲ್ಲೆಯ 10 ಕಡೆ ಕಿಂಡಿ ಅಣೆಕಟ್ಟೆಗಳನ್ನು ನಿರ್ಮಿಸಲಾಗುತ್ತಿದ್ದು, ಇದರಿಂದ ಗ್ರಾಮಸ್ಥರಿಗೆ ಅನುಕೂಲವಾಗಲಿದೆ. ಕೊಯನಾಡಿನಲ್ಲಿ ನಿರ್ಮಾಣಗೊಂಡ ಕಿಂಡಿ ಅಣೆಕಟ್ಟೆಯಿಂದ ಸುಮಾರು 60 ಕುಟುಂಬಗಳಿಗೆ ರಸ್ತೆ ಸಂಪರ್ಕ ದೊರೆತ್ತಿದೆ. ಅಲ್ಲದೆ ಅಂತರ್ಜಲ ಮಟ್ಟವೂ ಏರಿಕೆಯಾಗಿದೆ. ಪ್ರವಾಹದಿಂದ ತೊಂದರೆಗೀಡಾದ ಕುಟುಂಬಗಳಿಗೆ ಸರ್ಕಾರ ಪರಿಹಾರ ನೀಡಲಿದೆ. ಸುರಕ್ಷಿತ ಸ್ಥಳಕ್ಕೆ ತೆರಳುವವರಿಗೆ ಈಗಾಗಲೇ 50 ಸೆಂಟ್ ಜಾಗವನ್ನು ಗುರುತಿಸಲಾಗಿದ್ದು, ಇಲ್ಲಿ ನೀಡಲಾಗುವ ನಿವೇಶನವನ್ನು ಪಡೆಯಬಹುದು ಎಂದು ಅವರು ಇದೇ ವೇಳೆ ತಿಳಿಸಿದರು.

ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್‌ಗೆ 12.87 ಕೋಟಿ ರೂ. ಲಾಭ

ಸಾಲ ನೀಡಿಕೆಯಲ್ಲಿ 2ನೇ ಸ್ಥಾನ, ಠೇವಣಿ ಸಂಗ್ರಹಣೆಯಲ್ಲಿ 3ನೇ ಸ್ಥಾನ

ಮಡಿಕೇರಿ, ಸೆ.9–ಕೊಡಗು ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ಕಳೆದ ಆರ್ಥಿಕ ವರ್ಷದಲ್ಲಿ(ಮಾರ್ಚ್ ಅಂತ್ಯಕ್ಕೆ) 12.87 ಕೋಟಿ ರೂ.ಗಳ ಲಾಭ ಗಳಿಸಿದ್ದು, ಬ್ಯಾಂಕ್ ಪ್ರಾರಂಭವಾದಾಗಿನಿಂದ ಇದೇ ಮೊದಲ ಬಾರಿಗೆ ಇಷ್ಟು ದೊಡ್ಡ ಮೊತ್ತದ ಲಾಭ ಗಳಿಸಿದೆ ಎಂದು ಬ್ಯಾಂಕಿನ ಅಧ್ಯಕ್ಷ ಕೊಡಂದೇರ ಪಿ.ಗಣಪತಿ ತಿಳಿಸಿದ್ದಾರೆ.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 1921ರಲ್ಲಿ 4 ಸಾವಿರ ರೂ. ಪಾಲು ಬಂಡವಾಳ, 10 ಸಾವಿರ ರೂ. ಠೇವಣಿ, 48 ಸಹಕಾರ ಸಂಘಗಳು ಮತ್ತು 16 ಬಿಡಿ ಸದಸ್ಯರಿಂದ ಸ್ಥಾಪನೆಗೊಂಡ ಬ್ಯಾಂಕ್ ಇದೀಗ 101ನೇ ವರ್ಷದ ವಿಕಾಸದ ಹಾದಿಯಲ್ಲಿ ಮುನ್ನಡೆಯುತ್ತಿದ್ದು, ರಾಜ್ಯದಲ್ಲಿರುವ ಜಿಲ್ಲಾ ಸಹಕಾರ ಬ್ಯಾಂಕುಗಳ ಪೈಕಿ ಪ್ರಮುಖ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕು ಎಂದು ಗುರುತಿಸಲ್ಪಟ್ಟಿದೆ ಎಂದು ಹೆಮ್ಮೆ ವ್ಯಕ್ತಪಡಿಸಿದರು. ಜಿಲ್ಲೆಯ ವಿವಿಧ 23 ಬ್ಯಾಂಕುಗಳ ಪೈಕಿ ಠೇವಣಾತಿ ಸಂಗ್ರಹಣೆಯಲ್ಲಿ 3ನೇ ಸ್ಥಾನ ಹಾಗೂ ಸಾಲ ನೀಡುವಿಕೆಯಲ್ಲಿ 2ನೇ ಸ್ಥಾನ ಹೊಂದಿದ್ದು, 3ನೇ ಅತೀ ಹೆಚ್ಚು ಮಾರ್ಕೆಟ್ ಷೇರನ್ನು ಹೊಂದಿರುವ ಬ್ಯಾಂಕು ಇದಾಗಿದೆ ಎಂದರು.

ಬ್ಯಾಂಕಿನ ಮೂಲ ಉದ್ದೇಶ ಜಿಲ್ಲೆಯ ರೈತರಿಗೆ ಕೃಷಿ ನಿರ್ವಹಣೆಗಾಗಿ ಅವಶ್ಯವಿರುವ ಅಲ್ಪಾವಧಿ, ಮಧ್ಯಮಾವಧಿ ಮತ್ತು ದೀರ್ಘಾವಧಿ ಸಾಲಗಳನ್ನು ಬ್ಯಾಂಕಿನಿಂದ ನೇರವಾಗಿ ಹಾಗೂ ಜಿಲ್ಲೆಯ 73 ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಮುಖಾಂತರ ನೀಡುತ್ತಿರುವುದಲ್ಲದೆ, ಬ್ಯಾಂಕಿನಿಂದ ನೇರವಾಗಿ ಕೃಷಿ ಹಾಗೂ ಕೃಷಿಯೇತರ ವಿವಿಧ ಉದ್ದೇಶಿತ ಸಾಲಗಳನ್ನು ಜಿಲ್ಲೆಯ ರೈತರ ಮತ್ತು ಗ್ರಾಹಕರ ಅಗತ್ಯಕ್ಕೆ ತಕ್ಕಂತೆ ಸಾಲ ಸೌಲಭ್ಯಗಳನ್ನು ವಾಣಿಜ್ಯ ಮತ್ತು ಖಾಸಗಿ ಬ್ಯಾಂಕುಗಳಿಗೆ ನೀಡಲಾಗಿದೆ ಎಂದು ಮಾಹಿತಿ ನೀಡಿದರು.

2022ರ ಅಂತ್ಯಕ್ಕೆ ಷೇರು ಬಂಡವಾಳ, ಶಾಸನಬದ್ಧ ಮೀಸಲು ನಿಧಿಗಳು ಹಾಗೂ ಬಟವಾಡೆಯಾಗದ ಲಾಭಾಂಶದ ಮೊತ್ತವನ್ನು ಒಳಗೊಂಡಂತೆ ಒಟ್ಟು 108.64 ಕೋಟಿ ರೂ. ಮೊತ್ತದ ಸ್ವಂತ ಬಂಡವಾಳವನ್ನು ಹೊಂದಿದ್ದು, ಕಳೆದ ಸಾಲಿಗೆ ಹೋಲಿಸಿದಲ್ಲಿ 8.68 ಕೋಟಿ ರೂ.ಗಳಷ್ಟು ಹೆಚ್ಚಳವಾಗಿದೆ ಎಂದು ಗಣಪತಿ ನುಡಿದರು.

ಸಂಪನ್ಮೂಲದ ನೆಲೆಯಾದ ಠೇವಣಾತಿಗಳನ್ನು ಬ್ಯಾಂಕು ಹಲವು ವಿಧದ ವಿಶೇಷ ಠೇವಣಿ ಯೋಜನೆಗಳ ಮುಖಾಂತರ ಕ್ರೋಢಿಕರಿಸಿದ್ದು, 2022ರ ಅಂತ್ಯಕ್ಕೆ 1271.43 ಕೋಟಿ ರೂ. ಠೇವಣಿ ಸಂಗ್ರಹಿಸಲಾಗಿದ್ದು, ಕಳೆದ ಸಾಲಿಗೆ ಹೋಲಿಸಿದಲ್ಲಿ ಕೋವಿಡ್ ದುಷ್ಪರಿಣಾಮ ಮುಂದುವರೆದಿದ್ದರೂ 189.67 ಕೋಟಿ ರೂ. ಹೆಚ್ಚುವರಿ ಠೇವಣಿ ಸಂಗ್ರಹಿಸಲಾಗಿ, ಶೇ.17.54 ಪ್ರಗತಿ ಸಾಧಿಸಲಾಗಿದ್ದು, 2022–23ನೇ ಸಾಲಿಗೆ 1430.00 ಕೋಟಿ ರೂ. ಠೇವಣಾತಿ ಸಂಗ್ರಹಣೆಯ ಗುರಿ ಹೊಂದಿದೆ ಎಂದರು.

ಸಾಲ ವಿತರಣೆ: ಬ್ಯಾಂಕು ಕೃಷಿ ಅಭಿವೃದ್ಧಿಗೆ ಹೆಚ್ಚಿನ ಪ್ರಾಶಸ್ತ್ಯ ನೀಡುತ್ತಾ ಬಂದಿದ್ದು, ಕೃಷಿಕರಿಗೆ ಅನುಕೂಲವಾಗುವಂತೆ ಸಾಲ ಯೋಜನೆಗಳ ಜೊತೆ ಜೊತೆಗೆ ಕೃಷಿಯೇತರ ಉದ್ದೇಶಿತ ಸಾಲ ಪಡೆಯುವ ಗ್ರಾಹಕರ ಅಗತ್ಯತೆಗೆ ತಕ್ಕಂತೆಯೂ ವಿವಿಧ ಸಾಲ ಯೋಜನೆಗಳನ್ನು ರೂಪಿಸಿಕೊಂಡಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಬ್ಯಾಂಕಿನ ಉಪಾಧ್ಯಕ್ಷ ಕೆಟೋಳಿರ ಹರೀಶ್ ಪೂವಯ್ಯ, ನಿರ್ದೇಶಕರಾದ ಕನ್ನಂಡ ಸಂಪತ್, ಕೆಮ್ಮಡಿರ ಜಗದೀಶ್, ಪ್ರಧಾನ ವ್ಯವಸ್ಥಾಪಕರಾದ ಎ.ಎಸ್.ಪಾರ್ವತಿ ಉಪಸ್ಥಿತರಿದ್ದರು.

ಕೋಟೆ ಕಾಮಗಾರಿ ವೀಕ್ಷಿಸಿದ ಶಾಸಕರು

ಮಡಿಕೇರಿ, ಸೆ.9– ನಗರದ ಕೋಟೆಯಲ್ಲಿ ನಡೆಯುತ್ತಿರುವ ಕಾಮಗಾರಿಯನ್ನು ಶಾಸಕ ಎಂ.ಪಿ.ಅಪ್ಪಚ್ಚುರಂಜನ್ ವೀಕ್ಷಿಸಿ, ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸಬೇಕು ಎಂದರು.

ಮಳೆ, ಪ್ರವಾಹ ಹಾನಿ ಸಮೀಕ್ಷೆ ಪ್ರಕ್ರಿಯೆ ಪರಿಶೀಲನೆ



ಚಾಮರಾಜನಗರ, ಸೆ.9–ಜಿಲ್ಲೆಯಲ್ಲಿ ಪ್ರಕೃತಿ ವಿಕೋಪದಿಂದ ಸಂಭವಿಸಿರುವ ಹಾನಿ ಸಂಬಂಧ ಸಮೀಕ್ಷೆ ಪ್ರಕ್ರಿಯೆ ಹಾಗೂ ಪರಿಹಾರ ವಿತರಣಾ ಕ್ರಮಗಳ ಬಗ್ಗೆ ಜಿಲ್ಲಾಧಿಕಾರಿ ಚಾರುಲತಾ ಸೋಮಲ್ ಪರಿಶೀಲನೆ ನಡೆಸಿದರು.

ತಮ್ಮ ಕಚೇರಿ ಸಭಾಂಗಣದಲ್ಲಿಂದು ಅಧಿಕಾರಿಗಳೊಂದಿಗೆ ಖುದ್ದು ಹಾಗೂ ಗೂಗಲ್ ಮೀಟ್ ಮೂಲಕ ಸಭೆ ನಡೆಸಿದ ಜಿಲ್ಲಾಧಿಕಾರಿ, ಮಳೆ, ಪ್ರವಾಹ ಸಂಬಂಧಿ ಜಿಲ್ಲೆಯಲ್ಲಿ ಆಗಿರುವ ಹಾನಿ ಕುರಿತು ನಡೆಯುತ್ತಿರುವ ಸಮೀಕ್ಷೆಯ ವಿವರ ಪಡೆದರಲ್ಲದೆ, ಮನೆಗೆ ನೀರು ನುಗ್ಗಿರುವ ಪ್ರಕರಣಗಳಲ್ಲಿ ಬಾಕಿ ಇರುವ ಎಲ್ಲರಿಗೂ ಕೂಡಲೇ ಪರಿಹಾರ ನೀಡಬೇಕು. ಹಾನಿಗೊಳಗಾಗಿರುವ ಮನೆಗಳ ಪರಿಶೀಲನೆ ಸಮೀಕ್ಷೆಯ ತಾಂತ್ರಿಕ ತಂಡದ ವರದಿ ಪಡೆದು ಪರಿಹಾರ ವಿತರಿಸಲು ಕ್ರಮ ವಹಿಸಿ ಎಂದು ಸೂಚಿಸಿದರು.

ಕೃಷಿ, ತೋಟಗಾರಿಕೆ ಇತರೆ ಬೆಳೆ ನಷ್ಟ ಸಮೀಕ್ಷೆ ಕಾರ್ಯ ಚುರುಕಾಗಬೇಕು. ಆಯಾಯ ಭಾಗದ ಕಂದಾಯ, ಕೃಷಿ, ತೋಟಗಾರಿಕೆ, ಇನ್ನಿತರ ತಾಂತ್ರಿಕ ಇಲಾಖೆ ಅಧಿಕಾರಿಗಳು ಮುತುವರ್ಜಿ ವಹಿಸಿ ಪರಿಹಾರಕ್ಕಾಗಿ ಸಂಗ್ರಹಿಸಿರುವ ಅಂಕಿ ಅಂಶಗಳನ್ನು ದಾಖಲಿಸಿಕೊಂಡು ಪರಿಹಾರ ತಲುಪಿಸುವಂತೆ ಜಿಲ್ಲಾಧಿಕಾರಿ ಕಟ್ಟುನಿಟ್ಟಿನ ನಿರ್ದೇಶನ ನೀಡಿದರಲ್ಲದೆ, ಹಿರಿಯ ಅಧಿಕಾರಿಗಳು ತಾಲೂಕುವಾರು ನಡೆಯುತ್ತಿರುವ ಸಮೀಕ್ಷೆ, ಇನ್ನಿತರೆ ಪರಿಹಾರ ಸಂಬಂಧಿ ಕಾರ್ಯಗಳ ಉಸ್ತುವಾರಿ ಮಾಡಿ ತಕ್ಷಣವೇ ಕ್ರಮ ವಹಿಸಬೇಕು ಎಂದು ತಿಳಿಸಿದರು.

ಜಿಪಂ ಸಿಇಓ ಕೆಎಂ.ಗಾಯತ್ರಿ ಮಾತನಾಡಿದರು. ಎಡಿಸಿ ಎಸ್.ಕಾತ್ಯಾಯಿನಿದೇವಿ, ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗದ ಇಇ ಇಬ್ರಾಹಿಂ, ಲೋಕೋಪಯೋಗಿ ಇಲಾಖೆ ಎಇಇ ಆರ್.ಸಿ.ಕೆಂಪರಾಜು, ಜಂಟಿ ಕೃಷಿ ನಿರ್ದೇಶಕ ಮಧುಸೂದನ್, ತೋಟಗಾರಿಕೆ ಇಲಾಖೆ ಉಪನಿರ್ದೇಶಕ ಶಿವಪ್ರಸಾದ್, ಗ್ರಾಮೀಣ ನೀರು ಮತ್ತು ನೈರ್ಮಲ್ಯ ಇಲಾಖೆ ಇಇ ಗಂಗಾಧರಯ್ಯ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಉಪನಿರ್ದೇಶಕಿ ಗೀತಾಲಕ್ಷ್ಮಿ, ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕ ಮಂಜುನಾಥ್ ಸಭೆಯಲ್ಲಿದ್ದರು.

ಗುಂಡ್ಲುಪೇಟೆ ವ್ಯಾಪ್ತಿಯಲ್ಲಿ ಡಿಸಿ, ಸಿಇಓ ಸಂಚಾರ

ಚಾಮರಾಜನಗರ: ಜಿಲ್ಲಾಧಿಕಾರಿ ಚಾರುಲತಾ ಸೋಮಲ್, ಜಿಪಂ ಸಿಇಓ ಕೆ.ಎಂ. ಗಾಯತ್ರಿ ಅವರು ಗುಂಡ್ಲುಪೇಟೆ ವಿವಿಧ ಭಾಗಗಳಿಗೆ ಭೇಟಿ ನೀಡಿ, ಮಳೆಹಾನಿ ಪರಿಶೀಲಿಸಿದರು.

ಗುಂಡ್ಲುಪೇಟೆ ತಾಲೂಕಿನ ಬೇಗೂರು ಗೋಬಳಿಯ ತಗಲೂರು ಗ್ರಾಮಕ್ಕೆ ಭೇಟಿ ತೆರಳಿ ಸಿಡಿಲು ಬಡಿದು ಹಾನಿಯಾಗಿರುವ ಮಹದೇವಮ್ಮ ಅವರ ಮನೆ ವೀಕ್ಷಿಸಿ, ಮಾಹಿತಿ ಪಡೆದರು. ಬಳಿಕ ಕೋಟೆಕೆರೆ, ಬೆಳಚಲವಾಡಿ ಕೆರೆ ತುಂಬಿ ಕೋಡಿ ಬಿದ್ದು ಜಲಾವೃತವಾಗಿರುವ ಪ್ರದೇಶಗಳನ್ನು ಪರಿಶೀಲಿಸಿದರು.

ಬೇಗೂರಿನ ಸಮಾಜ ಕಲ್ಯಾಣ ಇಲಾಖೆ ಹಾಸ್ಟೆಲ್, ಕೆಪಿಟಿಸಿಎಲ್ ಪವರ್ ಸ್ಟೇಷನ್ ವೀಕ್ಷಿಸಿದರು. ಕೋಟೆಕೆರೆ ಗ್ರಾಮದಲ್ಲಿ ಹತ್ತಿ ಬೆಳೆ, ಎಲೆಕೋಸು, ಅರಿಶಿನ ಬೆಳೆ ಹಾನಿ ಪರಿಶೀಲಿಸಿದರು. ಬೇಗೂರಿನಿಂದ ಕುರುಬರಹುಂಡಿ ರಸ್ತೆ ಗುಂಡಿ ಬಿದ್ದಿರುವ ಬಗ್ಗೆ ವೀಕ್ಷಿಸಿ ಕೂಡಲೇ ದುರಸ್ತಿಗೆ ಅಧಿಕಾರಿಗಳಿಗೆ ಸೂಚಿಸಿದರು. ತಹಶೀಲ್ದಾರ್ ರವಿಶಂಕರ್, ತಾಪಂ ಇಓ ಶ್ರೀಕಂಠರಾಜೇಅರಸ್ ಸೇರಿದಂತೆ ಇತರ ಇಲಾಖೆ ಅಧಿಕಾರಿಗಳಿದ್ದರು.

ಕೇಂದ್ರ, ರಾಜ್ಯ ಸರ್ಕಾರಗಳು ಪರಿಹಾರ ಧನ ಹೆಚ್ಚಿಸಬೇಕು

ಲೊಕ್ಕನಹಳ್ಳಿ ವ್ಯಾಪ್ತಿಯಲ್ಲಿ ಶಾಸಕ ಆರ್.ನರೇಂದ್ರ ಮಳೆ ಹಾನಿ ಪರಿಶೀಲನೆ



ಹನೂರು,ಸೆ.9–ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಮಾರ್ಗಸೂಚಿಯಲ್ಲಿ ಬೆಳೆಗಳ ನಷ್ಟಕ್ಕೆ ನೀಡಲಾಗುವ ಪರಿಹಾರ ಧನ ಅತ್ಯಂತ ಕಡಿಮೆ ಇರುವುದರಿಂದ ರಾಜ್ಯ ಸರ್ಕಾರ ಹೆಚ್ಚಿನ ಪರಿಹಾರ ನೀಡಬೇಕು ಎಂದು ಶಾಸಕ ಆರ್.ನರೇಂದ್ರ ಆಗ್ರಹಿಸಿದರು.

ಭಾರೀ ಮಳೆ ಹಿನ್ನೆಲೆಯಲ್ಲಿ ತಾಲೂಕಿನ ಲೊಕ್ಕನಹಳ್ಳಿ ಹೋಬಳಿ ವ್ಯಾಪ್ತಿಯ ವಿವಿಧ ಗ್ರಾಮಗಳಿಗೆ ಭೇಟಿ ನೀಡಿ, ಕೃಷಿ, ತೋಟಗಾರಿಕೆ ಬೆಳೆಗಳು, ವಾಸದ ಮನೆಗಳ ಹಾನಿ, ರಸ್ತೆ ಸೇತುವೆ ಹಾನಿ ವೀಕ್ಷಿಸಿ ಮಾತನಾಡಿದರು.

ಸರ್ಕಾರ ನೀಡುವ ಪರಿಹಾರ ಧನ ರೈತರ ಬಿತ್ತನೆ ಬೀಜ ಖರೀದಿ ಮಾಡಿರುವ ವೆಚ್ಚಕ್ಕೂ ಸರಿದೂಗದು. ಸರ್ಕಾರಗಳು ಪರಿಷ್ಕೃತ ನೂತನ ದರ ನೀಡಬೇಕು. ಲೊಕ್ಕನಹಳ್ಳಿ ಹೋಬಳಿ ಒಂದರಲ್ಲೇ 3 ರಿಂದ 4 ಕೋಟಿ ತೋಟಗಾರಿಕೆ ಬೆಳೆ ನಷ್ಟವುಂಟಾಗಿದೆ. ಆಲೂಗೆಡ್ಡೆ, ಬೆಳ್ಳುಳ್ಳಿ ಸಾಕಷ್ಟು ಹಾನಿಗೀಡಾಗಿವೆ ಎಂದರು.

ಶಾಸಕರು ಮಳೆಹಾನಿ ಪ್ರವಾಸ ನಿಮಿತ್ತ ಮೊದಲಿಗೆ ಜಡೆತಡೆ ಹಳ್ಳ ಸೇತುವೆ ವೀಕ್ಷಿಸಿ, ಗಿಡಗಂಟಿ ತೆರವುಗೊಳಿಸುವಂತೆ ಸಹಾಯಕ ಇಂಜಿನಿಯರ್ ಚಿನ್ನಣ್ಣರಿಗೆ ಸೂಚಿಸಿದರು. ಕುಡುವಾಳೆದೊಡ್ಡಿ ಹಳ್ಳ ವೀಕ್ಷಣೆ ಮಾಡಿ, ಮುರಿದು ಬಿದ್ದಿರುವ ಭಾರೀ ಗಾತ್ರದ ಮರ ತೆರವುಗೊಳಿಸುವಂತೆ ತಿಳಿಸಿದರು.

ಬಳಿಕ ಪಿ.ಜಿ.ಪಾಳ್ಯ ಗ್ರಾಮದ ರೈತರಾದ ಲೂರ್ದಮ್ಮ ಚಿನ್ನಪ್ಪ ಜಮೀನಿನಲ್ಲಿ ಬೆಳ್ಳುಳ್ಳಿ ಬೆಳೆಹಾನಿ ಪರಿಶೀಲಿಸಿ, ವಿ.ಎಸ್.ದೊಡ್ಡಿ ಗ್ರಾಮದಲ್ಲಿ ಮನೆ ಹಾನಿ ವೀಕ್ಷಿಸಿ, ಅದೇ ಗ್ರಾಮದಲ್ಲಿ ಮಲ್ಲಿಕಾರ್ಜುನ, ಹರೀಶ್, ಹನುಮಂತ ಶೆಟ್ಟಿ ಜಮೀನಿನಲ್ಲಿ ನಷ್ಟಕ್ಕೀಡಾದ ಬೆಳ್ಳುಳ್ಳಿ ಬೆಳೆ ನಷ್ಟ ಅವಲೋಕಿಸಿದರು.

ಒಡೆಯರಪಾಳ್ಯ ಗ್ರಾಮದಲ್ಲಿ ರೈತರಿಂದ ಬೆಳೆ ಹಾನಿ ಅರ್ಜಿ ಪಡೆದು ಶಾಸಕರು, ಭಾರೀ ಅವಾಂತರ ಸೃಷ್ಟಿಸುವ ಲೊಕ್ಕನಹಳ್ಳಿ–ಒಡೆಯರಪಾಳ್ಯ ಮಾರ್ಗದ ಉಡುತೊರೆ ಹಾಗೂ ಮಸ್ಕಿತಿಹಳ್ಳ ಸೇತುವೆ ಪರಿಶೀಲಿಸಿ, ಟೆಂಡರ್ ಹಂತದಲ್ಲಿರುವ ಈ ಸೇತುವೆಯ ಕಾಮಗಾರಿಯನ್ನು ಶೀಘ್ರದಲ್ಲಿ ಮೇಲ್ದರ್ಜೆಗೇರಿಸುವ ಸಂಬಂಧ ಸುದೀರ್ಘವಾಗಿ ಅಧಿಕಾರಿಗಳೊಡನೆ ಚರ್ಚಿಸಿದರು.

ಬಿ.ಜಿ.ದೊಡ್ಡಿ ಗ್ರಾಮಕ್ಕೆ ಭೇಟಿ ನೀಡಿದ ವೇಳೆ ಅಂಗನವಾಡಿ ಕೇಂದ್ರಕ್ಕೆ ದಿಢೀರ್ ಭೇಟಿ ನೀಡಿದ ಶಾಸಕರು, ಅಂಗನವಾಡಿ ಕೇಂದ್ರದಲ್ಲಿ ಪಡಿತರ ಪರಿಶೀಲಿಸಿ, ಸಿಡಿಪಿಓ ನಾಗೇಶ್ ಅವರಿಗೆ ದೂರವಾಣಿ ಕರೆ ಮಾಡಿ ಗುಣಮಟ್ಟದ ಪಡಿತರ ಪೂರೈಸುವಂತೆ ವಂತೆ ಸೂಚಿಸಿದರು. ಈ ಸಂದರ್ಭದಲ್ಲಿ ತಹಸೀಲ್ದಾರ್ ಆನಂದಯ್ಯ, ಎಇಇ ರಾಜೇಶ್ ಮುನ್ಸಿ, ಎಇ ಸುರೇಂದ್ರ ಕುಮಾರ್, ಚಿನ್ನಣ್ಣ, ತೋಟಗಾರಿಕೆ ಸಹಾಯಕ ನಿರ್ದೇಶಕ ಭಾಸ್ಕರ್, ಕೃಷಿ ಇಲಾಖೆಯ ಸಹಾಯಕ ನಿರ್ದೇಶಕಿ ಸುಂದರಮ್ಮ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು, ಆಯಾ ಗ್ರಾಮಗಳ ರೈತರು, ಮುಖಂಡರಿದ್ದರು.

ಕರ್ತವ್ಯ ಲೋಪ, ನಿಯಮ ಉಲ್ಲಂಘಿಸಿ ವಿಶೇಷ ಭತ್ಯೆ ಪಡೆದ ಆರೋಪ

ಕೊಳ್ಳೇಗಾಲ ಸರ್ಕಾರಿ ಉಪವಿಭಾಗ ಆಸ್ಪತ್ರೆ ವೈದ್ಯಾಧಿಕಾರಿ ವಿರುದ್ಧ ಮುಖ್ಯಮಂತ್ರಿಗೆ ದೂರು

ಕೊಳ್ಳೇಗಾಲ, ಸೆ.9– ಕರ್ತವ್ಯ ಲೋಪ ಹಾಗೂ ತಜ್ಞ ವೈದ್ಯರಲ್ಲದಿದ್ದರೂ ವಿಶೇಷ ಭತ್ಯೆ ಪಡೆಯುತ್ತಿರುವ ಆರೋಪದ ಹಿನ್ನೆಲೆಯಲ್ಲಿ ವ್ಯಕ್ತಿಯೊಬ್ಬರು ಮುಖ್ಯಮಂತ್ರಿಗಳಿಗೆ ಲಿಖಿತ ದೂರು ಸಲ್ಲಿಸಿದ್ದು, ಈ ಹಿನ್ನೆಲೆ ಮುಖ್ಯಮಂತ್ರಿಗಳ ಅಧೀನ ಕಾರ್ಯದರ್ಶಿ ಸೂಕ್ತ ಕ್ರಮಕ್ಕೆ ಚಾ.ನಗರ ಜಿಲ್ಲಾ ಆರೋಗ್ಯಾಧಿಕಾರಿಗಳಿಗೆ ನಿರ್ದೇಶನ ನೀಡಿದ್ದಾರೆ.

ಕೊಳ್ಳೇಗಾಲ ಉಪವಿಭಾಗ ಸಾರ್ವಜನಿಕ ಆಸ್ಪತ್ರೆ ವೈದ್ಯ ಡಾ.ರವಿಶಂಕರ್ ಅವರ ವಿರುದ್ಧ ರಮೇಶ್ ಎಂಬುವವರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ದೂರು ನೀಡಿದ್ದಾರೆ.

ವೈದ್ಯ ರವಿಶಂಕರ್ ಅವರು ತಡವಾಗಿ ಕರ್ತವ್ಯಕ್ಕೆ ಬಂದು, ಬೇಗ ತೆರಳುತ್ತಾರೆ. ಅಲ್ಲದೆ ಖಾಸಗಿ ಕ್ಲಿನಿಕ್‌ಗಳು ಹಾಗೂ ರಾತ್ರಿ ಪಾಳಿಯಲ್ಲಿ ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲೂ ಸೇವೆ ಸಲ್ಲಿಸುತ್ತಿದ್ದಾರೆ. ರೋಗಿಗಳನ್ನು ಖಾಸಗಿ ಸ್ಕ್ಯಾನಿಂಗ್ ಸೆಂಟರ್ ಕಳುಹಿಸುತ್ತಾರೆ. ಅಲ್ಲದೆ ತಜ್ಞ ವೈದ್ಯ ಅಲ್ಲದಿದ್ದರೂ ನಿಯಮ ಉಲ್ಲಂಘಿಸಿ ವಿಶೇಷ ಭತ್ಯೆ ಮಂಜೂರು ಮಾಡಿಸಿಕೊಂಡು ಸರ್ಕಾರಕ್ಕೆ ಆರ್ಥಿಕ ನಷ್ಟವನ್ನುಂಟು ಮಾಡುತ್ತಿದ್ದಾರೆ. ಆರೋಗ್ಯ ಇಲಾಖೆ ನಿಯಮ ಉಲ್ಲಂಘಿಸಿ 73,500 ರೂ. ಪಡೆಯುತ್ತಿದ್ದು, ಚನ್ನರಾಯಪಟ್ಟಣದಲ್ಲಿರುವ ಅವರ ಬ್ಯಾಂಕ್ ಖಾತೆಗೆ ಜೂನ್ ತಿಂಗಳಲ್ಲಿ ಸರ್ಕಾರದಿಂದ ವಿಶೇಷ ಭತ್ಯೆ ಹಣ ಜಮಾ ಆಗಿದೆ. ಆರೋಗ್ಯ ಇಲಾಖೆ ಯಾವ ನಿಯಮದಡಿ ಭತ್ಯೆ ಮಂಜೂರು ಮಾಡಿದೆ ಎಂಬ ಸಂಶಯ ಮೂಡಿದೆ. ರವಿಶಂಕರ್ ಅವರು ಕರ್ತವ್ಯ ಲೋಪ ಎಸಗಿದ್ದು, ನಿಯಮ ಉಲ್ಲಂಘಿಸಿ ಸರ್ಕಾರದ ಅನುದಾನ ದುರ್ಬಳಕೆ ಮಾಡಿಕೊಂಡಿದ್ದಾರೆ. ಕೂಡಲೇ ತನಿಖೆ ನಡೆಸಿ ಅವರನ್ನು ಕರ್ತವ್ಯದಿಂದ ಅಮಾನತುಗೊಳಿಸುವಂತೆ ಸಂಬಂಧಪಟ್ಟವರಿಗೆ ಆದೇಶಿಸಲು ಮುಖ್ಯಮಂತ್ರಿಗಳಿಗೆ ಸಲ್ಲಿಸಿರುವ ಲಿಖಿತ ದೂರಿನಲ್ಲಿ ರಮೇಶ್ ಮನವಿ ಮಾಡಿದ್ದಾರೆ.

ರಮೇಶ್ ಅವರ ದೂರಿನ ಹಿನ್ನೆಲೆ ಮುಖ್ಯಮಂತ್ರಿಗಳ ಅಧೀನ ಕಾರ್ಯದರ್ಶಿ ಉಮಾದೇವಿ ಅವರು, ಈ ಸಂಬಂಧ ಸೂಕ್ತ ಕ್ರಮಕ್ಕೆ ಚಾ.ನಗರ ಜಿಲ್ಲಾ ಆರೋಗ್ಯಾಧಿಕಾರಿಗಳಿಗೆ ನಿರ್ದೇಶನ ನೀಡಿದ್ದಾರೆ.

ಪರಿಶೀಲನೆ ನಡೆಸಿ ಕ್ರಮ: ಡಾ. ರವಿಶಂಕರ್ ಅವರ ಆಸ್ಪತ್ರೆಗೆ ತಡವಾಗಿ ಬರುತ್ತಾರೆ, ಬಡ ರೋಗಿಗಳನ್ನು ಸಣ್ಣ, ಪುಟ್ಟ ಸಮಸ್ಯೆಗೂ ಖಾಸಗಿ ಸ್ಕ್ಯಾನಿಂಗ್ ಸೆಂಟರ್ ಕಳುಹಿಸುತ್ತಾರೆ ಎಂಬ ಸಾರ್ವಜನಿಕ ದೂರಿನ ಹಿನ್ನೆಲೆ ಈಗಾಗಲೇ ವೈದ್ಯರಿಗೆ ನೋಟಿಸ್ ಜಾರಿ ಮಾಡಲಾಗಿದೆ. ಈ ಬಗ್ಗೆ ನನಗೆ ಸಂಪೂರ್ಣ ವಿಚಾರ ತಿಳಿದಿಲ್ಲ, ಈ ಸಂಬಂಧ ನನಗೆ ದೂರು ಸಲ್ಲಿಕೆ ಯಾದರೆ ಪರಿಶೀಲಿಸಿ, ಮುಂದಿನ ಕ್ರಮ ವಹಿಸುತ್ತೇನೆ ಎಂದು ಡಿಹೆಚ್‌ಓ ಡಾ.ವಿಶ್ವೇಶ್ವರಯ್ಯ 'ಮೈಸೂರುಮಿತ್ರ'ನಿಗೆ ತಿಳಿಸಿದ್ದಾರೆ.

ಹಿರೀಕೆರೆ, ದೊಡ್ಡಕೆರೆಗೆ ಬಾಗಿನ ಸಮರ್ಪಣೆ





ಗುಂಡ್ಲುಪೇಟೆ, ಸೆ.9–ತಾಲೂಕಿನಲ್ಲಿ ನಿರಂತರ ಮಳೆಗೆ ಕೋಡಿ ಬಿದ್ದ ಹಂಗಳ ಗ್ರಾಮದ ದೊಡ್ಡಕೆರೆ ಹಾಗೂ ಗೋಪಾಲಸ್ವಾಮಿಬೆಟ್ಟ ತಪ್ಪಲಿನ ಹಿರೀಕೆರೆಗೆ ಶಾಸಕ ಸಿ.ಎಸ್.ನಿರಂಜನಕುಮಾರ್ ನೇತೃತ್ವದಲ್ಲಿ ಗ್ರಾಮಸ್ಥರು ಗಂಗಾಪೂಜೆ ನೆರವೇರಿಸಿ, ಬಾಗಿನ ಸಲ್ಲಿಸಿದರು.

ತಾಲೂಕಿನ ಬಂಡೀಪುರ ಅಭಯಾರಣ್ಯ ವ್ಯಾಪ್ತಿಯ ಗೋಪಾಲಸ್ವಾಮಿಬೆಟ್ಟ ತಪ್ಪಲಿನಲ್ಲಿ ನಿರಂತವಾಗಿ ಮಳೆಯಾದ ಕಾರಣ ತಪ್ಪಲಿನಲ್ಲಿರುವ ಹಿರೀಕೆರೆ ಕೋಡಿ ಬಿದ್ದಿತ್ತು. ಈ ಕೆರೆ ನೀರು ಹಂಗಳ ದೊಡ್ಡಕೆರೆ ತಲುಪಿ ಕೋಡಿ ಬಿದ್ದಿತ್ತು.

ಈ ಹಿನ್ನೆಲೆಯಲ್ಲಿ ಗುಂಡ್ಲು ನದಿಯ ಮೂಲವಾದ ಹಿರೀಕೆರೆಗೆ ಶಾಸಕ ಸಿ.ಎಸ್. ನಿರಂಜನಕುಮಾರ್ ಗ್ರಾಮಸ್ಥರೊಂದಿಗೆ ಪೂಜೆ ಸಲ್ಲಿಸಿ, ಬಾಗಿನ ಅರ್ಪಿಸಿದರು. ಇನ್ನೂ ಗ್ರಾಮದ ದೊಡ್ಡಕೆರೆಗೆ ಗ್ರಾಮಸ್ಥರು ಸಂಪ್ರದಾಯದಂತೆ ಮಂಗಳವಾದ್ಯದೊಂದಿಗೆ ತೆರಳಿ, ಅಲ್ಲಿ ಗ್ರಾಪಂ ಅಧ್ಯಕ್ಷ ಮಲ್ಲಪ್ಪ ದಂಪತಿ ಗಂಗಾಪೂಜೆ ನೆರವೇರಿಸಿದರೆ, ಕಾಡಾ ಮಾಜಿ ಅಧ್ಯಕ್ಷ ಹೆಚ್.ಎಸ್. ನಂಜಪ್ಪ ಬಾಗಿನ ಅರ್ಪಿಸಿದರು.

ಈ ಸಂದರ್ಭದಲ್ಲಿ ಪಿಎಸಿಸಿ ಬ್ಯಾಂಕ್ ಅಧ್ಯಕ್ಷ ಹೆಚ್.ಎಂ.ಮಹೇಶ್, ಗ್ರಾಮ ಪಂಚಾಯಿತಿ ಸದಸ್ಯರಾದ ನಂದೀಶ್, ಗೋವಿಂದನಾಯ್ಕ, ಬಿಜೆಪಿ ಯುವ ಮೋರ್ಚಾ ಜಿಲ್ಲಾಧ್ಯಕ್ಷ ಪ್ರಣಯ್, ಮುಖಂಡರಾದ ದೊರೆಸ್ವಾಮಿ, ನಾಗರಾಜು, ಸ್ವಾಮಿ, ರೈತ ಮುಖಂಡ ಹಂಗಳ ಮಾಧು, ಬಸವೇಶ್ ಸೇರಿದಂತೆ ಗ್ರಾಮಸ್ಥರಿದ್ದರು.

ಅಕ್ರಮ ಮದ್ಯ ಸಾಗಣೆ; ವ್ಯಕ್ತಿ ಬಂಧನ

ಬೇಗೂರು, ಸೆ.9–ಅಕ್ರಮವಾಗಿ ಮದ್ಯ ಸಾಗಿಸುತ್ತಿದ್ದ ವ್ಯಕ್ತಿಯನ್ನು ಬೇಗೂರು ಠಾಣೆ ಪೊಲೀಸರು ಬಂಧಿಸಿರುವ ಘಟನೆ ಗುಂಡ್ಲುಪೇಟೆ ತಾಲೂಕಿನ ಬೇಗೂರು ಗ್ರಾಮದಲ್ಲಿ ನಡೆದಿದೆ. ನಂಜುಂಡಸ್ವಾಮಿ ಬಂಧಿತ ಆರೋಪಿಯಾಗಿದ್ದು, ಈತ ಗ್ರಾಮದ ಸರ್ಕಾರಿ ಪದವಿ ಪೂರ್ವ ಕಾಲೇಜು ಬಳಿ ಅಕ್ರಮವಾಗಿ ಮದ್ಯ ಸಾಗಿಸುತ್ತಿದ್ದ. ಖಚಿತ ಮಾಹಿತಿ ಮೇರೆಗೆ ದಾಳಿ ನಡೆಸಿ, ಬೇಗೂರು ಠಾಣೆ ಪಿಎಸ್ಐ ಜಗದೀಶ್ ಧೂಳಶೆಟ್ಟಿ ಆರೋಪಿಯನ್ನು ಬಂಧಿಸಿ ಮದ್ಯದ 48 ಪೌಚ್‌ಗಳನ್ನು ವಶಪಡಿಸಿಕೊಂಡರು. ಬೇಗೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಇಂದು ಚಾಮರಾಜನಗರ ತಾಲೂಕಿನ ಪ್ರಾಥಮಿಕ, ಪ್ರೌಢಶಾಲೆಗಳಿಗೆ ರಜೆ

ಚಾಮರಾಜನಗರ, ಸೆ.9–ನಗರದಲ್ಲಿ ಸೆ.10ರಂದು ನಡೆಯುವ ಶಿಕ್ಷಕರ ದಿನಾಚರಣಾ ಕಾರ್ಯಕ್ರಮದಲ್ಲಿ ಚಾಮರಾಜನಗರ ತಾಲೂಕಿನ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಶಿಕ್ಷಕರು ಹಾಜರಾಗುವಂತೆ ಕ್ಷೇತ್ರ ಶಿಕ್ಷಣಾಧಿಕಾರಿಗಳು ಸೂಚಿಸಿದ್ದಾರೆ.

ತಾಲೂಕಿನ ಸರ್ಕಾರಿ, ಅನುದಾನಿತ, ಅನುದಾನ ರಹಿತ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಎಲ್ಲಾ ಬೋಧಕರು ಹಾಗೂ ಬೋಧಕೇತರ ವೃಂದದವರು ಹಾಜರಾಗಿ ಕಾರ್ಯಕ್ರಮ ಯಶಸ್ವಿಗೊಳಿಸುವಂತೆ ತಿಳಿಸಿದ್ದು, ಸೆ.10ರ ಶನಿವಾರದ ರಜೆ ದಿನವನ್ನು ಮುಂಬರುವ ದಿನಗಳಲ್ಲಿ ಪೂರ್ಣದಿನ ತರಗತಿ ನಡೆಸಿ ಸರಿದೂಗಿಸುವಂತೆ ಆದೇಶಿಸಿದ್ದಾರೆ.

ಕಾಳಪ್ಪ ನಿಧನ



ಚಾಮರಾನಗರ, ಸೆ.9– ನಗರದ ಉಪ್ಪಾರ ಬೀದಿಯ ನಿವಾಸಿ, ಶ್ರೀಚಾಮರಾಜೇಶ್ವರ ಒಂಟಿ ಎತ್ತಿನಗಾಡಿ ಹಾಗೂ ಕೂಲಿ ಕಾರ್ಮಿಕರ ಸಂಘದ ಅಧ್ಯಕ್ಷ ಕಾಳಪ್ಪ ಉರುಫ್ ನಂಜುಂಡಶೆಟ್ಟಿ(52) ಅವರು ಶುಕ್ರವಾರ ಮಧ್ಯಾಹ್ನ ಹೃದಯಾಘಾತದಿಂದ ನಿಧನರಾದರು.

ಮೃತರು ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿಯನ್ನು ಅಗಲಿದ್ದಾರೆ. ಅಂತ್ಯಕ್ರಿಯೆಯು ಶನಿವಾರ ಮಧ್ಯಾಹ್ನ 12 ಗಂಟೆಗೆ ನಗರದ ಸಂತೇಮರಳ್ಳಿ ರಸ್ತೆಯಲ್ಲಿನ ಉಪ್ಪಾರ ರುದ್ರಭೂಮಿಯಲ್ಲಿ ನಡೆಯಲಿದೆ.

ನಾಗರಾಜನಾಯಕ



ಬೇಗೂರು,ಸೆ.9– ಗುಂಡ್ಲುಪೇಟೆ ತಾಲೂಕಿನ ಕೋಟೆಕೆರೆ ಗ್ರಾಮದ ನಿವಾಸಿ ನಾಗರಾಜನಾಯಕ(58) ಹೃದಯಾಘಾತದಿಂದ ಬುಧವಾರ ನಿಧನರಾದರು. ಮೃತರು ಪತ್ನಿ ಸೇರಿದಂತೆ ಓರ್ವ ಪುತ್ರಿ, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧು–ಬಳಗ ಅಗಲಿದ್ದಾರೆ. ಅಂತ್ಯಕ್ರಿಯೆ ಕೋಟೆಕೆರೆ ಗ್ರಾಮದ ಮೃತರ ಜಮೀನಿನಲ್ಲಿ ನಡೆಯಿತು.

ಪ್ರೀತಿಸಿ ಮದುವೆಯಾದ ಮಗಳ ಮರಳಿ ಪಡೆಯಲು ಡೋಂಗಿ ಮಂತ್ರವಾದಿ ಮೊರೆ

ತಾಯಿ, ಮಗಳಿಗೆ ವಿಷ ಪ್ರಾಶನ: ಪ್ರಕರಣ ದಾಖಲು

ಮೈಸೂರು, ಸೆ.9–ಪ್ರೀತಿಸಿ ಮದುವೆಯಾಗಿದ್ದ ಮಗಳನ್ನು ಮನೆಗೆ ವಾಪಸ್ ಕರೆಸುತ್ತೇನೆ ಎಂದು ಹೇಳಿ ಸ್ವಯಂ ಘೋಷಿತ ಮಂತ್ರವಾದಿ, ಪೂಜೆ ಮಾಡಿ ತಾಯಿ ಮತ್ತು ಮಗಳಿಗೆ ತೀರ್ಥದಲ್ಲಿ ವಿಷ ಬೆರೆಸಿ ನೀಡಿರುವುದು ಬಗ್ಗೆ ವರದಿಯಾಗಿದೆ.

ಮೈಸೂರಿನ ಮಂಚೇಗೌಡನ ಕೊಪ್ಪಲು ನಿವಾಸಿಗಳಾದ ರಾಧಾಮಣಿ(43) ಮತ್ತು ಅವರ ಪುತ್ರಿ ನಿಧಿ(20) ವಿಷ ಪ್ರಾಶನಕ್ಕೊಳಗಾಗಿ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಇನ್ಫೋಸಿಸ್‌ನಲ್ಲಿ ಹೌಸ್ ಕೀಪಿಂಗ್ ಕೆಲಸ ಮಾಡುತ್ತಿರುವ ಕಿರಣ್ ಅಲಿಯಾಸ್ ಶಿವಕಿರಣ ಆರೋಪಕ್ಕೆ ಗುರಿಯಾಗಿರುವವನು.

ವಿವರ: ರಾಧಾಮಣಿ ಅವರು ಮೈಸೂರಿನ ಇನ್ಫೋಸಿಸ್‌ನಲ್ಲಿ ಖಾಸಗಿ ಸೆಕ್ಯೂರಿಟಿ ಗಾರ್ಡ್ ಆಗಿ ಕೆಲಸ ಮಾಡುತ್ತಿದ್ದಾರೆ. ಇವರಿಗೆ ನಿಧಿ ಮತ್ತು ನಿತ್ಯಾ ಎಂಬ ಅವಳಿ ಹೆಣ್ಣು ಮಕ್ಕಳಿದ್ದು, 2021ರ ನವೆಂಬರ್ 15 ರಂದು ನಿತ್ಯಾ ಬೆಳಗೊಳದ ಚಂದ್ರು ಎಂಬಾತನನ್ನು ಪ್ರೀತಿಸಿ ಮದುವೆಯಾಗಿದ್ದಾಳೆ. ನಂತರ ಆಕೆ ತಾಯಿಯ ಮನೆಗೇ ಬಂದಿಲ್ಲ. ಈ ಹಿನ್ನೆಲೆಯಲ್ಲಿ ರಾಧಾಮಣಿ ಬೇಸರಗೊಂಡಿದ್ದರು. ಇನ್ಫೋಸಿಸ್‌ನಲ್ಲೇ ಹೌಸ್ ಕೀಪಿಂಗ್ ಕೆಲಸ ಮಾಡುತ್ತಿದ್ದ ಕಿರಣ್ ಜೊತೆ ಈ ವಿಚಾರವನ್ನು ಅವರು ತಿಳಿಸಿದ್ದರು.

ತಾನು ಪೂಜೆ ಮಾಡಿ ನಿತ್ಯಾ ಪ್ರೀತಿಸಿದ ಹುಡುಗನನ್ನು ಬಿಟ್ಟು ನಿಮ್ಮ ಮನೆಗೆ ವಾಪಸ್ ಬರುವಂತೆ ಮಾಡುವುದಾಗಿ ಹೇಳಿದ್ದ ಈತ, ಮೂರ್‍ನಾಲ್ಕು ಬಾರಿ ರಾಧಾಮಣಿ ಮನೆಗೆ ಬಂದು ಮಧ್ಯಾಹ್ನ ಹಾಗೂ ಸಂಜೆ ಪೂಜೆ ಮಾಡಿ ಹೋಗುತ್ತಿದ್ದ. ಸೆಪ್ಟೆಂಬರ್ 6 ರಂದು ರಾತ್ರಿ 8.30ರಲ್ಲಿ ಅವರ ಮನೆಗೆ ಬಂದ ಕಿರಣ, ಪೂಜೆ ಮಾಡಿದ ನಂತರ ಹಾಲಿನಲ್ಲಿ ಕಲ್ಲುಸಕ್ಕರೆ, ಅರಿಶಿಣ, ಕುಂಕುಮ ಮತ್ತು ಯಾವುದೋ ಪುಡಿಯನ್ನು ಬೆರೆಸಿ ತೀರ್ಥ ಎಂದು ರಾಧಾಮಣಿ ಮತ್ತು ಅವರ ಮತ್ತೋರ್ವ ಪುತ್ರಿ ನಿಧಿಗೆ ಒಂದೊಂದು ಲೋಟ ಕೊಟ್ಟಿದ್ದಾನೆ. ಅರ್ಧ ಗಂಟೆ ನಂತರ ಮತ್ತೆ ಒಂದು ಲೋಟ ಹಾಲನ್ನು ಈತ ನೀಡಿದಾಗ ರಾಧಾಮಣಿ ಹಾಲು ಕುಡಿದರೆ, ನಿಧಿ ಕುಡಿಯಲು ನಿರಾಕರಿಸಿದ್ದಾಳೆ.

ಕೆಲ ನಿಮಿಷಗಳಲ್ಲೇ ರಾಧಾಮಣಿ ಮೈ ಉರಿಯುತ್ತಿದೆ ಎಂದು ಚೀರಾಡುತ್ತಾ ವಾಂತಿ ಮಾಡಿಕೊಂಡಿದ್ದಾರೆ. ಈ ವೇಳೆ ನಿಧಿ ತನ್ನ ಸ್ನೇಹಿತ ಮಂಜೇಶ್ ಎಂಬಾತನಿಗೆ ಕರೆ ಮಾಡಿ ಮನೆಗೆ ಕರೆಸಿಕೊಂಡಿದ್ದಾರೆ. ಅಷ್ಟರಲ್ಲೇ ನಿಧಿಯೂ ಸಹ ವಾಂತಿ ಮಾಡಿಕೊಂಡು ಅಸ್ವಸ್ಥಳಾಗಿದ್ದಾಳೆ. ಮಂಜೇಶ್ ತಾಯಿ ಹಾಗೂ ಮಗಳನ್ನು ಖಾಸಗಿ ಆಸ್ಪತ್ರೆ ದಾಖಲಿಸಿದ್ದು, ಇವರಿಬ್ಬರಿಗೂ ವಿಷ ಪ್ರಾಶನ ಮಾಡಲಾಗಿದೆ ಎಂದು ನಿಧಿ ನೀಡಿದ ದೂರನ್ನು ದಾಖಲಿಸಿಕೊಂಡಿರುವ ಮೇಟಗಳ್ಳಿ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಸಫಾರಿ ವಾಹನದ ಮೇಲೆರಗಿದ ಒಂಟಿ ಸಲಗ: ಚಾಲಕನ ಸಮಯ ಪ್ರಜ್ಞೆಯಿಂದ ಪ್ರವಾಸಿಗರು ಪಾರು

ಮೈಸೂರು,ಸೆ.9(ಎಂಟಿವೈ)– ನಾಗರಹೊಳೆ ಅಭಯಾರಣ್ಯದ ಹೆಚ್.ಡಿ.ಕೋಟೆ ತಾಲೂಕಿನ ಅಂತರಸಂತೆ ವಲಯದಲ್ಲಿ ಪ್ರವಾಸಿಗರಿದ್ದ ಸಫಾರಿ ಬಸ್ ಮೇಲೆ ಒಂಟಿ ಸಲಗವೊಂದು ದಾಳಿಗೆ ಮುಂದಾದ ಘಟನೆ ಶುಕ್ರವಾರ ಬೆಳಗ್ಗೆ ನಡೆದಿದೆ.

ಅಂತರಸಂತೆ ವಲಯದ ಸಫಾರಿ ಬಿ–ಜೋನ್‌ನಲ್ಲಿ ಗುರುವಾರ ಸಂಜೆಯಷ್ಟೇ ಜೆಎಲ್‌ಆರ್ ಸಫಾರಿ ಜೀಪ್‌ವೊಂದರ ಮೇಲೆ ಒಂಟಿ ಸಲಗ ದಾಳಿಗೆ ಮುಂದಾಗಿತ್ತು. ಹಿಮ್ಮುಖವಾಗಿ ಜೀಪು ಚಾಲಿಸಿಕೊಂಡು ಹೋಗಿ ಜೀಪು ಚಾಲಕ ಪ್ರಾಸಿಗರ ಪಾರುಮಾಡಿದ್ದ ಘಟನೆಯ ಮರು ದಿನವೇ ಸಫಾರಿ ಬಸ್ ಮೇಲೆ ದಾಳಿಗೆ ಒಂಟಿ ಸಲಗ ಮುಂದಾಗಿದೆ. ಸಫಾರಿ ರಸ್ತೆಯಲ್ಲಿ ಸಾಗುತ್ತಿದ್ದ ಬಸ್‌ನತ್ತ ಘೀಳಿಡುತ್ತಾ ಮುನ್ನುಗ್ಗಿದ ಈ ಒಂಟಿ ಸಲಗ, ಬಸ್ ವೇಗವಾಗಿ ಮುಂದಕ್ಕೆ ಹೋದ ನಂತರ ಕಾಡಿನತ್ತ ಪೇರಿ ಕಿತ್ತಿದೆ. ರಸ್ತೆಯಿಂದ ಅನತಿ ದೂರದಲ್ಲಿ ನಿಂತಿದ್ದ ಸಲಗನನ್ನು ಕಂಡ ಸಫಾರಿ ಬಸ್ ಚಾಲಕ ಪ್ರವಾಸಿಗರಿಗೆ ದೂರದಿಂದಲೇ ತೋರಿಸಿದ್ದಾನೆ. ನಿಧಾನವಾಗಿಯೇ ಮುಂದೆ ಸಾಗುತ್ತಿದ್ದಾಗ ಏಕಾಏಕಿ ಆನೆ ಬಸ್‌ನತ್ತ ನುಗ್ಗಿ ಬಂದಿದೆ. ಸಲಗನ ದಾಳಿ ಮುನ್ಸೂಚನೆ ಅರಿತ ಬಸ್ ಚಾಲಕ ವೇಗವಾಗಿ ಬಸ್ ಚಾಲಿಸಿದ್ದಾನೆ. ಆದರೂ ನುಗ್ಗಿ ಬಂದ ಸಲಗ, ಅದೇ ಆವೇಗದಲ್ಲಿ ಅರಣ್ಯದಲ್ಲಿ ನುಗ್ಗಿದೆ. ಗುರುವಾರ ಹಾಗೂ ಶುಕ್ರವಾರ ನಡೆದ ಎರಡು ಪ್ರತ್ಯೇಕ ಘಟನೆಯಲ್ಲೂ ಪ್ರವಾಸಿಗರಿಗೆ ಧೈರ್ಯ ತುಂಬಿ, ಅವರನ್ನು ಸುರಕ್ಷಿತವಾಗಿ ವಾಪಸ್ಸು ಕರೆ ತಂದಿರುವುದರಲ್ಲಿ ಸಫಾರಿ ವಾಹನಗಳ ಚಾಲಕರ ಸಾಹಸ ಶ್ಲಾಘನೀಯ.

ಮೂರನೇ ಪುಟದಿಂದ

ಮೇಯರ್ ನಗರ ಪರ್ಯಟನೆ

ನೀಡಿದ ಮೇಯರ್ ಶಿವಕುಮಾರ್, ದಸರಾ ಮಹೋತ್ಸವ ಸಮೀಪಿಸುತ್ತಿದೆ. ದೇಶ–ವಿದೇಶಗಳಿಂದ ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿಗರು ಬರುವ ನಿರೀಕ್ಷೆ ಇರುವುದರಿಂದ ಮೈಸೂರಿನ ರಸ್ತೆ, ಜಂಕ್ಷನ್‌ಗಳನ್ನು ಸುಸ್ಥಿತಿಯಲ್ಲಿರಿಸಿ ಸುರಕ್ಷಿತ ಸಂಚಾರಕ್ಕೆ ಅನುಕೂಲ ಮಾಡಿಕೊಡಬೇಕು, ಕುಡಿಯುವ ನೀರು, ಸ್ವಚ್ಛತೆ, ಒಳಚರಂಡಿ, ಬೀದಿ ದೀಪ ಸೇರಿದಂತೆ ಪ್ರವಾಸಿಸ್ನೇಹಿ ವ್ಯವಸ್ಥೆ ಮಾಡಬೇಕಿರುವುದು ಮಹಾನಗರ ಪಾಲಿಕೆ ಜವಾಬ್ದಾರಿಯಾಗಿದೆ ಎಂದರು. ಈಗಾಗಲೇ ಚಾಮರಾಜ ಕ್ಷೇತ್ರದ ಶಾಸಕ ಎಲ್. ನಾಗೇಂದ್ರ, ಸುಮಾರು 300 ಕೋಟಿ ರೂ. ಅನುದಾನ ತಂದು ರಸ್ತೆ, ಒಳಚರಂಡಿ, ಮಳೆ ನೀರು ಚರಂಡಿಯಂತಹ ಹಲವು ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಿದ್ದಾರೆ. ಇನ್ನೂ ಹಲವು ಕೆಲಸಗಳಿಗೆ ವರ್ಕ್ ಆರ್ಡರ್ ಕೊಡಲಾಗಿದೆ. ಮಳೆ ಕಾರಣದಿಂದಾಗಿ ಕಾಮಗಾರಿ ಆರಂಭವಾಗಿಲ್ಲ ಎಂದು ಅವರು ತಿಳಿಸಿದರು. ಅದೇ ರೀತಿ ಕೆ.ಆರ್. ಕ್ಷೇತ್ರದ ಶಾಸಕ ರಾಮದಾಸ್ ಸುಮಾರು 200 ಕೋಟಿ ರೂ. ಅನುದಾನ ತಂದಿದ್ದಾರೆ. ಮೈಸೂರು ಮಹಾನಗರ ವ್ಯಾಪ್ತಿಯ ಎನ್.ಆರ್., ಚಾಮುಂಡೇಶ್ವರಿ ಕ್ಷೇತ್ರದ ಬಡಾವಣೆಗಳಲ್ಲೂ ಅಭಿವೃದ್ಧಿ ಕಾಮಗಾರಿಗಳು ನಡೆಯುತ್ತಿವೆ. ಮಳೆ ನಿಂತ ಮೇಲೆ ಉಳಿದ ಎಲ್ಲಾ ಕೆಲಸ ಆರಂಭಿಸಿ ದಸರಾ ಒಳಗಾಗಿ ಪೂರ್ಣಗೊಳಿಸಲಾಗುವುದು ಎಂದರು.

ಮತ್ತೊಮ್ಮೆ ಮೈಸೂರು ನಗರ ಪ್ರದಕ್ಷಿಣೆ ಹಾಕಿ ಗುಂಡಿ ಬಿದ್ದಿರುವ ರಸ್ತೆಗಳನ್ನು ಆಸ್ಫಾಲ್ಟ್ ಮಾಡುವುದಲ್ಲದೆ, ಚರಂಡಿ ಒಳಚರಂಡಿ, ಸೇತುವೆಗಳು, ಬೀದಿ ದೀಪ ಮುಂತಾದ ಕಾಮಗಾರಿಗಳನ್ನು ಕೈಗೆತ್ತಿಕೊಂಡು ಹಂತ ಹಂತವಾಗಿ ಅಭಿವೃದ್ಧಿಗೊಳಿಸಲು ಇಷ್ಟರಲ್ಲೇ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಕ್ರಿಯಾ ಯೋಜನೆ ಸಿದ್ಧಪಡಿಸಿ ಕಾರ್ಯಪ್ರವೃತ್ತರಾಗುತ್ತೇವೆ ಎಂದು ತಿಳಿಸಿದರು. ಸರ್ಕಲ್‌ಗಳ ಅಭಿವೃದ್ಧಿ, ಸೌಂದರ್ಯೀಕರಣ, ಮುಖ್ಯ ರಸ್ತೆಗಳ ಕರ್ಬ್ ಸ್ಟೋನ್‌ಗಳಿಗೆ ಬಣ್ಣ ಬಳಿಯುವುದು, ಮರಗಳ ರೆಂಬೆ ಟ್ರಿಮ್ ಮಾಡಿಸುವುದು ಸೇರಿದಂತೆ ಮೈಸೂರು ನಗರದಾದ್ಯಂತ ಸ್ವಚ್ಛತೆ ಕಾಪಾಡಲು ಆದ್ಯತೆ ಮೇಲೆ ದಸರಾ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುತ್ತೇವೆ ಎಂದು ಶಿವಕುಮಾರ್ ನುಡಿದರು. ಮೇಯರ್ ಸ್ಕೂಟರ್ ಯಾತ್ರೆ ವೇಳೆ ಕಾರ್ಪೊರೇಟರ್ ಪ್ರಮೀಳಾ ಭರತ್, ಪಾಲಿಕೆ ಸಿಬ್ಬಂದಿ ಉಪಸ್ಥಿತರಿದ್ದರು. ಬೃಂದಾವನ ಬಡಾವಣೆಯ ಗುರುದ್ವಾರ ಬಳಿಯ ರಸ್ತೆ, ಹೆಬ್ಬಾಳಿನ ಮಹದೇಶ್ವರ ಬಡಾವಣೆಯ ತ್ರಿನೇತ್ರ ಸರ್ಕಲ್‌ನಿಂದ ವಿಜಯನಗರ ವಾಟರ್ ಟ್ಯಾಂಕ್ ಸರ್ಕಲ್‌ವರೆಗಿನ ರಸ್ತೆ, ಹೈಟೆನ್ಷನ್ ರಸ್ತೆ, ವಿವಿ ಮೊಹಲ್ಲಾ, ಪಡುವಾರಹಳ್ಳಿ ಸೇರಿದಂತೆ ಮೈಸೂರಿನ ಹಲವು ರಸ್ತೆಗಳು ಮಳೆಯಿಂದಾಗಿ ಹಾಳಾಗಿದ್ದು, ವಾಹನ ಸವಾರರು ಪರಿತಪಿಸುವಂತಾಗಿದೆ.

ಸಮಸ್ಯೆ ಹೇಳಲು ಬಂದ ತೆರಿಗೆದಾರನ ಸ್ಕೂಟರ್‌ನಲ್ಲೇ ಹೋಗಿ ಹಾಳಾದ ರಸ್ತೆ ಪರಿಶೀಲಿಸಿದ್ದ ಕಾರ್ಪೊರೇಷನ್ ಕಮಿಷ್ನರ್ ಡೇವಿಡ್ ಸೈಯಿಮ್!

ಮೈಸೂರು, ಸೆ.9(ಆರ್‌ಕೆ)– ಮೈಸೂರು ಸಿಟಿ ಕಾರ್ಪೊರೇಷನ್ ಕಮಿಷನರ್ ಆಗಿದ್ದ ಐಎಎಸ್ ಅಧಿಕಾರಿ ಡೇವಿಡ್ ಸೈಯಿಮ್ ಅವರು ರಸ್ತೆ ಹಾಳಾಗಿರುವುದರ ಬಗ್ಗೆ ದೂರು ನೀಡಲು ಬಂದ ತೆರಿಗೆದಾರರ ಸ್ಕೂಟರ್‌ನಲ್ಲೇ ಹೋಗಿ ರಸ್ತೆಗಳ ಪರಿಶೀಲನೆ ನಡೆಸಿದ್ದರು.

ಜನಸ್ನೇಹಿ ಆಯುಕ್ತರಾಗಿದ್ದ ಈ ಐಎಎಸ್ ಅಧಿಕಾರಿಯನ್ನು ಈ ಹಿಂದೆ ಮೈಸೂರು ಸಿಟಿ ಕಾರ್ಪೊರೇಷನ್ ಹೊಂದಿದ್ದನ್ನು ಸ್ಮರಿಸಬಹುದು.

ತೆರಿಗೆದಾರರ ಸ್ಕೂಟರ್ ಮೇಲೆ ಹೋಗಿ ಗುಂಡಿ ಬಿದ್ದ, ಅತ್ಯಂತ ಕೆಟ್ಟ ಸ್ಥಿತಿಯಲ್ಲಿದ್ದ ರಸ್ತೆಗಳನ್ನು ಪರಿಶೀಲಿಸಿ, ಜನರ ಸಮಸ್ಯೆಗಳನ್ನು ಆಲಿಸುತ್ತಿದ್ದ ಅವರ ಕಾರ್ಯವೈಖರಿಯು ಕಾರ್ಪೊರೇಷನ್ ಇತರ ಅಧಿಕಾರಿಗಳಿಗೆ ಪಾಠವಾಗುತ್ತಿತ್ತು. ಅತ್ಯಂತ ಮಾನವೀಯ ಗುಣವುಳ್ಳವರಾಗಿದ್ದ ಸೈಯಿಮ್, ಕಾನೂನಿನಡಿಯೇ ಜನರಿಗೆ ಸಹಾಯ ಮಾಡುತ್ತಿದ್ದರು.

ಸ್ಕೂಟರ್‌ನಲ್ಲಿ ಸಂಚರಿಸಿ ಸಮಸ್ಯೆಗಳ ಬಗ್ಗೆ ಸ್ವತಃ ಮನಗಂಡು ಪರಿಹಾರೋಪಾಯ ಕಂಡು ಹಿಡಿದು, ತೆರಿಗೆದಾರನಿಗೆ ಅಗತ್ಯ ಮೂಲ ಸೌಲಭ್ಯ ಒದಗಿಸಲು ಶ್ರಮಿಸುತ್ತಿದ್ದ ಸೈಯಿಮ್ ಅವರ ವಿಶೇಷ ಕಾರ್ಯವೈಖರಿಯನ್ನು ಅಂದಿನ ರಾಷ್ಟ್ರೀಯ, ರಾಜ್ಯ ಮಟ್ಟದ ಹಾಗೂ ಪ್ರಾದೇಶಿಕ, ಜಿಲ್ಲಾ ಮತ್ತು ಸ್ಥಳೀಯ ಮುದ್ರಣ ಮಾಧ್ಯಮಗಳು ಪ್ರಧಾನ ಶೀರ್ಷಿಕೆಯಡಿ ಸುದ್ದಿ ಪ್ರಕಟಿಸಿದ್ದನ್ನು ಇಲ್ಲಿ ಸ್ಮರಿಸಬಹುದಾಗಿದೆ. ಈ ಹಿಂದೆ ಮೈಸೂರು ಮಹಾನಗರ ಪಾಲಿಕೆ ಆಯುಕ್ತರಾಗಿದ್ದ ಎ.ಬಿ.ಇಬ್ರಾಹಿಂ ಸಹ ಮಾದರಿ ಅಧಿಕಾರಿ. ಒಮ್ಮೆ ದಸರಾ ವೇಳೆ ತಮ್ಮ ಬೇಡಿಕೆ ಈಡೇರಿಸಲು ಆಗ್ರಹಿಸಿ ಪೌರ ಕಾರ್ಮಿಕರು ಪಟ್ಟು ಹಿಡಿದು ಕರ್ತವ್ಯ ಬಹಿಷ್ಕರಿಸಿದ್ದಲ್ಲದೆ, ತ್ಯಾಜ್ಯವನ್ನು ಪಾಲಿಕೆ ಕಚೇರಿ ಆವರಣ, ಕೆ.ಆರ್.ಸರ್ಕಲ್‌ನಲ್ಲಿ ಸುರಿದು ಪ್ರತಿಭಟನೆ ಮಾಡುತ್ತಿದ್ದಾಗ ಇಬ್ರಾಹಿಂ ತಾವೇ ಸ್ವತಃ ಗುದ್ದಲಿ, ಬಾಂಡ್ಲಿ ಹಿಡಿದು ಆ ಕಸ ಎತ್ತಿಹಾಕಿದ್ದು ಆಗ ಭಾರೀ ಸುದ್ದಿಯಾಗಿತ್ತು.

ಹಾಗೆಯೇ ಜನಸ್ನೇಹಿ ಜನಪ್ರತಿನಿಧಿಗಳಿದ್ದರು ಎಂಬುದಕ್ಕೆ ಚಾಮರಾಜ ಕ್ಷೇತ್ರದಲ್ಲಿ ಸತತ ನಾಲ್ಕು ಬಾರಿ ಶಾಸಕರಾಗಿದ್ದ ಹೆಚ್.ಎಸ್.ಶಂಕರಲಿಂಗೇಗೌಡರೂ ಉತ್ತಮ ಉದಾಹರಣೆ. ಯಾರೇ ಸಮಸ್ಯೆ ಹೇಳಿಕೊಂಡು ತಮ್ಮ ಬಳಿ ಬಂದರೆ ಅವರು ಬಂದಂತಹ ವಾಹನ–ಅದು ಬೈಸಿಕಲ್ಲೇ ಆಗಿದ್ದರೂ, ಏರಿ ಹೋಗಿ, ಅವರ ಕೆಲಸ ಮಾಡಿಕೊಟ್ಟು ಬರುತ್ತಿದ್ದರು. ಒಮ್ಮೆ ಪಡಿತರ ಸೀಮೆಎಣ್ಣೆ ಅಳತೆಯಲ್ಲಿ ಅನ್ಯಾಯದ ದೂರು ಬಂದಾಗ, ತಾವೇ ಖುದ್ದು ಆ ಪಡಿತರ ಅಂಗಡಿ ಮುಂದೆ ಸಾಲುಗಟ್ಟಿ ನಿಂತಿದ್ದ ಫಲಾನುಭವಿಗಳಿಗೆ ಸೀಮೆಎಣ್ಣೆ ಲೀಟರ್ ಮಾಪಕದಲ್ಲಿ ಅಳೆದು ತೋರಿಸಿ, ಎಚ್ಚರಿಕೆಯನ್ನೂ ನೀಡಿದ್ದರು. ಇಂದು ಸ್ಕೂಟರ್‌ನಲ್ಲಿ ನಗರ ಪರ್ಯಟನೆ ಮಾಡಿ, ರಸ್ತೆಗಳ ಸ್ಥಿತಿಗತಿ ವೀಕ್ಷಿಸಿರುವ ನೂತನ ಮೇಯರ್ ಶಿವಕುಮಾರ್ ಸಹ ಒಬ್ಬ ಜನಸ್ನೇಹಿ ಜನಪ್ರತಿನಿಧಿಗಳ ಸಾಲಿಗೆ ಸೇರುವ ಲಕ್ಷಣಗಳಿವೆ ಎನ್ನುತ್ತಾರೆ ಕೆಲ ಹಿರಿಯ ನಾಗರಿಕರು.

ನಮ್ಮ ದೇಶದಲ್ಲಿ ದುಡಿದು ಸಾಯುವವರಿಗಿಂತ ಚಿಂತೆ ಮಾಡಿ ಚಿತೆ ಏರುವವರೇ ಜಾಸ್ತಿ...!

ಸಾಂಕ್ರಾಮಿಕವಲ್ಲದ ರೋಗಗಳಿಂದ ಶೇ.50ಕ್ಕಿಂತ ಅಧಿಕ ಸಾವು

ಪತ್ರಕರ್ತರೊಂದಿಗೆ ಸಂವಾದ ಕಾರ್ಯಕ್ರಮದಲ್ಲಿ ಹೃದ್ರೋಗ ತಜ್ಞ ಡಾ.ಸಿ.ಎನ್.ಮಂಜುನಾಥ್ ಕಳವಳ

ಮೈಸೂರು, ಸೆ.9(ಆರ್‌ಕೆಬಿ)–ಹೃದಯಾಘಾತ, ರಕ್ತದೊತ್ತಡ, ಮಧುಮೇಹ, ಪಾರ್ಶ್ವವಾಯು, ಕ್ಯಾನ್ಸರ್ ಮತ್ತು ಜೀವನಶೈಲಿ ಚಾಲಿತ ಕಾಯಿಲೆಗಳಂತಹ ಸಾಂಕ್ರಾಮಿಕವಲ್ಲದ ಕಾಯಿಲೆಗಳಿಂದ ದೇಶದಲ್ಲಿ ಶೇ. 50 ಕ್ಕಿಂತ ಹೆಚ್ಚು ಸಾವುಗಳು ಸಂಭವಿಸುತ್ತಿವೆ. ಈಚಿನ ವರ್ಷಗಳಲ್ಲಿ 10–15 ವರ್ಷಗಳ ಮೊದಲೇ ಅಕಾಲಿಕ ಮರಣಗಳು ದೇಶಾದ್ಯಂತ ಆತಂಕಕಾರಿ ಪ್ರಮಾಣದಲ್ಲಿ ಏರುತ್ತಿವೆ ಎಂದು ಜಯದೇವ ಹೃದ್ರೋಗ ಮತ್ತು ಸಂಶೋಧನಾ ಸಂಸ್ಥೆಯ ನಿರ್ದೇಶಕ ಡಾ.ಸಿ.ಎನ್. ಮಂಜುನಾಥ್ ಕಳವಳ ವ್ಯಕ್ತಪಡಿಸಿದರು.

ಮೈಸೂರು ಪತ್ರಕರ್ತರ ಸಂಘ ಶುಕ್ರವಾರ ಪತ್ರಕರ್ತರ ಭವನದಲ್ಲಿ ಆಯೋಜಿಸಿದ್ದ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮೊಬೈಲ್, ಟಿವಿಗಳು, ಇಂಟರ್‌ನೆಟ್, ಲ್ಯಾಪ್‌ಟಾಪ್‌ಗಳಂತಹ ಆಧುನಿಕ ಎಲೆಕ್ಟ್ರಾನಿಕ್ ಮತ್ತು ಸಂವಹನ ಗ್ಯಾಜೆಟ್ ವ್ಯಸನಿಗಳಾಗಿದ್ದೇವೆ. ಅದನ್ನು ಸ್ಕ್ರೀನ್ ಅಡಿಕ್ಷನ್ ಎಂದು ಕರೆಯುತ್ತೇವೆ. ಇದು ಮಾನವರ ಜೀವನದ ಮೇಲೆ ಭಯಾನಕ ಪರಿಣಾಮ ಉಂಟು ಮಾಡುತ್ತಿದೆ. ಇತ್ತೀಚಿನ ಅಧ್ಯಯನದ ಪ್ರಕಾರ, ರಾಜ್ಯದಲ್ಲಿ 45 ವರ್ಷಕ್ಕಿಂತ ಕಡಿಮೆ ವಯಸ್ಸಿನ ಜನರು ಶೇ.30 ಕ್ಕಿಂತ ಹೆಚ್ಚು ಹೃದಯಾಘಾತಕ್ಕೆ ಒಳಗಾಗುತ್ತಾರೆ. ಇದು ಗಂಭೀರ ಕಾಳಜಿಯ ವಿಷಯವಾಗಿದೆ. ಧೂಮಪಾನ, ಮದ್ಯಪಾನ ಮತ್ತು ಮಾದಕ ದ್ರವ್ಯ ಸೇವನೆ ಕೂಡ ಹೃದಯಾಘಾತಕ್ಕೆ ಪ್ರಾಥಮಿಕ ಕಾರಣಗಳಾಗಿವೆ ಎಂದರು.

ಶರೀರದ ತೂಕಕ್ಕೂ ರಕ್ತದ ಕೊಲೆಸ್ಟ್ರಾಲ್‌ಗೂ ಯಾವುದೇ ಸಂಬಂಧ ಇಲ್ಲ. ಈ ನಂಬಿಕೆ ಸರಿಯಲ್ಲ. ಈಗ ವಾಯುಮಾಲಿನ್ಯದಿಂದ ಹೃದಯ ಸಂಬಂಧಿ ಕಾಯಿಲೆಗಳು ಹೆಚ್ಚಾಗುತ್ತಿವೆ. ಕೈಗಾರಿಕೆಗಳಿಂದಾಗುವ ವಾಯು ಮಾಲಿನ್ಯವೂ ಹೃದಯಾಘಾತಕ್ಕೆ ಕಾರಣವಾಗಬಹುದು ಎಂದು ಹೇಳಿದರು.

ನಿರ್ಲಕ್ಷ್ಯ ಒಳ್ಳೆಯದಲ್ಲ: ಎಡಭಾಗದ ಎದೆನೋವು ಒಂದೇ ಹೃದಯ ಸಮಸ್ಯೆ ಲಕ್ಷಣವಲ್ಲ. ಕೆಲವರಿಗೆ ದವಡೆ, ಗಂಟಲು ನೋವು, ಬೆನ್ನಿನ ಹುರಿ ಮೇಲ್ಭಾಗದಲ್ಲಿಯೂ ನೋವು ಇದ್ದಲ್ಲಿ ತಪಾಸಣೆಗೆ ಒಳಗಾಗಬೇಕು. ಸದ್ಯ ರಕ್ತದೊತ್ತಡ ಇಲ್ಲ ಎಂದು ನಿರ್ಲಕ್ಷಿಸಬಾರದು. ಇದು ಕ್ರಮೇಣ ಪಾರ್ಶ್ವವಾಯು, ಮೂತ್ರಪಿಂಡ ವೈಫಲ್ಯ, ಹೃದಯಾಘಾತಗಳಿಗೆ ಕಾರಣವಾಗಬಹುದಾಗಿದೆ. ನಮ್ಮ ದೇಶದಲ್ಲಿ ದುಡಿದು ಸಾಯುವವರಿಗಿಂತ ಚಿಂತೆ ಮಾಡಿ ಹೃದಯಾಘಾತಕ್ಕೆ ಒಳಗಾಗಿ ಸಾಯುವವರೇ ಹೆಚ್ಚು. ಸಾಮಾಜಿಕ ಜಾಲತಾಣಗಳ ಬಗ್ಗೆ ಅತಿಯಾದ ಗೀಳು ಬೇಡ. ಕೆಲವರು ತಮಗೆ ಸಂಬಂಧಿಸದ ಅಂತಹ ವಿಷಯಗಳಿಗೆ ಪ್ರತಿಕ್ರಿಯೆ ನೀಡಿ, ಜಾಲತಾಣಗಳಿಂದಾಗಿ ಅನಾವಶ್ಯಕವಾಗಿ ಒತ್ತಡಕ್ಕೆ ಒಳಗಾಗುತ್ತಿದ್ದಾರೆ. ಇದು ಕ್ರಮೇಣ ಹೃದಯ ಸಂಬಂಧಿ ಕಾಯಿಲೆ ತರುತ್ತದೆ. ಇತ್ತೀಚಿನ ವರ್ಷಗಳಲ್ಲಿ ಯಾವುದೇ ರೋಗ ಇಲ್ಲದಿದ್ದರೂ ಅಪಘಾತಗಳ ಮೂಲಕ ಶೇ.13 ರಷ್ಟು ಸಾವು



ಸಂಭವಿಸುತ್ತಿವೆ. ಹೀಗಾಗಿ ಪೊಲೀಸರು 3–4 ತಿಂಗಳ ಗಡುವು ನೀಡಿ ವಾಹನಗಳಿಗೆ ರಿಫ್ಲೆಕ್ಟರ್ ಮೊದಲಾದವನ್ನು ಕಡ್ಡಾಯ ಮಾಡಬೇಕು.

ಬದಲಾಗುತ್ತಿರುವ ಜೀವನಶೈಲಿ, ಕೆಲಸದ ಒತ್ತಡ ಮತ್ತು ಜೀವನದ ಒತ್ತಡಗಳು ಹೃದಯಾಘಾತ ಮತ್ತು ಹೃದಯ ಸ್ತಂಭನಕ್ಕೆ ಮುಖ್ಯ ಕಾರಣಗಳಾಗಿವೆ. ಅತಿಯಾದ ದುರಾಸೆ, ಕೋಪ, ಖಿನ್ನತೆ, ಅಧಿಕ ಕೊಲೆಸ್ಟ್ರಾಲ್ ಮಟ್ಟ, ಏರುತ್ತಿರುವ ಸಕ್ಕರೆ ಮಟ್ಟ, ವಾಯುಮಾಲಿನ್ಯ, ಮಾದಕ ದ್ರವ್ಯ ಸೇವನೆ, ಶಕ್ತಿ ಪಾನೀಯಗಳ ಅತಿಯಾದ ಸೇವನೆ, ಅನುವಂಶಿಕ ಕಾರಣಗಳು, ಆನುವಂಶಿಕ ಅಸ್ವಸ್ಥತೆಗಳು ಇತ್ಯಾದಿಗಳೂ ಹೃದಯಾಘಾತದಲ್ಲಿ ಮಹತ್ವದ ಪಾತ್ರ ವಹಿಸುತ್ತವೆ ಎಂದು ತಿಳಿಸಿದರು.

ಜನಪ್ರಿಯ ನಟ ಪುನೀತ್ ರಾಜ್‌ಕುಮಾರ್ ಹೃದಯಾಘಾತದಿಂದ ಸಾವನ್ನಪ್ಪಿದ ವಿಷಯಕ್ಕೆ ಸಂಬಂಧಿಸಿದ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಅವರು, ನಟ ಪುನೀತ್ ಅವರದು ವಿಶಿಷ್ಟ ಕಾರಣವಾಗಿದೆ. ಅವರ ಮನೆಯಲ್ಲಿ ಎಲ್ಲರಿಗೂ ಹೃದಯಾಘಾತ ಆಗಿದೆ. ಅವರದು ಅನುವಂಶೀಯ ಕಾರಣವಾಗಿದೆ ಎಂದು ವಿವರಿಸಿದರು.

ಶೇ.60ರಷ್ಟು ಜನರಿಗೆ ಹೃದಯ ಸಮಸ್ಯೆ: ಸಮೀಕ್ಷೆಯ ಪ್ರಕಾರ, ಜನಸಂಖ್ಯೆಯ ಸುಮಾರು 60 ಪ್ರತಿಶತದಷ್ಟು ಜನರು ಹೃದಯ ಮತ್ತು ಹೃದಯ ಸಂಬಂಧಿ ಕಾಯಿಲೆಗಳಿಂದ ಬಳಲುತ್ತಿದ್ದಾರೆ, ಈ ಸಮಸ್ಯೆಯನ್ನು ಶೀಘ್ರವಾಗಿ ಪರಿಹರಿಸಬೇಕಾಗಿದೆ. ಎಲ್ಲಾ ವಯಸ್ಸಿನ ಜನರು ನಿಯತಕಾಲಿಕವಾಗಿ ಆರೋಗ್ಯ ತಪಾಸಣೆಗೆ ಒಳಗಾಗಬೇಕಾಗುತ್ತದೆ. ಹಾಗೆ ಮಾಡುವುದರಿಂದ ಜನರು ಹಠಾತ್ ಸಾವುಗಳಿಂದ ರಕ್ಷಣೆ ಪಡೆಯಲು ನೆರವಾಗುತ್ತದೆ. ಜನರು ಜಂಕ್ ಮತ್ತು ಫಾಸ್ಟ್ ಫುಡ್‌ಗಳನ್ನು ಸಾಧ್ಯವಾದಷ್ಟು ದೂರವಿಡಬೇಕು. ದೀರ್ಘಾವಧಿಯಲ್ಲಿ ಜೀವಕ್ಕೆ ಅಪಾಯವನ್ನುಂಟು ಮಾಡುವ ಇತರ ಅಭ್ಯಾಸಗಳನ್ನು ಸಹ ತ್ಯಜಿಸಬೇಕು ಎಂದು ಜನರಿಗೆ ಕಿವಿ ಮಾತು ಹೇಳಿದರು.


> “ಪ್ರತಿದಿನ ಸ್ವಲ್ಪ ಸಮಯದವರೆಗೆ ವಾಕಿಂಗ್ ಮತ್ತು ಜಾಗಿಂಗ್, ಉತ್ತಮ ನಿದ್ರೆ, ಸಕಾರಾತ್ಮಕ ಚಿಂತನೆ ಮತ್ತು ನಗು ನಮ್ಮ ದೈಹಿಕ ಮತ್ತು ಮಾನಸಿಕ ಆರೋಗ್ಯವನ್ನು ಕಾಪಾಡಿಕೊಳ್ಳಲು ಅನುಕೂಲ ಕರವಾಗಿದೆ. ಇಂತಹ ಅಭ್ಯಾಸಗಳಿಂದ ಹೃದ್ರೋಗವನ್ನು ದೂರ ಇಡಬಹುದು.
> –ಡಾ.ಸಿ.ಎನ್.ಮಂಜುನಾಥ್, ಖ್ಯಾತ ಹೃದ್ರೋಗ ತಜ್ಞ

ಜಯದೇವ ಆಸ್ಪತ್ರೆಯಲ್ಲಿನ ಹೃದಯ ಚಿಕಿತ್ಸಾ ಸೌಲಭ್ಯಗಳ ಬಗ್ಗೆ ವಿವರಿಸಿದ ಡಾ.ಮಂಜುನಾಥ್, 105 ಮಂದಿ ಹೃದ್ರೋಗ ತಜ್ಞರನ್ನು ಹೊಂದಿರುವ ಜಯದೇವ ಆಸ್ಪತ್ರೆಯು ಇಡೀ ದೇಶದಲ್ಲಿಯೇ ಅತಿ ಹೆಚ್ಚು ಹೃದ್ರೋಗ ತಜ್ಞರನ್ನು ಹೊಂದಿರುವ ಆಸ್ಪತ್ರೆಯಾಗಿ ಹೊರ ಹೊಮ್ಮಿದೆ. ಆಸ್ಪತ್ರೆಯಲ್ಲಿ ಪ್ರತಿ ತಿಂಗಳಿಗೆ 1000 ದಷ್ಟು ಆಂಜಿಯೋಗ್ರಾಂ ಚಿಕಿತ್ಸೆ ನಡೆಯುತ್ತದೆ 'ಮೊದಲು ಚಿಕಿತ್ಸೆ, ನಂತರ ಹಣ ಪಾವತಿ' ಪದ್ಧತಿಯನ್ನು ಅಳವಡಿಸಿಕೊಳ್ಳಲಾಗಿದೆ. ಸಾಕಷ್ಟು ನಗದು ರಹಿತ ಚಿಕಿತ್ಸಾ ಸೌಲಭ್ಯಗಳಿದ್ದು, ಜನರು ಗಮನಿಸಬೇಕು ಎಂದರು. ಇನ್ನೊಂದು ವಾರದಲ್ಲಿ ಬೆಂಗಳೂರಲ್ಲಿ ಜಯದೇವ ಆಸ್ಪತ್ರೆಯ ಮತ್ತೊಂದು ಘಟಕ ಆರಂಭವಾಗುತ್ತಿದೆ. ಮೈಸೂರು ಜಯದೇವ ಹೃದ್ರೋಗ ಸಂಸ್ಥೆಯಲ್ಲೂ ಪ್ರತಿ ತಿಂಗಳಿಗೆ 1000 ದಷ್ಟು ಆಂಜಿ ಯೋಗ್ರಾಂ ಚಿಕಿತ್ಸೆ ನಡೆಯುತ್ತದೆ ಎಂದು ಹೇಳಿದರು. ಸಂವಾದ ಸಂದರ್ಭದಲ್ಲಿ ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ.ರವಿಕುಮಾರ್, ಪ್ರಧಾನ ಕಾರ್ಯದರ್ಶಿ ಎಂ.ಸುಬ್ರಹ್ಮಣ್ಯ, ಉಪಾಧ್ಯಕ್ಷರಾದ ಅನುರಾಗ್ ಬಸವರಾಜ್ (ನಗರ), ಧರ್ಮಾಪುರ ನಾರಾಯಣ್ (ಗ್ರಾಮಾಂತರ) ಉಪಸ್ಥಿತರಿದ್ದರು.

ಅಪಾರ್ಟ್‌ಮೆಂಟ್‌ನ ಸ್ಲೈಡಿಂಗ್ ಡೋರ್ ಮೀಟಿ 1.4 ಲಕ್ಷ ಮೌಲ್ಯದ ಚಿನ್ನಾಭರಣ ಕಳವು

ಮೈಸೂರು, ಸೆ.9– ಮನೆ ಮಾಲೀಕ ಮಲಗಿರುವಾಗಲೇ ಹಿಂಬಾಗಿಲು ಸ್ಲೈಡಿಂಗ್ ಡೋರ್ ಮೀಟಿ ಒಳ ನುಗ್ಗಿದ ಖದೀಮರು 1.4 ಲಕ್ಷ ರೂ. ಮೌಲ್ಯದ ಚಿನ್ನ ಹಾಗೂ ಬೆಳ್ಳಿ ಆಭರಣಗಳನ್ನು ಕಳವು ಮಾಡಿರುವ ಘಟನೆ ಮೈಸೂರಿನ ಬೋಗಾದಿ ರಸ್ತೆಯಲ್ಲಿರುವ ಬ್ರಿಗೇಡ್ ಪಾಮ್ ಗ್ರೋವ್ ಅಪಾರ್ಟ್‌ಮೆಂಟ್‌ನಿಂದ ವರದಿಯಾಗಿದೆ. ಈ ಅಪಾರ್ಟ್‌ಮೆಂಟ್‌ನ 45ನೇ ಸಂಖ್ಯೆಯ ನಿವಾಸಿ, ಉದ್ಯಮಿ ಬಿ.ವಿ.ವಿಜಯಕುಮಾರ್ (43) ಅವರು ಸೆ.5ರಂದು ರಾತ್ರಿ ಮನೆಯಲ್ಲಿ ಮಲಗಿದ್ದು, ಸೆ.6ರಂದು ಬೆಳಗ್ಗೆ 7.30ಕ್ಕೆ ಎದ್ದು ನೋಡಿದಾಗ ಖದೀಮರು ಮನೆಯ ಹಿಂಬಾಗಿಲಿನ ಸ್ಲೈಡಿಂಗ್ ಡೋರ್ ಅನ್ನು ಮೀಟಿ ಒಳನುಗ್ಗಿ ರೂಮ್ ವಾಲ್‌ರೂಬ್‌ನ ಬಾಗಿಲು ತೆರೆದು 1.44 ಲಕ್ಷ ರೂ. ಮೌಲ್ಯದ ಚಿನ್ನ ಹಾಗೂ ಬೆಳ್ಳಿ ಆಭರಣಗಳನ್ನು ಕಳವು ಮಾಡಿರುವುದು ಗೊತ್ತಾಗಿದೆ. ಈ ಸಂಬಂಧ ಸರಸ್ವತಿಪುರಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

